**ಸಂಪುಟ:** 05 **ಸಂಚಿಕೆ:** 305 **ಪುಟಗಳು:** 08 **ಭಾನುವಾರ** 18 **ಜನವರಿ** 2026

www.udayavahini.in  epaper.udayavahini.in  Udaya vahini news  Udaya vahini news  Udayavahini news youtube  udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ    RNI No. KARKAN/2021/80833    9448225696    +91 8035841833    ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನಿಮ್ಮ ನಂಬಿಕೆಯಂತೆ ನೀವಾಗುತ್ತೀರಿ. ನಿಮ್ಮನ್ನು ನೀವು ಖುಷಿಗಳೆಂದು ನಂಬಿದರೆ ನೀವು ನಾಳೆ ಖುಷಿಗಳೇ ಆಗುತ್ತೀರಿ...

# ಆಶಾ ಕಾರ್ಯಕರ್ತೆಯರಿಗೆ ಗುಡ್ ನ್ಯೂಸ್: ಬಾಕಿ ವೇತನ ಪಾವತಿಗೆ ಸರ್ಕಾರ ಕ್ರಮ

**175.75 ಕೋಟಿ ರೂ. ಬಿಡುಗಡೆ**

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ರಾಷ್ಟ್ರೀಯ ಆರೋಗ್ಯ ಅಭಿಯಾನ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ ನೌಕರರು ಮತ್ತು ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರ ಶುಭ ಸುದ್ದಿ ನೀಡಿದೆ. ಕಳೆದ ಎರಡು ತಿಂಗಳಿಂದ ಸ್ಥಗಿತಗೊಂಡಿದ್ದ ವೇತನ ಮತ್ತು ಪ್ರೋತ್ಸಾಹಧನ ಬಿಡುಗಡೆಗೆ ರಾಜ್ಯ ಸರ್ಕಾರ ಚಾಲನೆ ನೀಡಿದೆ. ಕೇಂದ್ರ ಸರ್ಕಾರದಿಂದ ಲಭ್ಯವಾಗಿರುವ 175.75 ಕೋಟಿ ರೂಪಾಯಿ ಅನುದಾನವನ್ನು ಈಗಾಗಲೇ ಜಿಲ್ಲೆಗಳಿಗೆ ವರ್ಗಾಯಿಸುವ ಪ್ರಕ್ರಿಯೆ ಆರಂಭವಾಗಿದ್ದು, ಶೀಘ್ರದಲ್ಲೇ ನೌಕರರ ಕೈಸೇರಲಿದೆ. ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರು ಈ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.

175.75 ಕೋಟಿ ರೂ. ಅನುದಾನ ಬಿಡುಗಡೆಗೆ ಕ್ರಮ

ಆರೋಗ್ಯ ಕಾರ್ಯಕರ್ತರ ಹಿತದೃಷ್ಟಿಯಿಂದ ಈ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರವು ಮಹತ್ವದ ನಿರ್ಧಾರಗಳನ್ನು ಕೈಗೊಂಡಿದೆ. ಜನವರಿ 8, 2026 ರಂದು ಕೇಂದ್ರ ಸರ್ಕಾರವು 175.75 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದ್ದು, ಅದಕ್ಕೆ ರಾಜ್ಯದ ಪಾಲನ್ನು ಸೇರಿಸಿ ಪ್ರಸ್ತುತ ಜಿಲ್ಲಾ ಮಟ್ಟಕ್ಕೆ ಹಣ ರವಾನಿಸುವ ಪ್ರಕ್ರಿಯೆ ನಡೆಯುತ್ತಿದೆ. ನೌಕರರ ಸಾಮಾಜಿಕ ಭದ್ರತೆ ಮತ್ತು ಆರ್ಥಿಕ ಸುಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಇನ್ನು ಮುಂದೆ ಕೇಂದ್ರದ ಅನುದಾನ ಬರುವುದು ತಡವಾದರೂ ಸಹ ರಾಜ್ಯ ಸರ್ಕಾರವು ತನ್ನದೇ ಮೂಲಗಳಿಂದ ಆದ್ಯತೆಯ ಮೇರೆಗೆ ವೇತನ ಪಾವತಿಸಲು ತೀರ್ಮಾನಿಸಿದೆ.



ಹಣದ ಬಿಡುಗಡೆ ಸುಗಮವಾಗಿರಲು ಮತ್ತು ತಾಂತ್ರಿಕ ಅಡೆತಡೆಗಳನ್ನು ತಕ್ಷಣ ನಿವಾರಿಸಲು ಹಿರಿಯ ಅಧಿಕಾರಿಗಳ ತಂಡವು ಸಂಪೂರ್ಣ ಪ್ರಕ್ರಿಯೆಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದೆ. ಆರೋಗ್ಯ ಕಾರ್ಯಕರ್ತರು ನಮ್ಮ ವ್ಯವಸ್ಥೆಯ ಬೆನ್ನೆಲುಬಾಗಿದ್ದು, ಕೇಂದ್ರದ ಅನುದಾನದ ಸಮಯವನ್ನು ಅವಲಂಬಿಸದೆ ಇನ್ನು ಮುಂದೆ ನಿಗದಿತ ಅವಧಿಯಲ್ಲಿ ವೇತನ ಬಿಡುಗಡೆ ಮಾಡಲು ತಾವು ಬದ್ಧರಾಗಿರುವುದಾಗಿ ಎನ್‌ಹೆಚ್‌ಎಂ ಮಿಷನ್ ನಿರ್ದೇಶಕರ ಕಚೇರಿ ತಿಳಿಸಿದೆ. ಸರ್ಕಾರದ ಈ ನಿರ್ಧಾರದಿಂದಾಗಿ ಕಳೆದ ಎರಡು ತಿಂಗಳಿಂದ ವೇತನವಿಲ್ಲದೆ ಸಂಕಷ್ಟದಲ್ಲಿದ್ದ ಸಾವಿರಾರು ನರ್ಸ್‌ಗಳು, ಲ್ಯಾಬ್ ಟೆಕ್ನಿಷಿಯನ್‌ಗಳು ಮತ್ತು ಆಶಾ ಕಾರ್ಯಕರ್ತೆಯರು ನಿಟ್ಟುಸಿರು ಬಿಡುವಂತಾಗಿದೆ.

**ವೇತನ ವಿಳಂಬಕ್ಕೆ ಕಾರಣವೇನು:** ರಾಷ್ಟ್ರೀಯ ಆರೋಗ್ಯ ಅಭಿಯಾನದ ನೌಕರರ ವೇತನ ವಿಳಂಬದ ಕುರಿತು ಸ್ಪಷ್ಟನೆ ನೀಡಿರುವ ಯೋಜನಾ ನಿರ್ದೇಶಕರ ಕಚೇರಿಯು, 2025-26ರ ಹಣಕಾಸು ವರ್ಷದ ಮಧ್ಯಭಾಗದಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತಂದ ಹೊಸ SNA-SPARSH ಪಾವತಿ ವ್ಯವಸ್ಥೆಯೇ ಈ ಸಮಸ್ಯೆಗೆ ಮುಖ್ಯ ಕಾರಣ ಎಂದು ತಿಳಿಸಿದೆ. ಹಳೆಯ ವ್ಯವಸ್ಥೆಯಿಂದ ಈ ಹೊಸ ಡಿಜಿಟಲ್ ಪ್ಲಾಟ್‌ಫಾರ್ಮ್‌ಗೆ ಬದಲಾಗುವ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ತಾಂತ್ರಿಕ ಹಾಗೂ ಕಾರ್ಯವಿಧಾನದ ಮರುಹೊಂದಾಣಿಕೆಗಳು ಅನಿವಾರ್ಯವಾಗಿದ್ದವು, ಇದರಿಂದಾಗಿ ಹಣದ ಬಿಡುಗಡೆಯಲ್ಲಿ ತಾತ್ಕಾಲಿಕ ಅಡಚಣೆ ಉಂಟಾಗಿತ್ತು.

ವಿಶೇಷವಾಗಿ ಈ ಹೊಸ ನಿಯಮದ ಅಡಿಯಲ್ಲಿ ಕೇಂದ್ರ ಸರ್ಕಾರದ ಪಾಲಿನ ಅನುದಾನವು ರಾಜ್ಯಕ್ಕೆ ತಲುಪಿದ ನಂತರವೇ ಪಾವತಿ ಪ್ರಕ್ರಿಯೆಯನ್ನು ಆರಂಭಿಸಲು ಸಾಧ್ಯವಿರುವುದರಿಂದ, ನವೆಂಬರ್ ಮತ್ತು ಡಿಸೆಂಬರ್ ತಿಂಗಳ ಕೇಂದ್ರದ ಅನುದಾನ ವಿಳಂಬವಾಗಿದ್ದು ನೇರವಾಗಿ ನೌಕರರ ವೇತನ ವಿಳಂಬಕ್ಕೆ ಕಾರಣವಾಯಿತು ಎಂದು ಇಲಾಖೆ ವಿವರಿಸಿದೆ.

## 9292 ಬೋಧಕ, ಬೋಧಕೇತರ, 5 ಉಪ ಕುಲಪತಿ ಹುದ್ದೆ ಆಗಿಲ್ಲ ಭರ್ತಿ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ಉನ್ನತ ಶಿಕ್ಷಣ ಇಲಾಖೆ ಅಡಿಯಲ್ಲ 32 ಸಾರ್ವಜನಿಕ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಬೋಧಕ ಮತ್ತು ಬೋಧಕೇತರ 9292 ಹುದ್ದೆಗಳು ಖಾಲಿ ಇವೆ. ಅಷ್ಟೇ ಅಲ್ಲದೆ, 5 ಉಪ ಕುಲಪತಿ ಹುದ್ದೆಗಳು ಭರ್ತಿ ಆಗಿಲ್ಲ. ಉನ್ನತ ಶಿಕ್ಷಣ ಇಲಾಖೆ ನೀಡಿರುವ ಮಾಹಿತಿಗಳ ಪ್ರಕಾರ ವಿವಿಗಳಲ್ಲಿ ಹಲವು ಹುದ್ದೆಗಳು ನೇಮಕಾತಿಗೆ ಬಾಕಿ ಇವೆ. ಈ ಹುದ್ದೆಗಳನ್ನು ಭರ್ತಿ ಮಾಡುವ ನಿಟ್ಟಿನಲ್ಲಿ ರಾಜ್ಯದಲ್ಲಿರುವ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡುವಂತೆ ಸರ್ಕಾರದಿಂದ ಡಿಸಿಎಂ ಡಿಕೆ ಶಿವಕುಮಾರ್ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಿಲಾಗಿದೆ. ಈ ಸಮಿತಿಯು ಆರ್ಥಿಕ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ವಿಶ್ವ ವಿದ್ಯಾಲಯಗಳ ಸಂಶೋಧನೆ, ಮೂಲಸೌಲಭ್ಯ, ಅನುದಾನ, ಪಿಂಚಣಿ ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಅನುಕೂಲ ಆಗುವಂತೆ ಅಗತ್ಯ ಹುದ್ದೆಗಳ ನೇಮಕಾತಿ ಹಾಗೂ ಇತರ ಅವಶ್ಯಕತೆಗಳ ಕುರಿತಾಗಿ ಸಭೆಗಳನ್ನು ನಡೆಸುತ್ತಿದೆ.

## ಬೆಂಗಳೂರಿನಲ್ಲಿ ಲೋಕಾಯುಕ್ತ ಅಧಿಕಾರಿಗಳ ರಣಬೇಟೆ

• **ಉದಯವಾಹಿನಿ,ಬೆಂಗಳೂರು**

ಭ್ರಷ್ಟಾಚಾರದ ವಿರುದ್ಧ ಲೋಕಾಯುಕ್ತ ಅಧಿಕಾರಿಗಳು ನಡೆಸುತ್ತಿರುವ ರಣಬೇಟೆಯಲ್ಲಿ ಮತ್ತೊಂದು ದೊಡ್ಡ ಘಟನೆ ನಡೆದಿದೆ. ಬೆಂಗಳೂರಿನ ವೈಯಾಲಿಕಾವಲ್ ಪ್ರದೇಶದಲ್ಲಿ ಅಬಕಾರಿ ಇಲಾಖೆಯ ಅಧಿಕಾರಿಗಳು ಲೈಸೆನ್ಸ್ ನೀಡುವ ನೆಪದಲ್ಲಿ ಲಂಚ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ತಂಡ ದಾಳಿ ನಡೆಸಿ ಮೂವರನ್ನು ಬಲೆಗೆ ಬೀಳಿಸಿದೆ. ಅಬಕಾರಿ ಉಪ ಆಯುಕ್ತ ಜಗದೀಶ್ ನಾಯಕ್, ಸೂಪರಿಂಟೆಂಡೆಂಟ್ ತಮ್ಮಣ್ಣ ಮತ್ತು ಕಾನ್ಸ್‌ಟೇಬಲ್ ಲಕ್ಕಪ್ಪ ಅವರು ಲೈಸೆನ್ಸ್ ನೀಡಲು ಒಬ್ಬ ಅರ್ಜಿದಾರ ಲಕ್ಷ್ಮೀ ನಾರಾಯಣ ಅವರ ಬಳಿ 2.3 ಕೋಟಿ ರೂಪಾಯಿ ಡಿಮ್ಯಾಂಡ್ ಮಾಡಿದ್ದರು ಎಂದು ಆರೋಪವಿದೆ.

25 ಲಕ್ಷ ರೂಪಾಯಿ ಮೊದಲ ಕಂತು ಹಣ ಸ್ವೀಕರಿಸುವ ವೇಳೆಯೇ ಲೋಕಾಯುಕ್ತ ತಂಡ ದಾಳಿ ನಡೆಸಿತು. ದಾಳಿ ನಡೆಯುತ್ತಿದ್ದಂತೆ ಅಧಿಕಾರಿಗಳು ಎದ್ದು-ಬಿದ್ದು ಓಡಾಡಿ ಎಸ್ಕೇಪ್ ಆಗಲು ಯತ್ನಿಸಿದರು. ವಿಶೇಷವಾಗಿ ಕಾನ್ಸ್‌ಟೇಬಲ್ ಲಕ್ಕಪ್ಪ ಹಣದ ಬ್ಯಾಗ್ ಸಮೇತ ಓಡಿ ಹೋಗಲು ಪ್ರಯತ್ನಿಸಿದ್ದ. ಆದರೆ ಲೋಕಾಯುಕ್ತ ಪೊಲೀಸರು ಸಿನಿಮಾ ಸ್ಟೈಲ್ ಚೇಸ್ ನಡೆಸಿ ಅವರನ್ನು ಬಂಧಿಸಿದರು. ಹಣದ ಬ್ಯಾಗ್ ಸಹ ವಶಪಡಿಸಿಕೊಳ್ಳಲಾಗಿದೆ.

## ಚುನಾವಣೆ; ಬಿಜೆಪಿ- ಜೆಡಿಎಸ್ ಮೈತ್ರಿ ಅಭ್ಯರ್ಥಿಗಳಿಗೆ ಗೆಲುವು

• **ಉದಯವಾಹಿನಿ, ಚಿಕ್ಕಮಗಳೂರು**

ಕುತೂಹಲ ಮೂಡಿಸಿದ್ದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಚುನಾವಣೆಯಲ್ಲಿ ಮೈತ್ರಿ ಪಕ್ಷ ಅಭೂತಪೂರ್ವ ಗೆಲುವು ಸಾಧಿಸಿದೆ.

13 ನಿರ್ದೇಶಕರ ಸ್ಥಾನಗಳಲ್ಲಿ 11 ಬಿಜೆಪಿ ಹಾಗೂ 2 ಕ್ಷೇತ್ರಗಳಲ್ಲಿ ಜೆಡಿಎಸ್ ಗೆಲುವು ಸಾಧಿಸಿದೆ. ಶನಿವಾರ ಬೆಳಗ್ಗೆ ಚುನಾವಣೆ ಪ್ರಕ್ರಿಯೆ ಆರಂಭವಾಗಿದ್ದು, ಸಂಜೆ 4ರ ವರೆಗೂ ಮತದಾನ ಪ್ರಕ್ರಿಯೆ ನಡೆದು 4:30ರ ಬಳಿಕ ಮತ ಎಣಿಕೆ ಕಾರ್ಯ ನಡೆಯಿತು.

ಚಿಕ್ಕಮಗಳೂರು ತಾಲ್ಲೂಕು ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದ ಎರಡು ಸ್ಥಾನಕ್ಕೆ ಎಂ.ಎಸ್.ನಿರಂಜನ್, ಎಸ್.ಎಲ್. ಭೋಜೇಗೌಡ, ಸಿ.ಟಿ.ರವಿ ಸ್ಪರ್ಧಿಸಿದ್ದರು. ಬಲಾಢ್ಯರು ಈ ಕ್ಷೇತ್ರದಿಂದ ಸ್ಪರ್ಧಿಸಿದ್ದರಿಂದ ಡಿಸಿಸಿ ಬ್ಯಾಂಕ್ ಚುನಾವಣೆ ಬಾರಿ ಕುತೂಹಲಕ್ಕೆ ಎಡೆ ಮಾಡಿಕೊಟ್ಟಿತ್ತು. ಬಿಜೆಪಿ ಮುಖಂಡರೇ ಆಗಿದ್ದ ಎಂ.ಎಸ್.ನಿರಂಜನ್ ಈ ಕ್ಷೇತ್ರದಿಂದ ಮೈತ್ರಿ ಅಭ್ಯರ್ಥಿಗಳ ವಿರುದ್ಧವೇ ಸ್ಪರ್ಧಿಸಿದ್ದರಿಂದ ಈ ಕ್ಷೇತ್ರದ ಫಲಿತಾಂಶದ ಮೇಲೆ ಹೆಚ್ಚು ಕುತೂಹಲ ಮೂಡಿತ್ತು. ಚಿಕ್ಕಮಗಳೂರು ತಾಲ್ಲೂಕು ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದ ಎರಡು ಸ್ಥಾನಗಳಿಗೆ ಒಟ್ಟು 32 ಮತದಾರರಿದ್ದು, ಎಸ್.ಎಲ್.ಭೋಜೇಗೌಡ 30 ಮತಗಳನ್ನು ಪಡೆದು ಜಯಶೀಲರಾದರೇ, 27ಮತಗಳನ್ನು ಪಡೆಯುವ ಮೂಲಕ ಸಿ.ಟಿ.ರವಿ ಗೆಲುವು ಸಾಧಿಸಿದರು.



# ಬಳ್ಳಾರಿ ಕೇಸರಿ ಬಲಪ್ರದರ್ಶನ ಭರ್ಜರಿ

**ಗಣಿನಾಡಿನಲ್ಲಿ ಕೇಸರಿ ಘರ್ಜನೆ**

**'ಫೈರಿಂಗ್ ಘಟನೆ' ಸಿಬಿಐ ತನಿಖೆಗೆ ಆಗ್ರಹ**



"ಈ ಸರ್ಕಾರ ಗೂಂಡಾವರ್ತನೆ ಕೂಡಿದೆ. ಇದರ ಮುಖವಾಡ ಜನತೆ ಮುಂದೆ ಕಳಚಲಿದೆ. ಬಳ್ಳಾರಿ ಸೇರಿದಂತೆ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟಿದೆ. ತನ್ನ ತಪ್ಪು ತಿಳಿದುಕೊಳ್ಳದೆ ಸರ್ಕಾರ ದುಂಡಾವರ್ತನೆ ಮಾಡುತ್ತಿದೆ. ವಾಲ್ಮೀಕಿ ಹೆಸರಲ್ಲಿ ಗಲಾಟೆ ಏಕೆ, ಈ ವಿಷಯದಲ್ಲಿ ಜನಾರ್ಧನರೆಡ್ಡಿ ಕೊಲೆ ಸಂಚು ಮಾಡಿದ್ದು ಏಕೆ?

-ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ಪ್ರತಿ ಪಕ್ಷದ ನಾಯಕ

• ಉದಯವಾಹಿನಿ, ಬಳ್ಳಾರಿ

ಜ.1ರಂದು ಬಳ್ಳಾರಿಯಲ್ಲಿನ ಶಾಸಕ ಜನಾರ್ಧನರೆಡ್ಡಿ ಮನೆ ಬಳಿ ನಡೆದ ಫೈರಿಂಗ್ ಘಟನೆಯನ್ನು ಸಿಬಿಐ ತನಿಖೆಗೆ ವಹಿಸಬೇಕು ಹಾಗೂ ಶಾಸಕ ಭರತ್ ರೆಡ್ಡಿ ಮತ್ತವರ ಆಪ್ತ ಸತೀಶ್ ರೆಡ್ಡಿ ಬಂಧಿಸಬೇಕು ಎಂದು ಆಗ್ರಹಿಸಿ ಪ್ರತಿಪಕ್ಷ ಬಿಜೆಪಿ ಬಳ್ಳಾರಿಯಲ್ಲಿ ಶನಿವಾರ ಬೃಹತ್ ಪ್ರತಿಭಟನಾ ಸಮಾವೇಶ ಆಯೋಜಿಸುವ ಮೂಲಕ ಬಲ ಪ್ರದರ್ಶನ ನಡೆಸಿತು. ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಬಿಜೆಪಿ ಸರ್ಕಾರ ಇದ್ದಾಗಲೇ ವಾಲ್ಮೀಕಿ ಜಯಂತಿಗೆ ರಜೆ ಘೋಷಣೆ ಮಾಡಿದ್ದು. ವಾಲ್ಮೀಕಿ ಅಭಿವೃದ್ಧಿ ನಿಗಮ ಸ್ಥಾಪಿಸಿದ್ದು, ಮೀಸಲಾತಿ ಹೆಚ್ಚಳ ಮಾಡಿದ್ದು ಕೂಡಾ ಬಿಜೆಪಿ. ಮುಖ್ಯ ಮಂತ್ರಿ ಸಿದ್ದರಾಮಯ್ಯನವರೇ ವಾಲ್ಮೀಕಿ ಸಮುದಾಯಕ್ಕೆ ನಿಮ್ಮ ಸರ್ಕಾರದ ಕೊಡುಗೆ ಏನು ಎಂದು ಪ್ರಶ್ನಿಸಿದರು. ಕಾಂಗ್ರೆಸ್ ಸರ್ಕಾರ ಹಿಂದುಳಿದ ವರ್ಗದ ವಿರೋಧಿಯಾಗಿದೆ. ರಾಜ್ಯದಲ್ಲಿನ ಪೊಲೀಸ್ ವ್ಯವಸ್ಥ ಕುಸಿದಿದೆ. ಠಾಣೆಗಳು ಕಾಂಗ್ರೆಸ್ ಪಕ್ಷದ ಕಚೇರಿಗಳಾಗಿವೆ ಎಂದು ಆರೋಪಿಸಿದ ವಿಜಯೇಂದ್ರ, ಬಳ್ಳಾರಿ ಘಟನೆ ಖಂಡಿಸಿ ಶ್ರೀ ರಾಮುಲು ಮತ್ತು ಜನಾರ್ಧನರೆಡ್ಡಿ ಅವರು ಬಳ್ಳಾರಿಯಿಂದ ಬೆಂಗಳೂರಿಗೆಪಾದಯಾತ್ರೆ ಮಾಡಲು ಬಯಸಿದ್ದಾರೆ. ಈ ವಿಷಯವನ್ನು ಕೇಂದ್ರದ ನಾಯಕರಿಗೆ ತಿಳಿಸಿ ಮುಂದಿನ ದಿನದಲ್ಲಿ ಈ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ರಾಜ್ಯದಲ್ಲಿ ಗೃಹ ಇಲಾಖೆ ಸಚಿವರು ಕೇವಲ ವಿಧಾನ ಸಭೆಯಲ್ಲಿ ಉತ್ತರ ನೀಡಲು ಮಾತ್ರ ಇದ್ದಾರೆ. ಅವರಿಂದ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಗುಂಡು ಹಾರಿಸಿದ್ದು ಕಾಂಗ್ರೆಸ್ ನವರೆಂದು ಅವರ ಕಡೆಯವರ ಬಂಧನ ಇಲ್ಲ. ಅದೇನಾದ್ರೂ ಬಿಜೆಪಿಯವರ ಕಡೆಯಿಂದ ಆಗಿದ್ದರೆ ಈ ವೇಳೆಗೆ ನೂರಾರು ಜನರ ಬಂಧನವಾಗುತ್ತಿತ್ತು. ಕಾಂಗ್ರೆಸ್ ನಿಂದ ನಮಗ ನ್ಯಾಯದ ನಿರೀಕ್ಷೆ ಇಲ್ಲ. ಪೊಲೀಸರೂ ನ್ಯಾಯ ಒದಗಿಸಲು ವಿಫಲರಾಗಿದ್ದಾರೆ. ಬಳ್ಳಾರಿಯಲ್ಲಿ ಅಭಿವೃದ್ಧಿ ಇಲ್ಲ. ಬಳ್ಳಾರಿಯನ್ನೇ ಸುಡುತ್ತೇನೆ ಎಂದ ಶಾಸಕನಿಗೆ ಡಿಸಿಎಂ ಡಿಕೆಶಿ ಪೂರ್ತಿ ಬೆಂಬಲ ಎನ್ನುತ್ತಾರೆ.

**ಕಾಂಗ್ರೆಸ್ ಸರ್ಕಾರ ರಾಜ್ಯವನ್ನು ಅರಾಜಕತೆಯತ್ತ ತಳ್ಳುತ್ತಿದೆ**

**CID ತನಿಖೆ ನಂಬಲ್ಲ, ಸಿಬಿಐಗೆ ವಹಿಸಿ**

### ಆರ್ ಅಶೋಕ್ ಪೋಸ್ಟ್

ರಾಜಶೇಖರ್ ರೆಡ್ಡಿ ತಾಯಿ, ಅವರ ಸಹೋದರ, ಮತ್ತು ಸಹೋದರಿ ಸೇರಿದಂತೆ ಕುಟುಂಬದ ಸದಸ್ಯರನ್ನು ಭೇಟಿ ಮಾಡಿ ಸಾಂತ್ವನ ಹೇಳಿದ ಬಿಜೆಪಿ ನಿಯೋಗ, ರಾಜಶೇಖರ್ ಅವರ ಸಾವಿಗೆ ನ್ಯಾಯ ಒದಗಿಸುವ ಆಶ್ವಾಸನೆಯನ್ನು ನೀಡಿತು'' ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್ ಅಶೋಕ್ ಅವರು ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿಕೊಂಡಿದ್ದಾರೆ. 'ಬಳ್ಳಾರಿಯಲ್ಲಿ ಕಾಂಗ್ರೆಸ್ ಪಕ್ಷದ ಗೂಂಡಾಗಿರಿಗೆ ಬಲಿಯಾದ ರಾಜಶೇಖರ ರೆಡ್ಡಿ ಅವರ ನಿವಾಸಕ್ಕೆ ಭೇಟಿ ನೀಡಿ, ಶೋಕತಪ್ತ ಕುಟುಂಬದವರಿಗೆ ಸಾಂತ್ವನ ಹೇಳಿ, ಬಿಜೆಪಿ ವತಿಯಿಂದ 10 ಲಕ್ಷ ರೂ.ಗಳ ಆರ್ಥಿಕ ನೆರವು ನೀಡಲಾಯಿತು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ ಎಂಬುದಕ್ಕೆ ಈ ರಕ್ತಸಿಕ್ತ ಘಟನೆಯೇ ಸಾಕ್ಷಿ. ಸಹಾಯಧನ ಆ ನೊಂದ ಕುಟುಂಬಕ್ಕೆ ತಾತ್ಕಾಲಿಕ ಪರಿಹಾರ ನೀಡಬಹುದೇ ಹೊರತು ಕಳೆದುಕೊಂಡ ಜೀವವನ್ನು ಮರಳಿ ತರಲಾರದು. ಆ ಸಂತ್ರಸ್ತ ಕುಟುಂಬಕ್ಕೆ ಸಿಗಬೇಕಾದ ನಿಜವಾದ ನ್ಯಾಯವೆಂದರೆ ಈ ಪ್ರಕರಣದ ನಿಷ್ಪಕ್ಷಪಾತ ತನಿಖೆ. ಸ್ಥಳೀಯ ಪೊಲೀಸರ ಮೇಲೆ ಸರ್ಕಾರದ ಒತ್ತಡವಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಆದ್ದರಿಂದ ಈ ಪ್ರಕರಣದ ಸಮಗ್ರ ಸತ್ಯಾಂಶ ಹೊರಬರಲು ಕೂಡಲೇ ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂಬುದು ನಮ್ಮ ಆಗ್ರಹ, ತಪ್ಪಿತಸ್ಥರು ಎಷ್ಟೇ ಪ್ರಭಾವಿಯಾಗಿದ್ದರೂ ಅವರಿಗೆ ಶಿಕ್ಷೆಯಾಗುವವರೆಗೂ ನಾವು ವಿಶ್ರಮಿಸುವುದಿಲ್ಲ ಎಂದು ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

### 10 ಲಕ್ಷ ಪರಿಹಾರ ನೀಡಿದ ಬಿಜೆಪಿ

ಬ್ಯಾನರ್ ಗಲಾಟೆಯಲ್ಲಿ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಕುಟುಂಬಕ್ಕೆ ಬಿಜೆಪಿ ನಿಯೋಗ 10 ಲಕ್ಷ ಪರಿಹಾರ ನೀಡಿದೆ.ರಾಜಶೇಖರ ರೆಡ್ಡಿ ನಿವಾಸಕ್ಕೆ ಶನಿವಾರ ಬಿಜೆಪಿ ರಾಜ್ಯಾಧ್ಯಕ್ಷ ಬಿವೈವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್ ಅಶೋಕ್, ಪರಿಷತ್ ಪ್ರತಿಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ, ಸಂಸದ ಗೋವಿಂದ ಕಾರಜೋಳ, ಶಾಸಕ ಜನಾರ್ದನ ರೆಡ್ಡಿ ಹಾಗೂ ಮಾಜಿ ಸಚಿವ ಬಿ ಶ್ರೀರಾಮುಲು ಸೇರಿದಂತೆ ಬಿಜೆಪಿ ಪ್ರಮುಖರು ರಾಜಶೇಖರ ರೆಡ್ಡಿ ಅವರ ತಾಯಿ ಅವರಿಗೆ ಹತ್ತು ಲಕ್ಷ ನಗದು ಇರುವ ಚೆಕ್ಕನ್ನು ಹಸ್ತಾಂತರ ಮಾಡಿದರು.

### ಬಡವರಿಗೆ ಒಂದೇ ಒಂದು ಮನೆ ಕಟ್ಟಿಸಿ ಕೊಟ್ಟಿಲ್ಲ

ಬಿಜೆಪಿ ಸರ್ಕಾರದ ಅವಧಿಯಲ್ಲಿ ಕರ್ನಾಟಕ ಸ್ಲಮ್ ಬೋರ್ಡ್‌ನಿಂದ ಬಡವರಿಗೆ ಒಂದೇ ಒಂದು ಮನೆ ಕಟ್ಟಿಸಿ ಕೊಟ್ಟಿದ್ದು ಸಾಬೀತುಪಡಿಸಿದ್ದಲ್ಲಿ ನಾನು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ. ರಾಜಕೀಯವನ್ನೇ ತ್ಯಜಿಸುತ್ತೇನೆ ಎಂದು ವಸತಿ ಸಚಿವ ಜಮೀರ್ ಅಹ್ಮದ್ ಬಿಜೆಪಿ ನಾಯಕರಿಗೆ ಸವಾಲೆಸಿದಿದ್ದಾರೆ.ನಗರದ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಅಧಿಕಾರದಲ್ಲಿದ್ದಾಗ ಬಿಜೆಪಿಯವರಿಗೆ ಗ್ಯಾರಂಟಿ ಯೋಜನೆಗಳ ಒತ್ತಡವೂ ಇರಲಿಲ್ಲ. ಆದರೂ, ಅವರು ಬಡವರಿಗೆ ಒಂದೇ ಮನೆ ಕೊಟ್ಟಿಸಿ ಕೊಟ್ಟಿಲ್ಲ. ಅವರಿಗೆ ಬಡವರ ಬಗ್ಗೆ ಕಾಳಜಿ ಇಲ್ಲ. ನಾವು ಗ್ಯಾರಂಟಿ ಯೋಜನೆ ನಡುವೆ ಬಡವರಿಗೆ ಮನೆ ಕಟ್ಟಿಸಿ ಕೊಡುತ್ತಿದ್ದೇವೆ ಎಂದರು. 2024ರಲ್ಲಿ ಬೋರ್ಡ್‌ನಿಂದ 36 ಸಾವಿರ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಿದ್ದೇವೆ. ಇದೀಗ 42 ಸಾವಿರ ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರ ಮಾಡಲಿದ್ದೇವೆ. ಪ್ರತಿ ಜಿಲ್ಲೆಗೆ ಎಷ್ಟು ಮನೆಗಳನ್ನು ಕೊಟ್ಟಿದ್ದೇವೆ ಎಂಬುದರ ಬಗ್ಗೆ ಡೇಟಾ ಇಟ್ಟಿದ್ದೇವೆ. ಈ ಬಗ್ಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಪರಿಶೀಲಿಸಬಹುದು. ಅವರಿಗೆ ನೇರವಾಗಿ ಅಥವಾ ವಿಡಿಯೋ ಕಾನ್ಫರೆನ್ಸ್ ಮೂಲಕ ತೋರಿಸಲು ನಾವು ಸಿದ್ಧರಿದ್ದೇವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



"ಬಳ್ಳಾರಿಯಲ್ಲಿ ರಾಮುಲು ವೇಗ ಮತ್ತು ಜನಾರ್ಧನರೆಡ್ಡಿ ರೆಡ್ಡಿ ಶಕ್ತಿ ಒಂದಾಗಿರುವುದನ್ನು ಸಹಿಸದೇ ಫೈರಿಂಗ್ ಗಲಾಟೆ ನಡೆದಿದೆ. ರಾಜ್ಯದಲ್ಲಿ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೂ ಭದ್ರತೆ ಇಲ್ಲದಂತಾಗಿದೆ. ಕಾರ್ಯಕರ್ತರೇ ಕಾಂಗ್ರೆಸ್ ವಿರುದ್ಧ ನಾವು ಸಡ್ಡು ಹೊಡೆದು ಸಂಘರ್ಷಕ್ಕೆ ಇಳಿಯಬೇಕಿದೆ

-ಬಸವರಾಜ ಬೊಮ್ಮಾಯಿ, ಸಂಸದ

### ಸಮುದಾಯಕ್ಕೆ ನಿಮ್ಮ ಕೊಡುಗೆ ಏನು



ವಾಲ್ಮೀಕಿ ಸಮುದಾಯದ ಪರವಾಗಿ ನಿಮ್ಮ ಕೊಡುಗೆ ಏನು ಎಂಬುದನ್ನು ಸ್ಪಷ್ಟಪಡಿಸಬೇಕೆಂದು ಕಾಂಗ್ರೆಸ್ ಸರ್ಕಾರಕ್ಕೆ ವಿಜಯೇಂದ್ರ ಆಗ್ರಹಿಸಿದರು. ಶ್ರೀರಾಮುಲು ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಅವಧಿಯಲ್ಲಿ ವಾಲ್ಮೀಕಿ ಸಮುದಾಯಕ್ಕೆ ಇದ್ದ ಶೇ.3 ರಷ್ಟು ಮೀಸಲಾತಿಯನ್ನು ಶೇ.7ಕ್ಕೆ ಹೆಚ್ಚಿಸಲಾಯಿತು ಎಂದು ಹೇಳಿದರು. ಶ್ರೀರಾಮುಲು ಹಾಗೂ ಜನಾರ್ದನ ರೆಡ್ಡಿ ಅವರು ಕೈಗೊಂಡಿರುವ ಪಾದಯಾತ್ರೆಗೆ ಯಾವುದೇ ರೀತಿಯ ವಿರೋಧ ಇಲ್ಲ. ಈ ಹೋರಾಟ ಯಾರ ವಿರುದ್ಧವೂ ಅಲ್ಲ. ಇದು ನ್ಯಾಯಕ್ಕಾಗಿ ನಡೆಯುತ್ತಿರುವ ಹೋರಾಟ. ಬಳ್ಳಾರಿಯಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದ್ದು, ಅಪರಾಧಿಗಳಿಗೆ ಸರ್ಕಾರವೇ ರಕ್ಷಣೆಯಾಗಿ ನಿಂತಿದೆ. ರಾಜಕೀಯ ದ್ವೇಷದ ಕಾರಣದಿಂದಲೇ ಗಲಾಟೆ, ಹಿಂಸಾಚಾರ, ಫೈರಿಂಗ್ ಪ್ರಕರಣಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಕಿಡಿಕಾರಿದರು.

# ನಗರದಲ್ಲಿ 5 ವರ್ಷಗಳಲ್ಲಿ 1097 ಬಿಎಂಟಿಸಿ ಬಸ್‌ಗಳ ಅಪಘಾತ

■ ಚಾಲಕರ ಮೇಲಿನ ಒತ್ತಡದಿಂದ ಪ್ರಯಾಣಿಕರ ಸುರಕ್ಷತೆ ಆತಂಕ ■ ಬಸ್‌ಗಳ ಅಪಘಾತ ನಿಯಂತ್ರಣಕ್ಕೆ ಏನು ಕ್ರಮ

• **ಉದಯವಾಹಿನಿ, ಬೆಂಗಳೂರು**

ನಗರದಲ್ಲಿ ಬಿಎಂಟಿಸಿ ಬಸ್‌ಗಳ ಅಪಘಾತಕ್ಕೆ ಹಲವು ಮಂದಿ ಬಲಿಯಾಗಿದ್ದಾರೆ. ಈ ಕಾರಣಕ್ಕಾಗಿ ಬಿಎಂಟಿಸಿಯನ್ನು ಕಿಲ್ಲರ್ ಬಿಎಂಟಿಸಿ ಬಸ್ ಎಂದು ಕರೆಯಲಾಗುತ್ತಿದೆ. ಅತಿವೇಗದ ಹಾಗೂ ಅಜಾಗರೂಕತೆಯ ಚಾಲನೆಯಿಂದಾಗಿ ಬಿಎಂಟಿಸಿ ಬಸ್‌ಗಳ ಅಪಘಾತಗಳು ಹೆಚ್ಚಾಗಿ ನಡೆಯುತ್ತಿವೆ. ಸಾರಿಗೆ ಇಲಾಖೆ ನೀಡುವ ಮಾಹಿತಿಯ ಪ್ರಕಾರ, ಕಳೆದ ಐದು ವರ್ಷಗಳಲ್ಲಿ 1097 ಬಿಎಂಟಿಸಿ ಬಸ್ ಗಳ ಅಪಘಾತ ಸಂಭವಿಸಿದೆ.

**2025 ರಲ್ಲಿ 38 ಮಂದಿ ಮೃತ**

ಕೆಲ ದಿನಗಳ ಹಿಂದೆ ಬೆಂಗಳೂರಿ ಕೆ ಆರ್ ಸರ್ಕಲ್ ಬಳಿ ಅಪಘಾತ ನಡೆದಿತ್ತು. ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಚಾಲಕನ ನಿರ್ಲಕ್ಷ್ಯದಿಂದ ಖಾಸಗಿ ಬಸ್ ಗೆ ಡಿಕ್ಕಿ ಹೊಡೆದಿತ್ತು. ಆದರೆ ಈ ಘಟನೆಯಲ್ಲಿ ಪ್ರಯಾಣಿಕರಿಗೆ ಗಂಭೀರ ಗಾಯ ಆಗಿರಲಿಲ್ಲ. 2024 ರಲ್ಲಿ ಬಿಎಂಟಿಸಿ ಬಸ್ ಅಪಘಾತಕ್ಕೆ 42 ಮಂದಿ ಮೃತಪಟ್ಟಿದ್ದರು ಹಾಗೂ 155 ಜನರು ಗಾಯಗೊಂಡಿದ್ದರು. 2025 ರಲ್ಲಿ ನಡೆದ ಅಪಘಾತದಲ್ಲಿ 38 ಮಂದಿ ಮೃತಪಟ್ಟದ್ದಾರೆ ಹಾಗೂ 91 ಮಂದಿ ಗಾಯಗೊಂಡಿದ್ದಾರೆ.

**ಯಾವ ಮಾದರಿಯ ಬಸ್‌ಗಳ**





**ಅಪಘಾತ ಹೆಚ್ಚು:** ಬಿಎಂಟಿಸಿ ಸಂಸ್ಥೆಯ 1097 ಬಸ್ ಗಳ ಪೈಕಿ 853 ಸಾಮಾನ್ಯ ಬಸ್‌ಗಳು ಅಪಘಾತಕ್ಕೊಳಗಾಗಿವೆ. ಇನ್ನು 75 ವೋಲ್ವೋ ಬಸ್‌ಗಳು ಐದು ವರ್ಷಗಳಲ್ಲಿ ಅಪಘಾತಕ್ಕಿಡಾಗಿವೆ. ಇನ್ನು ವಿದ್ಯುತ್ ಚಾಲಿತ ಬಸ್ ಗಳ ಸಂಖ್ಯೆ 169. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಪ್ರಸ್ತುತ 7051 ಬಸ್ ಗಳು ಕಾರ್ಯಾಚರಣೆ ಮಾಡುತ್ತಿವೆ. ಈ ಪೈಕಿ 5361 ಡಿಸೇಲ್ ಬಸ್ ಗಳು ಹಾಗೂ 1690 ವಿದ್ಯುತ್ ಚಾಲಿತ ಬಸ್‌ಗಳು ಇವೆ. 2024-25 ನೇ ಸಾಲಿನಲ್ಲಿ ನಾನ್ ಎ ಸಿ ಬಸ್ ಗಳಲ್ಲಿ 38.74 ಲಕ್ಷ ಪ್ರಯಾಣಿಕರು ಪ್ರಯಾಣ ಮಾಡಿದ್ದಾರೆ. ಎಸಿ ಬಸ್‌ಗಳಲ್ಲಿ 1.50 ಲಕ್ಷ ಮಂದಿ ಪ್ರಯಾಣ ಮಾಡಿದ್ದಾರೆ. ಒಟ್ಟು ಒಂದು ವರ್ಷದಲ್ಲಿ 40.24 ಲಕ್ಷ ಪ್ರಯಾಣಿಕರು ಬಿಎಂಟಿಸಿಯಲ್ಲಿ ಪ್ರಯಾಣ ಮಾಡಿದ್ದಾರೆ.

ಸಂಸ್ಥೆಯಲ್ಲಿ ಪ್ರತಿ ವರ್ಷ ಜನವರಿ ಮಾಹೆಯಲ್ಲಿ ರಸ್ತೆ ಸುರಕ್ಷತಾ ಸಪ್ತಾಹ/ಮಾಹೆಯನ್ನು ಆಚರಿಸುವ ಮೂಲಕ ಚಾಲನಾ ಸಿಬ್ಬಂದಿಗಳಿಗೆ ರಸ್ತೆ ಸುರಕ್ಷತೆ ಕುರಿತು ಬ್ಯಾನರ್‌ಗಳನ್ನು ಅಳವಡಿಸುವುದು ಮತ್ತು ಕರಪತ್ರ ಹಾಗೂ ಬ್ಯಾಡಗಳನ್ನು ವಿತರಿಸುವ ಮೂಲಕ ಅರಿವು ಮೂಡಿಸಲಾಗುತ್ತಿದ್ದು ಹಾಗೂ ಪೊಲೀಸ್ ಅಧಿಕಾರಿಗಳನ್ನು/ ಸಾರಿಗೆ ಇಲಾಖಾ ಅಧಿಕಾರಿಗಳನ್ನು ಹಾಗೂ ಸರ್ಕಾರಿ ವೈದ್ಯರು ಮತ್ತು ಸಂಬಂಧಿಸಿದ ಸಂಪನ್ಮೂಲ ಅಧಿಕಾರಿಗಳನ್ನು ಘಟಕಗಳಿಗೆ ಆಹ್ವಾನಿಸಿ ರಸ್ತೆ ಸುರಕ್ಷತಾ ಮಾಹೆಯ ಮಹತ್ವದ ಬಗ್ಗೆ ಹಾಗೂ ಸುರಕ್ಷತಾ ಚಾಲನಾ ಕೌಶಲ್ಯದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

### ಚಾಲಕರ ಮೇಲಿನ ಒತ್ತಡ ಕಡಿಮೆಗೊಳಿಸಲು ಏನು ಕ್ರಮ

ಕಾಲಕಾಲಕ್ಕೆ ಚಾಲಕರಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಸಂಚಾರ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಸಂಸ್ಥೆಯ ಸಿಬ್ಬಂದಿಗಳಿಗೆ ಹಾಗೂ ವಿದ್ಯುತ್ ಚಾಲಿತ ವಾಹನಗಳ ಚಾಲಕರುಗಳಿಗೆ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸುರಕ್ಷಾ ಚಾಲನೆ ಹಾಗೂ ಸಂಚಾರ ನಿಯಮ ಪಾಲನೆ ಕುರಿತು ತರಬೇತಿ ನೀಡಲಾಗುತ್ತಿದೆ. ಅಲ್ಲದೆ ವಲಯಮಟ್ಟದಲ್ಲಿ ವಾರದಲ್ಲಿ ಒಂದು ದಿನ ಸುರಕ್ಷಾ ಚಾಲನೆ ಕುರಿತು ಚಾಲನಾ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಸಿಬ್ಬಂದಿಗಳ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ಕ್ರೀಡೆ, ಸಾಂಸ್ಕೃತಿಕ ಹಾಗೂ ಇತರೆ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

| ಯಾವ ವರ್ಷದಲ್ಲಿ ಎಷ್ಟು | |
|---|---|
| 2020-21 | 98 |
| 2022-23 | 158 |
| 2023-24 | 237 |
| 2024-25 | 199 |
| 2025-26 | 158 |

**ಈ ದಿನದ ದರ** ಪೆಟ್ರೋಲ್: 102.96 ₹/L | ಡೀಸೆಲ್ : 90.99 ₹/L | ಬಂಗಾರ: ₹14,378/Gram24ct ₹13,180/Gram22ct | ಬೆಳ್ಳಿ: ₹295.00/Gram

# ಸದ್ಯಕ್ಕಿಲ್ಲ ಮೆಟ್ರೊ ಪ್ರಯಾಣ ದರ ಏರಿಕೆ

• ಉದಯವಾಹಿನಿ, ಬೆಂಗಳೂರು

ಬಿಎಂಆರ್‌ಸಿಎಲ್ ಪ್ರತಿ ವರ್ಷ ಶೇ 5ರಷ್ಟು ಪ್ರಯಾಣದರ ಹೆಚ್ಚಳ ಮಾಡಬಹುದು ಎಂದು ದರ ನಿಗದಿ ಸಮಿತಿ ಶಿಫಾರಸು ಮಾಡಿದ್ದರೂ ಸದ್ಯಕ್ಕೆ ಮೆಟ್ರೊ ಪ್ರಯಾಣ ದರ ಏರಿಸುವ ಚಿಂತನೆ ಇಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಇಂಧನ ವೆಚ್ಚ, ಸಿಬ್ಬಂದಿ ವೆಚ್ಚ, ನಿರ್ವಹಣೆ ವೆಚ್ಚ, ಇತರ ವೆಚ್ಚಗಳನ್ನು ಹಿಂದಿನ ವರ್ಷಕ್ಕೆ ಹೋಲಿಸಿ ಎಷ್ಟು ಹೆಚ್ಚಾಗಿದೆ ಎಂಬುದನ್ನು ಲೆಕ್ಕಾಚಾರ ಮಾಡಿ ಅದರ ಸರಾಸರಿಯಂತೆ ಪ್ರಯಾಣ ದರ ಹೆಚ್ಚಿಸಬೇಕು. ಇಲ್ಲವೇ ವಾರ್ಷಿಕ ಶೇ 5ರಷ್ಟು ಹೆಚ್ಚಳ ಮಾಡಬೇಕು. ಈ ಎರಡರಲ್ಲಿ ಕಡಿಮೆ ಯಾವುದೋ ಅದನ್ನೇ ಪಾಲಿಸಬೇಕು ಎಂದು ದರ ನಿಗದಿ ಸಮಿತಿ ತನ್ನ ವರದಿಯಲ್ಲಿ ತಿಳಿಸಿತ್ತು.

ದರ ನಿಗದಿ ಸಮಿತಿ ಶಿಫಾರಸು ಮಾಡಿರುವುದು ನಿಜ. ಆದರೆ, ದರ ಏರಿಕೆಗೆ ಸಂಬಂಧಿಸಿದ ಯಾವುದೇ ಪ್ರಕ್ರಿಯೆಯನ್ನು ಆರಂಭಿಸಿಲ್ಲ. ಸದ್ಯಕ್ಕೆ ಏರಿಕೆ ಮಾಡುವುದಿಲ್ಲ. ಮುಂದೆ ಏರಿಕೆ ಮಾಡಲು ನಿರ್ಧರಿಸಿದಾಗ ಮಾಹಿತಿ ನೀಡಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

**ಶಿಫಾರಸು ಪಾಲನೆಯಾಗಿರಲಿಲ್ಲ:** ದರ ಹೆಚ್ಚಳಕ್ಕಾಗಿ ಸಮಿತಿ ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ರಾಜ್ಯ ಸರ್ಕಾರವನ್ನು ಬಿಎಂಆರ್‌ಸಿಎಲ್ 2024ರಲ್ಲಿ ಕೋರಿತ್ತು. ಅದರಂತೆ ರಾಜ್ಯದ ಮೂಲಸೌಕರ್ಯ ಇಲಾಖೆಯು ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಕೇಂದ್ರ ಸರ್ಕಾರವು ದರ ನಿಗದಿ ಸಮಿತಿಯನ್ನು ನೇಮಕ ಮಾಡಿತ್ತು. ಸಮಿತಿಯು ಸಾರ್ವಜನಿಕರಿಂದ, ಬಿಎಂಆರ್‌ಸಿಎಲ್ ಅಧಿಕಾರಿಗಳಿಂದ, ತಜ್ಞರಿಂದ ಅಭಿಪ್ರಾಯ ಸಂಗ್ರಹಿಸಿತ್ತು.

2017ರಲ್ಲಿ ಕೊನೇ ಬಾರಿ ದರ ಪರಿಷ್ಕರಣೆ ಮಾಡಲಾಗಿತ್ತು.


ಉದಯವಾಹಿನಿ ಚಿತ್ರ

ಆಗ ಮೊದಲ ಎರಡು ಕಿ.ಮೀ.ಗೆ ಕನಿಷ್ಠ ದರ 10, ಗರಿಷ್ಠ ಅಂದರೆ 22 ಕಿ.ಮೀ.ಯಿಂದ 30 ಕಿ.ಮೀ.ವರೆಗೆ 60 ದರ ನಿಗದಿಯಾಗಿತ್ತು. ಅದಾಗಿ 7.5 ವರ್ಷಗಳಾಗಿರುವುದರಿಂದ ವೇತನ ಹೆಚ್ಚಳ, ಸಾಮಗ್ರಿಗಳ ಬೆಲೆ ಹೆಚ್ಚಳ, ಸಾಲ ಹೆಚ್ಚಳ ಹೀಗೆ ಎಲ್ಲವೂ ಅಧಿಕವಾಗಿರುವುದರಿಂದ ಶೇ 105.5ರಷ್ಟು ಹೆಚ್ಚಳ ಮಾಡಬೇಕು ಎಂದು ಬಿಎಂಆರ್‌ಸಿಎಲ್ ಬೇಡಿಕೆ ಮುಂದಿಟ್ಟಿತ್ತು.

12 ಸ್ಲ್ಯಾಬ್ ಮಾಡಬೇಕು. ಕನಿಷ್ಠದರ 21 ಹಾಗೂ ಗರಿಷ್ಠ ದರ 123ಕ್ಕೆ ಏರಿಸಬೇಕು ಎಂದು ತಿಳಿಸಿತ್ತು. ದೇಶದ ವಿವಿಧ ಮೆಟ್ರೊಗಳಲ್ಲಿ ಇರುವ ದರ, ವಿದೇಶಗಳಲ್ಲಿ ಇರುವ ದರ ಪರಿಷ್ಕರಣೆ ವ್ಯವಸ್ಥೆ ಎಲ್ಲವನ್ನೂ ಅಧ್ಯಯನ ನಡೆಸಿದ ದರ ನಿಗದಿ ಸಮಿತಿಯು 12 ಸ್ಲ್ಯಾಬ್‌ಗಳ ಬದಲು 10 ಸ್ಲ್ಯಾಬ್‌ಗಳನ್ನು ಶಿಫಾರಸು ಮಾಡಿತ್ತು. ಅಲ್ಲದೇ ಕನಿಷ್ಠ ದರವನ್ನು 10 ಇರುವುದನ್ನು ಹಾಗೇ ಉಳಿಸಿಕೊಂಡು ಗರಿಷ್ಠ ದರವನ್ನು 90ಕ್ಕೆ ನಿಗದಿ ಮಾಡಿತ್ತು. ಶೇ 51.55ರಷ್ಟು ಹೆಚ್ಚಳ ಮಾಡಲು ಶಿಫಾರಸು ಮಾಡಿತ್ತು. ಬಿಎಂಆರ್‌ಸಿಎಲ್ ಆಡಳಿತ ಮಂಡಳಿಯು ಫೆ.9ರಂದು ಪರಿಷ್ಕೃತ ದರ ಜಾರಿಗೆ ತರುವಾಗ ಕೆಲವು ಶಿಫಾರಸುಗಳನ್ನು ಪಾಲಿಸಿರಲಿಲ್ಲ. ಶೇ 51.55 ರಷ್ಟು ಹೆಚ್ಚಳದ ಶಿಫಾರಸಿನ ಬದಲು ಶೇ 100ಕ್ಕೂ ಅಧಿಕ ದರ ವಿಧಿಸಿತ್ತು. ಪ್ರಯಾಣಿಕರಿಂದ ಪ್ರತಿಭಟನೆ ಎದುರಾದ ಬಳಿಕ ಅಧಿಕಾರಿಗಳು ಎಚ್ಚೆತ್ತುಕೊಂಡಿದ್ದರು.

ದುಪ್ಪಟ್ಟು ಇರುವಲ್ಲಿ ದರ ಇಳಿಕೆ ಮಾಡಲು ಕ್ರಮ ಕೈಗೊಂಡಿತ್ತು. ಕೊನೆಗೆ ಗರಿಷ್ಠ ದರ ಹೆಚ್ಚಳವನ್ನು ಶೇ 71.5ಕ್ಕೆ ಇಳಿಸಿತ್ತು. ಒಂದು ವರ್ಷ ಪೂರ್ಣಗೊಂಡ ಕೂಡಲೇ ಮತ್ತೆ ದರ ಹೆಚ್ಚಿಸಿದರೆ ಪ್ರಯಾಣಿಕರಿಂದ ವಿರೋಧ ವ್ಯಕ್ತವಾಗಬಹುದು ಎಂಬ ಕಾರಣಕ್ಕೆ ಕಾದು ನೋಡುವ ತಂತ್ರವನ್ನು ಬಿಎಂಆರ್‌ಸಿಎಲ್ ಅನುಸರಿಸುತ್ತಿದೆ. ಒಂದೆರಡು ತಿಂಗಳ ಬಳಿಕ ಮತ್ತೆ ದರ ಏರಿಕೆಗೆ ಮುಂದಾಗಬಹುದು ಎಂದು ಬಿಎಂಆರ್‌ಸಿಎಲ್ ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು.

## 16.23 ಎಕರೆ ಒತ್ತುವರಿ ತೆರವು; ಜಿಲಾಡಳಿತ

• ಉದಯವಾಹಿನಿ, ಬೆಂಗಳೂರು

ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ 80.90 ಕೋಟಿ ಅಂದಾಜು ಮೌಲ್ಯದ 16.23 ಎಕರೆ ಸರ್ಕಾರಿ ಜಮೀನನ್ನು ಶನಿವಾರ ತೆರವುಗೊಳಿಸಿ, ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಜಗದೀಶ ತಿಳಿಸಿದ್ದಾರೆ. ವಿವಿಧ ತಾಲ್ಲೂಕುಗಳ ತಹಶೀಲ್ದಾರ್ ತಮ್ಮ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ಸ್ಮಶಾನ, ಗುಂಡುತೋಪು, ಚರಂಡಿ, ರಾಜಕಾಲುವೆ, ಸರ್ಕಾರಿ ಕೆರೆ, ಗೋಮಾಳ ಮತ್ತು ಹಿಡುವಳಿ ಜಾಗಗಳ ತೆರವು ಕಾರ್ಯಾಚರಣೆ ಕೈಗೊಂಡರು.

ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಕೊಪ್ಪ ಗ್ರಾಮದಲ್ಲಿ 7.21 ಎಕರೆ ಗೋಮಾಳ, ಕಸಬಾ ಹೋಬಳಿಯ ಮರಸೂರು ಗ್ರಾಮದಲ್ಲಿ 1.02 ಗುಂಟೆ ಚರಂಡಿ ಜಾಗ, ಅತ್ತಿಬೆಲೆ ಹೋಬಳಿಯ ಇಂಡಬೆಲೆ ಗ್ರಾಮದಲ್ಲಿ 30 ಗುಂಟೆ ರಾಜಕಾಲುವೆ, ಯಡವನಹಳ್ಳಿ ಗ್ರಾಮದಲ್ಲಿ 0.06 ಗುಂಟೆ ಸರ್ಕಾರಿ ಜಾಗದಲ್ಲಿನ ಒತ್ತುವರಿ ತೆರವುಗೊಳಿಸಲಾಗಿದೆ. ಸರ್ಜಾಪುರ ಹೋಬಳಿ ದೊಮ್ಮಸಂದ್ರ ತಿಗಳಚೌಡೇನಹಳ್ಳಿಯಲ್ಲಿ 10 ಗುಂಟೆ ರಾಜಕಾಲುವೆ, ಅಡಿಗಾರಕಲ್ಲಹಳ್ಳಿಯಲ್ಲಿ 20 ಗುಂಟೆ ಕೆರೆ, ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಬೆಟ್ಟಹಳ್ಳಿ ಗ್ರಾಮದಲ್ಲಿ 5.10 ಎಕರೆ ಸರ್ಕಾರಿ ಗೋಮಾಳದ ಒತ್ತುವರಿಯನ್ನು ತೆರವು ಮಾಡಲಾಗಿದೆ. ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿ ರಾಂಪುರದಲ್ಲಿ 10 ಗುಂಟೆ ಸ್ಮಶಾನ, ಬಿದರಹಳ್ಳಿ ಹೋಬಳಿ ಹಿರಂಡಹಳ್ಳಿಯಲ್ಲಿ 0.05 ಗುಂಟೆ ಗುಂಡುತೋಪು, ದಕ್ಷಿಣ ತಾಲ್ಲೂಕಿನ ದೊಡ್ಡಮಾರನಹಳ್ಳಿಯಲ್ಲಿ 14 ಗುಂಟೆ ಗೋಮಾಳ, ಯಲಹಂಕ ತಾಲ್ಲೂಕು ಹೆಸರಘಟ್ಟ ಹೋಬಳಿ ಬಿಳಿಜಾಜಿಯಲ್ಲಿ 15 ಗುಂಟೆ ಹಿಡುವಳಿ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

## ಜಿಬಿಎ ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯ 6 ಪಿಜಿಗಳಿಗೆ ಬೀಗ: 1.96 ಲಕ್ಷ ದಂಡ

• ಉದಯವಾಹಿನಿ, ಬೆಂಗಳೂರು

ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಶುಚಿತ್ವವಿಲ್ಲದ ಆರು ಪಿ.ಜಿ.ಗಳಿಗೆ ಬೀಗ ಮುದ್ರೆ ಹಾಕಲಾಗಿದೆ ಎಂದು ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದ್ದಾರೆ. 204 ಪೇಯಿಂಗ್ ಗೆಸ್ಟ್‌ಗಳನ್ನು ಆರೋಗ್ಯಾಧಿಕಾರಿ ಡಾ. ಶಿವಕುಮಾರ್ ನೇತೃತ್ವದಲ್ಲಿ ಚಿಕ್ಕಪೇಟೆ ಮತ್ತು ಶಿವಾಜಿನಗರ ಆರೋಗ್ಯ ವೈದ್ಯಾಧಿಕಾರಿಗಳ ಉಪಸ್ಥಿತಿಯಲ್ಲಿ ತಪಾಸಣೆ ನಡೆಸಲಾಯಿತು. ಶುಚಿತ್ವ ಕಾಪಾಡದ 6 ಪಿ.ಜಿ.ಗಳಿಗೆ ಬೀಗ ಮುದ್ರೆ ಹಾಕಲಾಯಿತು. ನ್ಯೂನ್ಯತೆಗಳಿರುವ ಪಿ.ಜಿ.ಗಳಿಗೆ 1.96 ಲಕ್ಷ ದಂಡ ವಿಧಿಸಲಾಯಿತು. ಶುದ್ಧ ಕುಡಿಯುವ ನೀರು, ಶುಚಿತ್ವ, ಅಡುಗೆ ಕೋಣೆ ನೈರ್ಮಲ್ಯ, ಸುರಕ್ಷತೆ, ಉತ್ತಮ ಶೌಚಾಲಯ ವ್ಯವಸ್ಥೆ, ಅಗ್ನಿಶಾಮಕ ಸಾಧನಗಳು ಹಾಗೂ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಮತ್ತು ಎಫ್‌ಎಸ್‌ಎಸ್‌ಎಐ ಆಹಾರ ಸುರಕ್ಷತಾ ಪ್ರಮಾಣ ಪತ್ರ, ಇತ್ಯಾದಿ ಮೂಲ ಸೌಕರ್ಯಗಳ ಬಗ್ಗೆ ತಪಾಸಣೆ ನಡೆಸಲಾಯಿತು. ಇದೇ ಸಂದರ್ಭದಲ್ಲಿ ಕಂದಾಯ ಇಲಾಖೆಯ ಅಧಿಕಾರಿ, ಸಿಬ್ಬಂದಿ ಪೇಯಿಂಗ್ ಗೆಸ್ಟ್ ಕಟ್ಟಡದ ಆಸ್ತಿ ತೆರಿಗೆ ಮತ್ತು ಇತರೆ ತೆರಿಗೆಗಳ ವಿಷಯವಾಗಿ ಪರಿಶೀಲನೆ ನಡೆಸಿದರು.

## ಪುನೀತ್ ಕೆರೆಹಳ್ಳಿ ಬಂಧನ

• ಉದಯವಾಹಿನಿ, ಬೆಂಗಳೂರು

ವಲಸೆ ಕಾರ್ಮಿಕರಿರುವ ಮನೆಗೆ ತೆರಳಿ ಅಕ್ರಮವಾಗಿ ನುಗ್ಗಿ ಅವರ ಪೌರತ್ವ ಹಾಗೂ ಗುರುತಿನ ದಾಖಲೆಗಳನ್ನು ಕೇಳಿ ಬೆದರಿಕೆ ಹಾಗೂ ಭೀತಿಯನ್ನುಂಟು ಮಾಡುತ್ತಿದ್ದಾರೆ ಎಂಬ ಗಂಭೀರ ಆರೋಪದ ಹಿನ್ನೆಲೆಯಲ್ಲಿ ಹಿಂದುತ್ವ ಸಂಘಟನೆ ನಾಯಕ ಪುನೀತ್ ಕೆರೆಹಳ್ಳಿಯನ್ನು ಬನ್ನೇರುಘಟ್ಟ ಪೊಲೀಸರು ಬಂಧಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಎಸ್ಪಿ ಅವರ ಮಾರ್ಗದರ್ಶನದಲ್ಲಿ ಬನ್ನೇರುಘಟ್ಟ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಬಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಪುನೀತ್ ಕೆರೆಹಳ್ಳಿಯ ಬಂಧನ ಸುದ್ದಿ ತಿಳಿದ ಬಳಿಕ, ಅವರ ಬೆಂಬಲಿಗರು ಠಾಣೆಯ ಬಳಿ ಜಮಾಯಿಸಲು ಯತ್ನಿಸಿದರೂ, ಪೊಲೀಸರು ಅವರನ್ನು ಒಳಗೆ ಬಿಡದೆ ನಿಯಂತ್ರಿಸಿದರು. ಪ್ರಕರಣ ಸಂಬಂಧ ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ತಿಳಿದು ಬಂದಿದೆ.

## ನಾಯಕತ್ವ ಬದಲಾವಣೆ ಚರ್ಚೆ ನಿಲ್ಲಿಸಿ

• ಉದಯವಾಹಿನಿ, ಬೆಂಗಳೂರು

ದಿನ ಬೆಳಗಾದರೆ ನಾಯಕತ್ವ ಬದಲಾವಣೆಯ ಬಗ್ಗೆ ಚರ್ಚಿಸುವುದನ್ನು ಬಿಟ್ಟು ನಾಡಿನ ಅಭಿವೃದ್ಧಿಯ ಕಡೆ ಗಮನ ಹರಿಸುವುದು ಎಲ್ಲರ ಕರ್ತವ್ಯ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ. ಶನಿವಾರ ಕರ್ನಾಟಕ ರಾಜ್ಯ ಲಾನ್ ಟೆನ್ನಿಸ್ ಸಂಸ್ಥೆಯಲ್ಲಿ ನಡೆದ ಬೆಂಗಳೂರು ವರದಿಗಾರರ ಕೂಟದ ಸುವರ್ಣ ಮಹೋತ್ಸವ ಡೈರೆಕ್ಟರಿ ಬಿಡುಗಡೆ ಮಾಡಿ ಅವರು ಮಾತನಾಡಿದರು. ಕಳೆದ ಹಲವು ಕಾಲದಿಂದ ರಾಜ್ಯದಲ್ಲಿ ಬರೀ ನಾಯಕತ್ವದ ಕುರಿತು ಚರ್ಚೆ ನಡೆಯುತ್ತಿದೆ. ನಾಯಕತ್ವದ ವಿಚಾರವನ್ನು ಕಾಂಗ್ರೆಸ್ ಹೈಕಮಾಂಡ್ ನೋಡಿ ಕೊಳ್ಳುತ್ತದೆ. ಹೀಗಾಗಿ ನಾಯಕತ್ವದ ಬದಲಾವಣೆ ಎಂಬುದು ಸಾರ್ವಜನಿಕ ಚರ್ಚೆಯ ವಿಷಯವಾಗಬಾರದು ಎಂದರು. ವ್ಯವಸ್ಥೆಯಲ್ಲಿ ಈಗ ಯಾವುದೂ ಹಿಂದಿನಂತಿಲ್ಲ.ಸಾಕಷ್ಟು ಬದಲಾವಣೆಗಳಾಗಿವೆ. ಅದು ರಾಜಕೀಯ ರಂಗ ಅಂತಲ್ಲ,ಮಾಧ್ಯಮ ರಂಗವೂ ಸೇರಿದಂತೆ ಸಮಾಜದ ಎಲ್ಲಾ ಅಂಗಗಳಲ್ಲೂ ಬದಲಾವಣೆಯಾಗಿದೆ. ವ್ಯವಸ್ಥೆ ಸುಗಮವಾಗಿ ಸಾಗಲು ಇಂತಹ ಅಂಗ ಹೀಗೆ ಕೆಲಸ ಮಾಡಬೇಕಿತ್ತು ಎಂದು ನಾವು ಅಂದುಕೊಳ್ಳುತ್ತೇವೆ. ಆದರೆ ಅಂದುಕೊಳ್ಳುವುದೇ ಬೇರೆ ಪರಿಸ್ಥಿತಿಯೇ ಬೇರೆ ಎಂದು ವಿಷಾದಿಸಿದರು.

## ಪ್ರೇಜರ್ ಟೌನ್: ಅನಧಿಕೃತ ಕಟ್ಟಡದ ಹೆಚ್ಚುವರಿ ಅಂತಸ್ತು ತೆರವು


• ಉದಯವಾಹಿನಿ, ಬೆಂಗಳೂರು

ಪುಲಕೇಶಿನಗರ ಉಪ ವಿಭಾಗದ ವ್ಯಾಪ್ತಿಯ ಪ್ರೇಜರ್ ಟೌನ್ ಕೆಂಚಪ್ಪ ಅಡ್ಡರಸ್ತೆಯಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಮಹಡಿಗಳ ತೆರವು ಕಾರ್ಯಾಚರಣೆಯನ್ನು ಬೆಂಗಳೂರು ಉತ್ತರ ನಗರ ಪಾಲಿಕೆ ಅಧಿಕಾರಿಗಳು ಆರಂಭಿಸಿದ್ದಾರೆ. ನೆಲ ಮತ್ತು ಎರಡು ಮಹಡಿಗಳನ್ನು ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಲಾಗಿತ್ತು. ಯಾವುದೇ ಪರವಾನಗಿ ಪಡೆಯದೇ ಹೆಚ್ಚುವರಿ ಎರಡು ಮಹಡಿಗಳನ್ನು ನಿರ್ಮಿಸಲಾಗಿತ್ತು. ಪ್ಯಾರಫಿಟ್ ಗೋಡೆಗಳನ್ನು, ಹೆಚ್ಚುವರಿ ಮಹಡಿಗಳನ್ನು ಸಿಬ್ಬಂದಿ ತೆರವುಗೊಳಿಸುತ್ತಿದ್ದಾರೆ. ನಿರ್ಮಾಣ ಕಾರ್ಯವನ್ನು ಅರ್ಧದಲ್ಲಿ ನಿಲ್ಲಿಸುವಂತೆ, ಅನಧಿಕೃತ ಅಂತಸ್ತುಗಳನ್ನು ತೆರವುಗೊಳಿಸುವಂತೆ ಸ್ವತ್ತು ಸಂಖ್ಯೆ 18/3ರ ಕಟ್ಟಡದ ಮಾಲೀಕರಿಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಲವು ಬಾರಿ ನೋಟಿಸ್ ನೀಡಿದ್ದರು. ಆದರೂ ಕಟ್ಟಡ ನಿರ್ಮಾಣ ಕಾರ್ಯ ಮುಂದುವರಿಸಿದ್ದರು. ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ನಿರ್ದೇಶನದಂತೆ ಪುಲಕೇಶಿನಗರ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ತಿಪ್ಪೇಸ್ವಾಮಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವಿ ವಡ್ಡರ್, ಪೊಲೀಸ್ ಸಿಬ್ಬಂದಿ ಉಪಸ್ಥಿತಿಯಲ್ಲಿ ಕಾರ್ಯಾಚರಣೆ ನಡೆಯುತ್ತಿದೆ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದ್ದಾರೆ.

# ಓವೈಸಿ ಸಂಚಲನ; ಕೈ ಪ್ಲ್ಯಾನ್‌ಗೆ ದೊಡ್ಡ ಹೊಡೆತ

## ಗ್ರೇಟರ್ ಬೆಂಗಳೂರು ಚುನಾವಣೆಗೆ ಸರ್ವೋಚ್ಚ ನ್ಯಾಯಾಲಯ ಹಾಕಿರುವ ಗಡುವು, ಅಸಾದುದ್ದೀನ್ ಓವೈಸಿ ಫ್ಯಾಕ್ಟರ್

• ಉದಯವಾಹಿನಿ, ಬೆಂಗಳೂರು





ಮಹಾರಾಷ್ಟ್ರದಲ್ಲಿ ಅಸಾದುದ್ದೀನ್ ಓವೈಸಿಯವರ ಪಾರ್ಟಿ ತಮ್ಮ ಅಸ್ತಿತ್ವವನ್ನು ಭರ್ಜರಿಯಾಗಿಯೇ ಪ್ರದರ್ಶಿಸಿದೆ. ರಾಜ್ಯಾದ್ಯಂತ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಎಐಎಂಐಎಂ, 126 ಸ್ಥಾನವನ್ನು ಗೆದ್ದಿದೆ. ಅಲ್ಲದೇ, ಐದು ಪಾಲಿಕೆಗಳಲ್ಲಿ ಮೊದಲ ಎರಡು ಸ್ಥಾನದಲ್ಲಿ ನಿಂತಿದೆ.

ಪಕ್ಷದೊಳಗಿನ ಆಂತರಿಕ ಭಿನ್ನಮತದ ಹೊರತಾಗಿಯೂ, ಓವೈಸಿಯವರ ಪಾರ್ಟಿ ತನ್ನ ಶಕ್ತಿ ಪ್ರದರ್ಶನವನ್ನು ತೋರಿದೆ. ಅಸಾದುದ್ದೀನ್ ಓವೈಸಿಯ ಪಾರ್ಟಿ ಹಿಂದೆ ಬಿಹಾರ, ಮಹಾರಾಷ್ಟ್ರ ಅಸೆಂಬ್ಲಿ ಚುನಾವಣೆಯಲ್ಲೂ ಉತ್ತಮ ಪ್ರದರ್ಶನವನ್ನು ನೀಡಿತ್ತು. ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯಲ್ಲಿ ಹದಿನೇಳು ಕ್ಷೇತ್ರದಲ್ಲಿ ಸ್ಪರ್ಧಿಸಿ, ಒಂದು ಕ್ಷೇತ್ರದಲ್ಲಿ ಮಾತ್ರ ಗೆದ್ದಿದ್ದರೂ, ಐದು ಕ್ಷೇತ್ರಗಳಲ್ಲಿ ಎರಡನೇ, ಮೂರು ಕ್ಷೇತ್ರಗಳಲ್ಲಿ ಮೂರನೇ ಸ್ಥಾನವನ್ನು ಪಡೆದಿತ್ತು. ಅದೇ ರೀತಿ ಬಿಹಾರದ ಅಸೆಂಬ್ಲಿ ಚುನಾವಣೆಯಲ್ಲೂ ಏಳು ಕ್ಷೇತ್ರದಲ್ಲಿ ಸ್ಪರ್ಧಿಸಿ ಐದರಲ್ಲಿ ಗೆಲುವು ಕಂಡಿತ್ತು. ಮುಸ್ಲಿಮರ ಪ್ರಾಬಲ್ಯವಿರುವ ಕ್ಷೇತ್ರಗಳ ಮೇಲೆ ಮಾತ್ರ ಗಮನವಿಡುವ ಅಸಾದುದ್ದೀನ್ ಓವೈಸಿಯ ಕಣ್ಣು, ಮುಂಬರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯ ಮೇಲೆ ನೆಟ್ಟಿದೆ. ಜೂನ್ 30ರೊಳಗೆ ಚುನಾವಣೆ ಮುಗಿಸಬೇಕು ಎನ್ನುವ ಗಡುವನ್ನು ಸರ್ವೋಚ್ಚ ನ್ಯಾಯಾಲಯ ನೀಡಿದೆ.

**ಅಸಾದುದ್ದೀನ್ ಓವೈಸಿ ಫ್ಯಾಕ್ಟರ್ ಬೆಂಗಳೂರು ಚುನಾವಣೆಯಲ್ಲಿ:** ಅಸಾದುದ್ದೀನ್ ಓವೈಸಿಯ ಪಾರ್ಟಿಯನ್ನು ರಾಹುಲ್ ಗಾಂಧಿ, ಬಿಜೆಪಿಯ ಬಿಟೀಂ ಎಂದು ಹಲವು ಬಾರಿ ಲೇವಡಿ ಮಾಡಿದ್ದರು. ಹಾಗಾಗಿ, ತಮ್ಮ ನಿಜವಾದ ಎದುರಾಳಿ ಬಿಜೆಪಿಗಿಂತ ಜಾಸ್ತಿ, ಕಾಂಗ್ರೆಸ್ ಪಾರ್ಟಿಯನ್ನೇ ಓವೈಸಿ ಟಾರ್ಗೆಟ್ ಮಾಡಿ ರಾಜಕೀಯವನ್ನು ಮಾಡುತ್ತಿದ್ದಾರೆ ಈಗ, ಗ್ರೇಟರ್ ಬೆಂಗಳೂರು ಚುನಾವಣೆ ಹತ್ತಿರ ಬರುತ್ತಿದೆ. ಕಾಂಗ್ರೆಸ್ ಪಾಲಿಗೆ ಅತ್ಯಂತ ಪ್ರತಿಷ್ಠೆಯ ಚುನಾವಣೆ ಎದುರಾಗಿದೆ. ಯಾಕೆಂದರೆ, ಬಿಬಿಎಂಪಿಯನ್ನು ವಿಭಜಿಸಿ, ಐದು ಪಾಲಿಕೆಗಳನ್ನಾಗಿ ಮಾಡಿ, ಗ್ರೇಟರ್ ಬೆಂಗಳೂರು ರಚಿಸಲಾಗಿತ್ತು. ಹಾಗಾಗಿ, ಡಿಕೆ ಶಿವಕುಮಾರ್, ಕಾಂಗ್ರೆಸ್ಸಿಗೆ ಇದು, ಮಹತ್ವದ್ದಾಗಿದೆ. ಆದರೆ, ಓವೈಸಿ ಫ್ಯಾಕ್ಟರ್ ಎನ್ನುವುದು ಕಾಂಗ್ರೆಸ್ಸಿಗೆ ಹೊಸ ತಲೆನೋವಾಗುವ ಸಾಧ್ಯತೆಯಿಲ್ಲದಿಲ್ಲ.

**ಬೆಂಗಳೂರು ನಗರ ವ್ಯಾಪ್ತಿಯ ಮೂರು ಕ್ಷೇತ್ರಗಳಲ್ಲಿ ಅಲ್ಪಸಂಖ್ಯಾತ ಸಮುದಾಯದ ಶಾಸಕರು:** 198 ವಾರ್ಡ್‌ಗಳಿದ್ದದ್ದು ಈಗ, 369 ವಾರ್ಡ್‌ಗಳಾಗಿವೆ. ಜೊತೆಗೆ, ಬೆಂಗಳೂರು ದಕ್ಷಿಣ, ಕೇಂದ್ರ, ಪಶ್ಚಿಮ, ಪೂರ್ವ, ಕೇಂದ್ರ ಎಂದು ಐದು ಪಾಲಿಕೆಯಾಗಿ ವಿಭಜಿಸಲಾಗಿದೆ. ಬೆಂಗಳೂರು ನಗರ ವ್ಯಾಪ್ತಿಯ 28 ಅಸೆಂಬ್ಲಿ ಕ್ಷೇತ್ರಗಳು, ಮೂರು ಲೋಕಸಭಾ ಕ್ಷೇತ್ರಗಳು, ಜೊತೆಗೆ, ಬೆಂಗಳೂರು ಗ್ರಾಮಾಂತರ ಲೋಕಸಭಾ ವ್ಯಾಪ್ತಿಯ ಹಲವು ಕ್ಷೇತ್ರಗಳಲ್ಲಿ ಐದು ಪಾಲಿಕೆಯ ವಾಡ್ ೯ಗಳು ಹಂಚಿಕೆಯಾಗಿದೆ. ಈ ಪೈಕಿ, ಶಿವಾಜಿನಗರ, ಶಾಂತಿನಗರ, ಚಾಮರಾಜಪೇಟೆಯಲ್ಲಿ ಮುಸ್ಲಿಂ ಸಮುದಾಯದ ಕಾಂಗ್ರೆಸ್ ಶಾಸಕರಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ, ಓವೈಸಿ ತಮ್ಮ ಪಾರ್ಟಿಯ ಇಬ್ಬರನ್ನು ಕಣಕ್ಕಿಳಿಸಿದ್ದರು.

### ಬಿಹಾರ ಚುನಾವಣೆಯಲ್ಲಿ ಅಸಾದುದ್ದೀನ್ ಓವೈಸಿ ಮಾಡಿದ್ದ ಕಮಾಲ್

**ಕಳೆದ ವರ್ಷ ನಡೆದಿದ್ದ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎಐಎಂಐಎಂ ಪಾರ್ಟಿಯ ಅಭ್ಯರ್ಥಿಗಳು, 28 ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ಈ ಪೈಕಿ, ಐದು ಕ್ಷೇತ್ರದಲ್ಲಿ ಗೆಲುವನ್ನು ಸಾಧಿಸಿದ್ದರು. ಸೀಮಾಂಚಲ ಪ್ರದೇಶದ ಕೆಲವು ಕ್ಷೇತ್ರಗಳಲ್ಲಿ ಉತ್ತಮ ಹಿಡಿತವನ್ನು ಹೊಂದಿರುವ ಓವೈಸಿ ಪಾರ್ಟಿ, ಕಾಂಗ್ರೆಸ್ ಮೈತ್ರಿಕೂಟಕ್ಕೆ ಸೇರಿಸಿಕೊಳ್ಳುವಂತೆ ರಾಹುಲ್ ಗಾಂಧಿ, ತೇಜಸ್ವಿ ಯಾದವ್ ಅವರ ಬಳಿ ಮನವಿಯನ್ನು ಮಾಡಿದ್ದರು. ಆದರೆ, ಓವೈಸಿ ಮನವಿಗೆ ಅವರು ಓಗೊಡಲಿರಲಿಲ್ಲ. ಇದರಿಂದಾಗಿ, RJD, ಕಾಂಗ್ರೆಸ್ಸಿಗೆ ಸೀಮಾಂಚಲ ಭಾಗದಲ್ಲಿ ಮತವಿಭಜನೆಯ ಸಮಸ್ಯೆ ಎದುರಾಯಿತು. ಕಾಂಗ್ರೆಸ್ ಮೈತ್ರಿಕೂಟದ ಗೆಲುವಿಗೆ ಹಲವು ಕಡೆ ಎಐಎಂಐಎಂ ಪಾರ್ಟಿ ತೊಡಕಾಯಿತು.**

### ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ, ನೇರ ಎಫೆಕ್ಟ್


**ಐದು ಪಾಲಿಕೆಗಳ ಒಟ್ಟು 369 ವಾರ್ಡ್‌ಗಳಲ್ಲಿ 176 ವಾರ್ಡ್‌ಗಳನ್ನು ಮಹಿಳೆಯರಿಗೆಂದು ಮೀಸಲಿಡಲಾಗಿದೆ. ಬೆಂಗಳೂರು ಕೇಂದ್ರ - 63, ಬೆಂಗಳೂರು ಪೂರ್ವ - 50, ಬೆಂಗಳೂರು ಪಶ್ಚಿಮ - 112, ಬೆಂಗಳೂರು ಉತ್ತರ - 72, ಬೆಂಗಳೂರು ದಕ್ಷಿಣ - 72 ವಾರ್ಡ್‌ಗಳಿವೆ. ಈ ಪೈಕಿ, ಬೆಂಗಳೂರು ಕೇಂದ್ರ ವ್ಯಾಪ್ತಿಯ ಜಯಮಹಲ್, ಭಾರತಿ ನಗರ, ಶಿವಾಜಿ ನಗರ, ವಸಂತ ನಗರ, ವನ್ನಾರ್ ಪೇಟೆ, ಪಾದರಾಯನಪುರ, ಜೆಜೆ ನಗರ ಸೇರಿದಂತೆ, ಹಲವು ಕಡೆ ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರ, ಮತಬ್ಯಾಂಕಿನ ಮೇಲೆ ಗಮನದಲ್ಲಿ ಇಟ್ಟುಕೊಂಡು, ಓವೈಸಿ, ತಮ್ಮ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ, ಅದರ ನೇರ ಎಫೆಕ್ಟ್, ಕಾಂಗ್ರೆಸ್ ಪಾರ್ಟಿಯ ಮೇಲೆ ಬೀಳಲಿದೆ.**

## ಸಿಎಂ-ಡಿಸಿಎಂ ಕುರ್ಚಿ ಕಿತ್ತಾಟಕ್ಕೆ ಸಚಿವ ಬೇಸರ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ದಿನ ಬೆಳಗಾದರೆ ನಾಯಕತ್ವ ಬದಲಾವಣೆಯ ಕುರಿತು ಚರ್ಚಿಸುವುದನ್ನು ಬಿಟ್ಟು ನಾಡಿನ ಅಭಿವೃದ್ಧಿ ವಿಚಾರಗಳ ಕಡೆಗೆ ಗಮನ ಹರಿಸುವುದು ಸೂಕ್ತ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ.

ನಗರದಲ್ಲಿ ಬೆಂಗಳೂರು ವರದಿಗಾರರ ಕೂಟದ ಸುವರ್ಣ ಮಹೋತ್ಸವದ ಡೈರೆಕ್ಟರಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಕಳೆದ ಹಲವು ಕಾಲದಿಂದ ರಾಜ್ಯದಲ್ಲಿ ಬರೀ ನಾಯಕತ್ವದ ಕುರಿತು ಚರ್ಚೆ ನಡೆಯುತ್ತಿದೆ.



ನಾಯಕತ್ವದ ವಿಚಾರವನ್ನು ಕಾಂಗ್ರೆಸ್ ಹೈಕಮಾಂಡ್ ನೋಡಿಕೊಳ್ಳುತ್ತದೆ. ನಾಯಕತ್ವದ ಬದಲಾವಣೆ ಎಂಬುದು ಸಾರ್ವಜನಿಕ ಚರ್ಚೆಯ ವಿಷಯವಾಗಬಾರದು ಎಂದು ತಿಳಿಸಿದ್ದಾರೆ. ನಮ ವ್ಯವಸ್ಥೆಯಲ್ಲಿ ಈಗ ಯಾವುದೂ ಹಿಂದಿನಂತಿಲ್ಲ. ಸಾಕಷ್ಟು ಬದಲಾವಣೆಗಳಾಗಿವೆ. ರಾಜಕೀಯ, ಮಾಧ್ಯಮ ರಂಗವೂ ಸೇರಿದಂತೆ ಸಮಾಜದ ಎಲ್ಲಾ ಅಂಗಗಳಲ್ಲೂ ಬದಲಾವಣೆಯಾಗಿದೆ. ವ್ಯವಸ್ಥೆ ಸುಗಮವಾಗಿ ಸಾಗಲು ಇಂತಹ ರಂಗ ಈ ರೀತಿ ಕೆಲಸ ಮಾಡಬೇಕಿತ್ತು ಎಂದು ನಾವು ಭಾವಿಸುತ್ತೇವೆ. ಆದರೆ ಅಂದುಕೊಳ್ಳುವುದೇ ಬೇರೆ. ಪರಿಸ್ಥಿತಿಯೇ ಬೇರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಹಿರಿಯ ಪತ್ರಕರ್ತರಾದ ಹುಣಸವಾಡಿ ರಾಜನ್ ಅವರು ಮಾತನಾಡಿ, ಮಾಧ್ಯಮ ರಂಗಕ್ಕೆಭವಿಷ್ಯ ವಿಲ್ಲ ಎಂದು ಹಲವರು ಹೇಳುತ್ತಾರೆ. ಆದರೆ ಎಲ್ಲಿಯವರೆಗೆ ಕುತೂಹಲ ಮತ್ತು ಸತ್ಯಶೋಧನೆಯ ಮನಸ್ಸು ಇರುತ್ತದೋ ಅಲ್ಲಿಯವರೆಗೆ ಮಾಧ್ಯಮ ರಂಗ ಅಸ್ತಿತ್ವದಲ್ಲಿರುತ್ತದೆ. ಮಾಧ್ಯಮ ರಂಗದಲ್ಲಿ ಪಲ್ಲಟಗಳಾಗಿರುವುದು ನಿಜ. ಇದನ್ನು ನೋಡಿದರೆ ವಿಷಾದವಾಗುತ್ತದೆ. ಇಂತಹ ಸ್ಥಿತಿಯಲ್ಲಿ ಮಾಧ್ಯಮ ರಂಗಕ್ಕೆ ಚೈತನ್ಯ ನೀಡುವ ಕಾರ್ಯ ಮಾಧ್ಯಮ ಸಂಘಟನೆಗಳಿಂದ ಆಗಬೇಕು ಎಂದು ಅಭಿಪ್ರಾಯಿಸಿದ್ದಾರೆ.

## ಪುರುಷರ ವೇಷಧರಿಸಿ ಮನೆ ಕಳ್ಳತನ ನಡೆಸುತ್ತಿದ್ದ ಮಹಿಳೆಯರ ಬಂಧನ

• ಉದಯವಾಹಿನಿ, ಬೆಂಗಳೂರು

ಪುರುಷರ ರೀತಿಯಲ್ಲಿ ಬಟ್ಟೆ ಧರಿಸಿಕೊಂಡು ಮನೆಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ ಜಾಲವನ್ನು ಪತ್ತೆಹಚ್ಚಿರುವ ಸಂಪಿಗೆಹಳ್ಳಿ ಠಾಣೆಯ ಪೊಲೀಸರು, ಮಹಿಳೆ, ಇಬ್ಬರು ಬಾಲಕಿಯರನ್ನು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ. ಅಮರಜ್ಯೋತಿ ಲೇಔಟ್ ಎರಡನೇ ಕ್ರಾಸ್‌ನ ನಿವಾಸಿ ರೇಷ್ಮಾ (45) ಹಾಗೂ ಇಬ್ಬರು ಬಾಲಕಿಯರನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಬಂಧಿತರಿಂದ 30 ಗ್ರಾಂ ಚಿನ್ನಾಭರಣ, 80 ಗ್ರಾಂ ಬೆಳ್ಳಿಯ ಸಾಮಗ್ರಿ ಹಾಗೂ ಕೃತ್ಯಕ್ಕೆ ಬಳಸುತ್ತಿದ್ದ ಒಂದು ಬೈಕ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಯಲಹಂಕದ ಅಗ್ರಹಾರ ಲೇಔಟ್‌ನ 4ನೇ ಮುಖ್ಯರಸ್ತೆಯ 19ನೇ ಕ್ರಾಸ್ ನಿವಾಸಿ ಸಂಗಮೇಶ್ವರ ಅವರು ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ಸಂಗಮೇಶ್ವರ ಅವರು ಜ.13ರಂದು ಮಕ್ಕಳನ್ನು


ಉದಯವಾಹಿನಿ ಚಿತ್ರ

ಶಾಲೆಗೆ ಕಳುಹಿಸಿ, ಆಟೋ ಓಡಿಸಲು ಹೋಗಿದ್ದರು. ಅವರ ಪತ್ನಿ ಗಾರ್ಮೆಂಟ್ಸ್ ಕೆಲಸಕ್ಕೆ ತೆರಳಿದ್ದರು. ಅಂದೇ ಸಂಜೆ ಮನೆಗೆ ವಾಪಸ್ ಬಂದು ನೋಡಿದಾಗ ಮನೆಯ ಬಾಗಿಲು ಒಡೆದು ಕಳ್ಳತನ ಮಾಡಿರುವುದು ಗೊತ್ತಾಗಿತ್ತು. ಮನೆಯಲ್ಲಿದ್ದ 30 ಗ್ರಾಂ ಚಿನ್ನ, 60 ಗ್ರಾಂ ಬೆಳ್ಳಿಯ ಸಾಮಗ್ರಿ, 15 ಸಾವಿರ ನಗದು ಕಳ್ಳತನ ಮಾಡಲಾಗಿತ್ತು. ಕೃತ್ಯ ಎಸಗಿದವರ ಪತ್ತೆಗೆ ವಿಶೇಷ ಪೊಲೀಸ್ ತಂಡ ರಚಿಸಲಾಗಿತ್ತು. ಅಮರಜ್ಯೋತಿ ಲೇಔಟ್‌ನಲ್ಲಿ ರೇಷ್ಮಾ, ಇಬ್ಬರು ಬಾಲಕಿಯರನ್ನು ವಶಕ್ಕೆ ಪಡೆದುಕೊಳ್ಳಲಾಯಿತು ಎಂದು ಪೊಲೀಸರು ಹೇಳಿದರು.

**ಠಾಣೆಗೆ ಕರೆತಂದಾಗ ಅಸಲಿ ಬಣ್ಣ ಬಯಲಿಗೆ:** ಕೃತ್ಯ ನಡೆದ ಮನೆಯ ಅಕ್ಕಪಕ್ಕದಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಯಿತು. ದೃಶ್ಯದಲ್ಲಿ ಆರೋಪಿಗಳ ಚಲನ ವಲನಗಳು ಸೆರೆಯಾಗಿದ್ದವು. ಅದನ್ನು ಆಧರಿಸಿ ತನಿಖೆ ನಡೆಸಿದಾಗ ಆರೋಪಿಗಳು, ಪುರುಷರ ಮಾದರಿಯಲ್ಲಿ ಪ್ಯಾಂಟ್, ಅಂಗಿ ಧರಿಸಿ, ತಲೆಗೆ ಟೋಪಿ ಹಾಕಿಕೊಂಡು ಕಳ್ಳತನ ಮಾಡಿರುವುದು ಗೊತ್ತಾಯಿತು ಎಂದು ಪೊಲೀಸರು ಹೇಳಿದರು. ಆರೋಪಿಗಳು ಬಳಸಿದ್ದ ಸ್ಕೂಟರ್‌ನ ನಂಬರ್ ಪ್ಲೇಟ್ ಸಿ.ಸಿ.ಟಿ.ವಿ ಕ್ಯಾಮೆರಾ ಸೆರೆ ಆಗಿತ್ತು. ಸ್ಕೂಟರ್ ನೋಂದಣಿ ಸಂಖ್ಯೆ ಪರಿಶೀಲನೆ ನಡೆಸಿದಾಗ ನಕಲಿ ನಂಬರ್ ಪ್ಲೇಟ್ ಎಂಬುದು ಪತ್ತೆ ಆಯಿತು ಎಂದು ಪೊಲೀಸರು ಹೇಳಿದರು. ರೇಷ್ಮಾ ಅವರ ಸೂಚನೆಯ ಮೇರೆಗೆ ಇಬ್ಬರು ಬಾಲಕಿಯರು ವೇಷಭೂಷಣ ಬದಲಾವಣೆ ಮಾಡಿಕೊಂಡು ಕೃತ್ಯ ಎಸಗುತ್ತಿದ್ದರು ಎಂದು ಪೊಲೀಸರು ಹೇಳಿದರು.

## ಐಟಿಪಿಬಿ ಸ್ಕೈವಾಕ್‌ಗೆ ಚಾಲನೆ: 55 ಸಾವಿರ ಟೆಕಿಗಳಿಗೆ ಅನುಕೂಲ

• ಉದಯವಾಹಿನಿ, ಬೆಂಗಳೂರು

ಪಟ್ಟಂದೂರು ಅಗ್ರಹಾರದಲ್ಲಿ ನಮ್ಮ ಮೆಟ್ರೊ ನಿಲ್ದಾಣದಿಂದ ನೇರವಾಗಿ ಐಟಿಪಿಬಿ ಕಚೇರಿಗೆ ತಲುಪುವ ಪಾದಚಾರಿ ಮೇಲ್ಸೇತುವೆಗೆ ಚಾಲನೆ ನೀಡಲಾಗಿದೆ. ಇದರಿಂದಾಗಿ ಐಟಿ ಹಬ್ ಆಗಿರುವ ವೈಟ್‌ಫೀಲ್ಡ್ ಸುತ್ತಮುತ್ತ ಟೆಕಿಗಳು ವಾಹನ ಸಂದಣಿಯ ನಡುವೆ ಸಿಲುಕುವುದು ತಪ್ಪಿದ್ದು 55 ಸಾವಿರಕ್ಕೂ ಅಧಿಕ ಮಂದಿಗೆ ಪ್ರಯೋಜನವಾಗಲಿದೆ. ಪಕ್ಕದಲ್ಲೇ ಕಚೇರಿ ಇದ್ದರೂ ವಿಪರೀತ ವಾಹನ ದಟ್ಟಣೆಯ ನಡುವೆ ರಸ್ತೆ ದಾಟಲು, ವಾಹನಗಳಲ್ಲಿ ಸಂಚರಿಸಲು ಪರದಾಡುವ ಸ್ಥಿತಿ ನಿತ್ಯ ಇರುತ್ತಿತ್ತು. ಟ್ರಾಫಿಕ್ ಸಿಗ್ನಲ್ ಬಿದ್ದಾಗ ಕಿಲೋಮೀಟರ್ ಗಟ್ಟಲೆ ವಾಹನಗಳು ನಿಲ್ಲುವಂತಾಗಿತ್ತು. ಈ ಸಮಸ್ಯೆಗೆ ಈಗ ಡ್ರೈವಾಕ್ ಮುಕ್ತಿ ನೀಡಿದೆ.

ನಮ್ಮ ಮೆಟ್ರೊ ನೇರಳೆ ಮಾರ್ಗದ ಪಟ್ಟಂದೂರು ಅಗ್ರಹಾರ ಮೆಟ್ರೊ ನಿಲ್ದಾಣದಿಂದ ಇಂಟರ್‌ನ್ಯಾಷನಲ್ ಟೆಕ್ ಪಾರ್ಕ್, ಪಾರ್ಕ್ ಸ್ಟೇರ್ ಮಾಲ್‌ಗೆ ಸಂಪರ್ಕ ಕಲ್ಪಿಸುವ ಪಾದಚಾರಿ ಮೇಲ್ಸೇತುವೆ ನಿರ್ಮಿಸಲು 2023ರ ಜನವರಿ 17 ರಂದು ಬಿಎಂಆರ್‌ಸಿಎಲ್, ಐಟಿಪಿಎಲ್ ನಡುವೆ ಒಪ್ಪಂದ ಆಗಿತ್ತು. ಕ್ಯಾಪಿಟಲ್ಯಾಂಡ್


ಉದಯವಾಹಿನಿ ಚಿತ್ರ

ಇಂಡಿಯಾ ಟ್ರಸ್ಟ್‌ನ ಸಿಇಒ ಗೌರಿಶಂಕರ್ ನಾಗಭೂಷಣಂ ಮತ್ತು ಬಿಎಂಆರ್‌ಸಿಎಲ್ ಪ್ರಾಜೆಕ್ಟ್, ಪ್ಲಾನಿಂಗ್ ವಿಭಾಗದ ನಿರ್ದೇಶಕ ಸುಬ್ರಹ್ಮಣ್ಯ ಗುಡ್ಗೆ ಅವರು ಡ್ರೈವಾಕ್ ಉದ್ಘಾಟಿಸಿದರು.

ಗೌರಿಶಂಕರ ನಾಗಭೂಷಣಂ ಮಾತನಾಡಿ, ನಿತ್ಯ ಮೆಟ್ರೊ ಮೂಲಕ ಕಚೇರಿಗೆ ಬರುವ ಸಾವಿರಾರು ತಂತ್ರಜ್ಞರಿಗೆ ಇದರಿಂದ ಅನುಕೂಲವಾಗಲಿದೆ. ನಿಲ್ದಾಣದಿಂದ ನೇರವಾಗಿ ಬಿಸಿನೆಸ್ ಪಾರ್ಕ್ ಮತ್ತು ಮಾಲ್‌ಗೆ ತೆರಳಬಹುದಾದ್ದರಿಂದ ಸುರಕ್ಷತೆಯ ಜೊತೆಗೆ ಸಮಯದ ಉಳಿತಾಯವೂ ಆಗಲಿದೆ. ಪ್ರಯಾಣಿಕರು, ವಾಹನ ಸವಾರರಿಗೆ ಮಾತ್ರವಲ್ಲದೇ ವೈಟ್‌ಫೀಲ್ಡ್ ಪ್ರದೇಶದ ನಿವಾಸಿಗಳಿಗೂ ಸುರಕ್ಷತೆ ಕಲ್ಪಿಸಲಿದೆ ಎಂದು ಹೇಳಿದರು.

ಪ್ರಮುಖ ಮೆಟ್ರೊ ನಿಲ್ದಾಣಗಳಿಗೆ ಸುಗಮವಾದ ಪಾದಚಾರಿ ಮಾರ್ಗದ ನಿರ್ಮಾಣ ಮಾಡುವುದರಿಂದ ಪೂರಕವಾದ ವಹಿವಾಟು ವಲಯಗಳಿಗೆ ಅನುಕೂಲವಾಗುತ್ತದೆ. ಮೆಟ್ರೊ ಸಾರಿಗೆ ಸುಧಾರಣೆಯಾಗುತ್ತದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಳಸಲು ಸಾರ್ವಜನಿಕರಿಗೆ ಪ್ರೇರಣೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

### 370 ಅಡಿ ಉದ್ದದ ಮೇಲ್ಸೇತುವೆ

**ಐಟಿಪಿಬಿ ಮೆಟ್ರೊ ವಾಕ್ 370 ಅಡಿಗಳಷ್ಟು ಉದ್ದವಾಗಿದ್ದು ರಸ್ತೆ ಮಟ್ಟದಿಂದ 24 ಅಡಿ ಎತ್ತರದಲ್ಲಿದೆ. ದೀರ್ಘಬಾಳಿಕೆಯ ಸ್ಟ್ರಕ್ಚರಲ್ ಸ್ಟೀಲ್ ಮತ್ತು ಕಾಂಕ್ರೀಟ್ ಬಳಸಿ ಆಧುನಿಕ ಶೈಲಿಯ ಸ್ಪರ್ಶ ನೀಡಲಾಗಿದೆ. ಮೆಟ್ರೊ ಪ್ರಯಾಣಿಕರು ರಸ್ತೆಗೆ ಇಳಿಯದೇ ಮಾಲ್‌ಗೆ ತೆರಳಿ ಆ ಮುಖಾಂತರ ಬಿಸಿನೆಸ್ ಪಾರ್ಕ್‌ನಲ್ಲಿರುವ ಕಂಪನಿಗಳಿಗೆ ತೆರಳಬಹುದು.**

## ಕಾವೇರಿ ವಾಟರ್ ಲೈನ್‌ನಲ್ಲಿ ಗಬ್ಬು ನೀರು

• ಉದಯವಾಹಿನಿ, ಬೆಂಗಳೂರು

ಮಧ್ಯಪ್ರದೇಶದ ಭೂಪಾಲ್‌ನಲ್ಲಿ ಕಲುಷಿತ ನೀರು ಸೇವನೆಯಿಂದ ಹಲವಾರು ಅಮಾಯಕರು ಪ್ರಾಣ ಕಳೆದುಕೊಂಡ ಘಟನೆ ಇನ್ನು ಹಸಿರಾಗಿರುವಾಗಲೇ ಸಿಲಿಕಾನ್ ಸಿಟಿಯಲ್ಲೂ ಅಂತಹದ್ದೆ ಒಂದು ಪ್ರಕರಣ ವರದಿಯಾಗಿದೆ.ನಗರದ ವಿ ಎಸ್ ಗಾರ್ಡನ್‌ನ ಮನೆಗಳಿಗೆ ಸರಬರಾಜಾಗುತ್ತಿರುವ ಕಾವೇರಿ ನೀರಿನ ಪೈಪ್‌ನಲ್ಲಿ ಕಲುಷಿತ ನೀರು ಬರುತ್ತಿದೆ. ಈ ಕುರಿತಂತೆ ಜಲ ಮಂಡಳಿ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೆ ಪ್ರಯೋಜನವಾಗಿಲ್ಲ. ಈ ಏರಿಯಾದ ಮನೆಗಳ ನೀರಿನ ಪೈಪ್‌ಗಳಲ್ಲಿ ಸ್ಯಾನಿಟರಿ ಮಿಕ್ಸ್ ನೀರು ಬರುತ್ತಿದೆ. ಕಾವೇರಿ ನೀರಿನ ಪೈಪ್‌ನಲ್ಲಿ ಬರುತ್ತಿರುವ ಈ ನೀರು ಗಬ್ಬು ವಾಸನೆ ಬೀರುತ್ತಿದೆ.

ಈ ನೀರು ಕುಡಿಯೋಕೂ ಆಗಲ್ಲ, ಬಳಸೋಕೂ ಅಗಲ್ಲ ಹಾಗಂತ ನೀರನ್ನು ರಸ್ತೆಗೆ ಬಿಟ್ರೂ ಕೆಟ್ಟ ವಾಸನೆ ಬರುತ್ತಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.ಕಳೆದ ಹಲವಾರು ದಿನಗಳಿಂದ ಇಂತಹ ನೀರು ಬರುತ್ತಿದೆ. ಈ ಕುರಿಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ


ಉದಯವಾಹಿನಿ ಚಿತ್ರ

ಪ್ರಯೋಜನ ಇಲ್ಲದಂತಾಗಿದೆ ಎಂದು ಕುಡಿಯುವ ನೀರಿಲ್ಲದೆ ನಾವು ಬದುಕೋದು ಹೇಗೆ ಎಂದು ಅವರು ಪ್ರಶ್ನಿಸುತ್ತಿದ್ದಾರೆ. ಒಂದು ವೇಳೆ ಕಲುಷಿತ ನೀರು ಸೇವನೆಯಿಂದ ಅನಾಹುತ ಸಂಭವಿಸಿದರೆ ಅದಕ್ಕೆ ನೀವೇ ಜವಬ್ದಾರರಾಗ ಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ಭೂಪಾಲ್ ಘಟನೆಯನ್ನು ಗಮನದಲ್ಲಿಟ್ಟುಕೊಂಡು ಜಲ ಮಂಡಳಿ ಅಧಿಕಾರಿಗಳು ಕೂಡಲೇ ಆಗಿರುವ ಸಮಸ್ಯೆಗೆ ಪರಿಹಾರ ಕಂಡು ಹಿಡಿದು ಭವಿಷ್ಯದಲ್ಲಿ ಆಗಬಹುದಾದ ಅನಾಹುತ ತಪ್ಪಿಸಬೇಕು ಎಂದು ಪ್ರಜ್ಞಾವಂತ ನಾಗರಿಕರು ಎಚ್ಚರಿಸಿದ್ದಾರೆ.

### ಸಮಾಜವನ್ನು ಕಾಡುವ ಪಿಡುಗುಗಳ ನಿಯಂತ್ರಣಕ್ಕೂ ಪೊಲೀಸರು ಬದ್ಧತೆಯಿಂದ ಕೆಲಸ ಮಾಡಬೇಕು: ಸಿಎಂ

# ಅಪರಾಧದಲ್ಲಿ ಭಾಗಿಯಾದರೆ ಪೊಲೀಸರಿಗೆ ತಕ್ಕ ಶಾಸ್ತಿ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಕಾನೂನು, ಸುವ್ಯವಸ್ಥೆ ರಕ್ಷಣೆಯ ಜೊತೆ ಸಮಾಜವನ್ನು ಕಾಡುವ ಪಿಡುಗುಗಳ ನಿಯಂತ್ರಣಕ್ಕೂ ಪೊಲೀಸರು ಬದ್ಧತೆಯಿಂದ ಕೆಲಸ ಮಾಡಬೇಕು ಎಂದು ಸಿಎಂ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ. ಪೊಲೀಸ್ ಮಹಾ ನಿರ್ದೇಶಕ, ಆರಕ್ಷಕ ಮಹಾ ನಿರೀಕ್ಷಕರ ಕಚೇರಿಯಲ್ಲಿ ಪೊಲೀಸ್‌ಅಧಿಕಾರಿಗಳ ವಾರ್ಷಿಕ ಸಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ಬಳ್ಳಾರಿಯಲ್ಲಿ ನಡೆದ ಬ್ಯಾನರ್ ಗಲಭೆ ಪ್ರಕರಣ, ಮಹಾರಾಷ್ಟ್ರ ಪೊಲೀಸರು ಬೆಂಗಳೂರಿನಲ್ಲಿ ಮಾದಕ ವಸ್ತು ತಯಾರಿಕೆ ಅಡ್ಡೆಯ ಮೇಲೆ ದಾಳಿ ಮಾಡಿದ ಪ್ರಸಂಗಗಳನ್ನು ಪ್ರಮುಖವಾಗಿ ಉಲ್ಲೇಖಿಸಿದ್ದಾರೆ.

ಪೊಲೀಸ್ ಇಲಾಖೆಗೆ ಅಗತ್ಯ ಇರುವ ಎಲ್ಲಾ ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತಿದೆ. ಆದರೂ ಅಲ್ಲಲ್ಲಿ ಕಾನೂನು ಸುವ್ಯವಸ್ಥೆಗೆ ಸವಾಲಾಗುವಂತಹ ಪ್ರಕರಣಗಳು ನಡೆಯುತ್ತಲೇ ಇದೆ. ಬಾಂಗ್ಲಾ ದೇಶದ ವಲಸಿಗರು ಸೇರಿದಂತೆ ವಿದೇಶದ ಪ್ರಜೆಗಳು ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಬಗ್ಗೆ ವ್ಯಾಪಕ ದೂರುಗಳು ಕೇಳಿ ಬರುತ್ತಿವೆ. ಈ ಮೊದಲು ಅಕ್ರಮ ವಲಸಿಗರನ್ನು ಗಡಿ ಪಾರು ಮಾಡಲು ಅಭಿಯಾನ ನಡೆಸಲಾಗಿತ್ತು. ಅದರ ಹೊರತಾಗಿಯೂ ಹಲವಾರು ಮಂದಿ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಕಡೆಗಳಲ್ಲಿ ನೆಲೆಸಿರುವುದು ಹೇಗೆ ಎಂದು ಪ್ರಶ್ನಿಸಿದ್ದಾರೆ.

ಮಾದಕ ವಸ್ತುಗಳ ತಯಾರಿಕೆ ಫ್ಯಾಕ್ಟರಿಗಳು ನಡೆಯುತ್ತಿರುವುದು ಸಮರ್ಥನೀಯವಲ್ಲ. ನೆರೆ ರಾಜ್ಯದ ಅಧಿಕಾರಿಗಳು ಇಲ್ಲಿ ಬಂದು ದಾಳಿ ಮಾಡುವುದರಿಂದ ಅಪಕೀರ್ತಿ ಹೆಚ್ಚಾಗುತ್ತದೆ. ನಮ್ಮಲ್ಲಿನ ಗುಪ್ತದಳ ಏನು ಮಾಡುತ್ತಿದೆ. ಕೆಳ ಹಂತದ ಸಿಬ್ಬಂದಿಗಳಿಗೆ ಏಕೆ ಮಾಹಿತಿ ಸಿಕ್ಕಿಲ್ಲ. ಹಿರಿಯ ಅಧಿಕಾರಿಗಳು ಕೆಳ ಹಂತದ ಸಿಬ್ಬಂದಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಿಸುವಲ್ಲಿ ವಿಫಲವಾಗಿರುವುದು ಇದರಿಂದ ಕಂಡು ಬರುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕರಾವಳಿಯಲ್ಲಿ ಸಣ್ಣ ಪ್ರಮಾಣದ ವರ್ಗಾವಣೆ, ಕಾಳಜಿಯ ಕಾರ್ಯಗಳಿಂದ ಶಾಂತಿ ವಾತಾವಣ ನೆಲೆಸಿದೆ. ಅಲ್ಲಿ ಪರಿಸ್ಥಿತಿ ನಿಯಂತ್ರಿಸಲು ಸಾಧ್ಯವಾಗುವುದಾದರೆ ರಾಜ್ಯದ ಬೇರೆ ಕಡೆ ಏಕೆ ಸಾಧ್ಯವಾಗುವುದಿಲ್ಲ ಎಂದು ಮುಖ್ಯಮಂತ್ರಿ ಪ್ರಶ್ನಿಸಿದ್ದಾರೆ. ಮಹಿಳೆಯರ ಹಾಗೂ ಪರಿಶಿಷ್ಟರ ರಕ್ಷಣೆಗೆ ಆದ್ಯತೆ ನೀಡಬೇಕು. ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ನಿಯಂತ್ರಿಸಲು ಜಿಲ್ಲಾ ಕೇಂದ್ರಗಳಲ್ಲಿ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಠಾಣೆಗಳನ್ನು ಸ್ಥಾಪಿಸಲಾಗಿದೆ. ಅದೇ ರೀತಿ ಮಹಿಳಾ ಠಾಣೆಗಳಿವೆ. ಹಿರಿಯ ಅಧಿಕಾರಿಗಳು ಅವುಗಳ ಕಾರ್ಯ ನಿರ್ವಹಣೆಯನ್ನು ಕಾಲಕಾಲಕ್ಕೆ ಪರಿಶೀಲನೆ ನಡೆಸಬೇಕು ಎಂದು ಹೇಳಿದ್ದಾರೆ.


ಉದಯವಾಹಿನಿ ಚಿತ್ರ

### ನೀಡಿದ ಮಾನದಂಡಗಳು

**ಸಾರ್ವಜನಿಕರೊಂದಿಗೆ ಉತ್ತಮ ಸಂಬಂಧ, ಮೂಲಸೌಕರ್ಯ, ಸಿಬ್ಬಂದಿ ಶಿಸ್ತು, ಪ್ರಕರಣಗಳ ವಿಲೇವಾರಿ, ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವಿಕೆ ಮುಂತಾದವುಗಳನ್ನು ಆಧರಿಸಿ ಈ ಆಯ್ಕೆ ಮಾಡಲಾಗಿದೆ. ಗೌರವ ಕೇಂದ್ರ ಗೃಹ ಸಚಿವರು ಇತ್ತೀಚೆಗೆ ರಾಯಪುರದ IIMನಲ್ಲಿ ನಡೆದ ಸಮಾರಂಭದಲ್ಲಿ ಟ್ರೋಫಿಯನ್ನು ಹಸ್ತಾಂತರಿಸಿದ್ದಾರೆ.**

**ಬಳ್ಳಾರಿಯ ಗಲಭೆ ಪ್ರಕರಣವನ್ನು ಆರಂಭದಲ್ಲೇ ನಿಯಂತ್ರಿಸಲು ಪೊಲೀಸರಿಗೆ ಅವಕಾಶಗಳಿತ್ತು. ಆದರೆ ಹಿರಿಯ ಅಧಿಕಾರಿಗಳ ಬೇಜವಾಬ್ದಾರಿಯಿಂದಾಗಿ ಅಲ್ಲಿ ಒಬ್ಬ ಅಮಾಯಕನ ಪ್ರಾಣ ಹರಣವಾಗಿದೆ. ಅಧಿಕಾರಿಗಳು ಅದರಲ್ಲೂ ಗ್ರಾಮೀಣ ಭಾಗದಲ್ಲಿ ಜಿಲ್ಲಾ, ನಗರ ಪ್ರದೇಶದಲ್ಲಿ ವಿಭಾಗವಾರು ಜವಾಬ್ದಾರಿ ನಿರ್ವಹಣೆ ಮಾಡುವ ಅಧಿಕಾರಿಗಳು ಹೆಚ್ಚು ಜಾಗರೂಕರಾಗಿರಬೇಕು. ಕಾನೂನು ಸುವ್ಯವಸ್ಥೆ ಮತ್ತು ಯಾವುದೇ ಅಹಿತಕರ ಘಟನೆಗಳಿಗೆ ಹಿರಿಯ ಅಧಿಕಾರಿಗಳನ್ನೇ ಹೊಣೆ ಮಾಡುವುದಾಗಿ ಈ ಮೊದಲೇ ಎಚ್ಚರಿಕೆ ನೀಡಲಾಗಿತ್ತು. ಅದರ ಹೊರತಾಗಿಯೂ ಬಳ್ಳಾರಿಯಲ್ಲಿ ಗಲಭೆ ಪೀಡಿತ ಪ್ರದೇಶದಲ್ಲಿ ಎಸ್‌ಪಿ ಇರಲಿಲ್ಲ ಎಂದರೆ ಇಂತಹ ನಿರ್ಲಕ್ಷ್ಯವನ್ನು ಸಹಿಸಲಾಗುವುದಿಲ್ಲ.**

**- ಸಿದ್ದರಾಮಯ್ಯ, ಮುಖ್ಯಮಂತ್ರಿ**

# ಕಸವೆಂದು ಬಿಸಾಡುವ ತೆಂಗಿನಕಾಯಿ ಚಿಪ್ಪಿಗೆ ಬಂಗಾರದ ಬೆಲೆ

## ■ ವಿದೇಶಕ್ಕೆ ರಫ್ತಾಗುವ ಕೆಜಿ ಚಿಪ್ಪಿಗೆ ಎಷ್ಟು ಬೆಲೆ ಗೊತ್ತಾ?, ಅರೆಮಲೆನಾಡಿನಲ್ಲಿಯೂ ಚಿಪ್ಪು ಮಾರಾಟ ಮಾಡಲು ಶುರು

• **ಉದಯವಾಹಿನಿ, ಮೈಸೂರು:**

ಹಣಕಾಸಿನ ವ್ಯವಹಾರ ನಡೆಯುವಾಗ ಕೈಗೆ ಕೊಟ್ಟ ತೆಂಗಿನಕಾಯಿ ಚಿಪ್ಪು ಎಂದು ಮೂದಲಿಸುವುದು ವಾಡಿಕೆ. ಆದರೆ, ಇನ್ಮುಂದೆ ಯಾರೂ ಆ ಮಾತನ್ನು ಆಡುವಂತಿಲ್ಲ. ಏಕೆಂದರೆ ಈಗ ತೆಂಗಿನಕಾಯಿ ಚಿಪ್ಪಿಗೂ ಉತ್ತಮ ಬೆಲೆ ಬಂದಿದೆ. ಹಾಗಾಗಿ ವ್ಯಾಪಾರಿಗಳು ಮನೆ ಬಾಗಿಲಿಗೆ ಬಂದು ತೆಂಗಿನಕಾಯಿ ಚಿಪ್ಪು ಖರೀದಿಸುತ್ತಿದ್ದಾರೆ. ತೆಂಗಿನಕಾಯಿ ಚಿಪ್ಪು ಸಾಮಾನ್ಯವಾಗಿ ಇದ್ದಿಲು ಹಾಗೂ ಅಲಂಕಾರಿಕ ವಸ್ತುಗಳಿಗೆ ಮಾತ್ರ ಬಳಕೆಯಾಗುತ್ತಿತ್ತು. ಆದರೆ, ತೆಂಗಿನಕಾಯಿ ಚಿಪ್ಪಿನ ಇದ್ದಿಲು ವಿದೇಶಕ್ಕೆ ರಫ್ತು ಆಗುತ್ತಿದೆ. ಅಲ್ಲದೇ ಎಳನೀರಿಗೆ ಬೇಡಿಕೆ ಹೆಚ್ಚಾಗಿದ್ದರಿಂದ ರೈತರು ಎಳನೀರು ಮಾರಾಟ ಮಾಡಿದ್ದಾರೆ. ಇದರಿಂದ ತೆಂಗಿನಕಾಯಿ ಆವಕ ಕಡಿಮೆಯಾಗಿದೆ. ಹೀಗಾಗಿ ತೆಂಗಿನಕಾಯಿ ಚಿಪ್ಪಿಗೆ ಬೇಡಿಕೆ ಹೆಚ್ಚಾಗಿದೆ ಎನ್ನುತ್ತಾರೆ ಚಿಪ್ಪಿನ ವ್ಯಾಪಾರಿಗಳು.



ಉದಯವಾಹಿನಿ ಚಿತ್ರ

### ಮಲೆನಾಡು, ಕರಾವಳಿಯಲ್ಲೂ ಬೇಡಿಕೆ

ತೆಂಗಿನತೋಟ, ತೆಂಗಿನ ಮರ ಇರುವವರು ಮಲೆನಾಡು, ಕರಾವಳಿ ಪ್ರದೇಶದಲ್ಲಿ ಕಾಯಿಮಟ್ಟೆ ಮತ್ತು ಚಿಪ್ಪನ್ನು ನೀರೊಲೆಗೆ ಹಾಕುತ್ತಿದ್ದರು. ನೀರೊಲೆ ಇಲ್ಲದವರು ಇರುವವರ ಮನೆಗಳಿಗೆ ಚೀಲದಲ್ಲಿತುಂಬಿಕೊಡುತ್ತಿದ್ದರು. ಯಾವಾಗ ಗುಜರಿಯವರು ಬೀದಿಗಳಲ್ಲಿ ಚಿಪ್ಪು ಕೇಳಿಕೊಂಡು ಬರಲಾರಂಭಿಸಿದರೋ ಆಗಿನಿಂದ ಚಿಪ್ಪನ್ನು ಪ್ರತ್ಯೇಕವಾಗಿ ಸಂಗ್ರಹಿಸಿಟ್ಟು ಮಾರಾಟ ಮಾಡುತ್ತಿದ್ದಾರೆ.


### ಚಿಪ್ಪಿಗೂ ಬೆಲೆ ಏರಿಕೆ

ತೆಂಗಿನಮರದ ಪ್ರತಿಯೊಂದು ಭಾಗ ಒಂದಿಲ್ಲೊಂದು ರೂಪದಲ್ಲಿ ಮನುಷ್ಯನಿಗೆ ಬಹು ಉಪಯೋಗಿಯಾಗಿದೆ. ಎಳನೀರು, ತೆಂಗಿನಕಾಯಿ, ಕೊಬ್ಬರಿ, ಸೌದೆ, ತೆಂಗಿನಗರಿಯ ಪೊರಕೆ, ಕೊಬ್ಬರಿಎಣ್ಣೆ, ಮನೆ ಚಾವಣಿಗೆ ತೆಂಗಿನಗರಿ ಆಶ್ರಯ, ತೆಂಗಿನಕಾಯಿ ಸುಲಿದ ನಂತರ ತೆಂಗಿನಕಾಯಿಮಟ್ಟೆ ಬಿಸಿನೀರು ಕಾಯಿಸಲು ಹೀಗೆ ಉಪಯೋಗಿಸಲಾಗುತ್ತಿದೆ. ತೆಂಗಿನಕಾಯಿ ಚಿಪ್ಪಿಗೆ ಈಗ ಎಲ್ಲಕ್ಕಿಂತ ಹೆಚ್ಚು ಬೇಡಿಕೆ ಬಂದಿರುವುದು ವ್ಯಾಪಾರಿಗಳೊಂದಿಗೆ ಜನರಲ್ಲೂಸಂತಸ ಮೂಡಿಸಿದೆ. ಜತೆಗೆ ಲಾಭ ತರುತ್ತಿದೆ. ಮುಂದೆ ಯಾರೂ ತೆಂಗಿನಕಾಯಿ ಚಿಪ್ಪಿನ ಬಗ್ಗೆ ಅಗ್ಗವಾಗಿ ಮಾತನಾಡುವಂತಿಲ್ಲ. ಏಕೆಂದರೆ ಚಿಪ್ಪಿಗೂ ಒಂದು ಬೆಲೆ ಇದೆ. ನಾನು ಈ ಹಿಂದಿನಿಂದಲೂ ಈರುಳ್ಳಿ ವ್ಯಾಪಾರ ಮಾಡುತ್ತಿದ್ದೆ. ಮಾರುಕಟ್ಟೆಗೆ ಬಂದ ಒಬ್ಬರು ತೆಂಗಿನಕಾಯಿ ಚಿಪ್ಪಿನ ವ್ಯಾಪಾರದ ಬಗ್ಗೆ ತಿಳಿಸಿದರು. ಈಗ ಅದೇ ವ್ಯಾಪಾರ ಮಾಡುತ್ತಿದ್ದು, ಉತ್ತಮವಾಗಿದೆ. ಚಿಪ್ಪು ಶೇಖರಣೆ ಮಾಡಿ ತಿಪಟೂರು, ಅರಸೀಕೆರೆ ಸೇರಿದಂತೆ ಇತರೆಡೆ ಮಾರಾಟ ಮಾಡುತ್ತೇನೆ ಎಂದು ಮಾಚಬಾಯನಹಳ್ಳಿ ತೆಂಗಿನಚಿಪ್ಪು ಖರೀದಿದಾರ ರಾಘವೇಂದ್ರ, ಹೇಳಿದರು.

**ತೆಂಗಿನ ಚಿಪ್ಪು ಬಿಸಾಡುವ ಅಗತ್ಯವಿಲ್ಲ:** ಮನೆಗಳಲ್ಲಿ ತೆಂಗಿನಕಾಯಿ ಸುಲಿದು ಅದರ ಸಿಪ್ಪೆಯನ್ನು ಒಲೆಗೆ ಹಾಕುತ್ತಾರೆ. ತೆಂಗಿನಕಾಯಿ ಒಡೆದ ಬಳಿಕ ಚಿಪ್ಪನ್ನು ಕೂಡ ಒಲೆಗೆ ಹಾಕುವುದು, ಇಲ್ಲವೆ ತ್ಯಾಜ್ಯದೊಂದಿಗೆ ಬಿಸಾಡುವುದು ಹಳ್ಳಿಗಳಲ್ಲಿಸಾಮಾನ್ಯ. ಆದರೆ, ಹೀಗೆ ಬಿಸಾಕುವ ತೆಂಗಿನಚಿಪ್ಪಿಗೂ ಬೆಲೆ ಬಂದಿರುವುದರಿಂದ ಮಹಿಳೆಯರು ಈಗ ತೆಂಗಿನಕಾಯಿ ಉಪಯೋಗಿಸಿ ಚಿಪ್ಪನ್ನು ಸಂಗ್ರಹ ಮಾಡಲಾರಂಭಿಸಿದ್ದಾರೆ. ವ್ಯಾಪಾರಿಗಳು ಎಲ್ಲೆಡೆ ತೆಂಗಿನಕಾಯಿಯ ಒಂದು ಚಿಪ್ಪಿಗೆ ಒಂದು ರೂ. ಕೊಟ್ಟು ಖರೀದಿಸುತ್ತಿದ್ದಾರೆ. ಕೆಲವರು ಕಿಲೋ ಲೆಕ್ಕದಲ್ಲಿತೆಂಗಿನಕಾಯಿ ಚಿಪ್ಪನ್ನು ಖರೀದಿಸುತ್ತಿದ್ದು, ಒಂದು ಕೆಜಿಗೆ 20– 22 ರೂ. ನೀಡುತ್ತಿದ್ದಾರೆ. ಖರೀದಿಸಿದ ಚಿಪ್ಪನ್ನು ಶೇಖರಣೆ ಮಾಡಿ ತಿಪಟೂರು ಹಾಗೂ ಅರಸೀಕೆರೆ ಸೇರಿದಂತೆ ಇತರ ಭಾಗಗಳಿಗೆ ರವಾನಿಸಲಾಗುತ್ತಿದೆ.

# ಅಂಬೇಡ್ಕರ್ ಪುತ್ಥಳಿ ಲೋಕಾರ್ಪಣೆ ; ಮಹಾನ್ ತ್ಯಾಗಿಯ ಸ್ಮರಣೆ

• **ಉದಯವಾಹಿನಿ, ಗುಂಡ್ಲುಪೇಟೆ**



ಉದಯವಾಹಿನಿ ಚಿತ್ರ

ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿ ನಿರ್ಮಾಣ ಮಾಡುವ ಜೊತೆಗೆ ಅವರ ತತ್ವಾದರ್ಶಗಳನ್ನ ಮೈಗೂಡಿಸಿಕೊಂಡು ಹೋದಲ್ಲಿ ನಮ್ಮೆಲ್ಲರ ಜೀವನ ಸಾರ್ಥಕತೆ ಕಾಣುತ್ತದೆ ಎಂದು ಅವರು ಅಭಿಪ್ರಾಯಪಟ್ಟರು, ತಾಲ್ಲೂಕಿನ ಕೋಟೆಕೆರೆ ಗ್ರಾಮದಲ್ಲಿ ನಿರ್ಮಾಣವಾಗಿದ್ದ ಬಾಬಾ ಸಾಹೇಬರ ಪುತ್ಥಳಿಯನ್ನ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.


ಮಹಾನ್ ನಾಯಕ ನೀಡಿದ ಸಂವಿಧಾನ ಇಡೀ ಜಗತ್ತಿಗೆ ಮಾದರಿಯಾಗಿದೆ, ಸಂವಿಧಾನವನ್ನ ದೇಶಕ್ಕೆ ಅರ್ಪಿಸಿ ಎಲ್ಲರೂ ಒಂದೇ ಎಂದು ಸಾರಿದ ಮಹಾತ್ಮನ ಗುಣಗಾನ ಮಾಡಿದರೆ ಸಮಯ ಸಾಲುವುದಿಲ್ಲ, ಶಿಕ್ಷಣದ ಮಹತ್ವವನ್ನ ತಿಳಿಸಿಕೊಟ್ಟ ಭಾಗ್ಯವಿಧಾತನ ಇಡೀ ಪ್ರಪಂಚವೇ ಮೆಚ್ಚಿ ಕೊಂಡಾಡುತ್ತಿದೆ ಎಂದು ಬಣ್ಣಿಸಿದರು. ಮಾಜಿ ಶಾಸಕ ನಿರಂಜನ್ ಕುಮಾರ್ ಮಾತನಾಡಿ ಅಂಬೇಡ್ಕರ್ ಅವರ ಬಗ್ಗೆ ಎಷ್ಟು ಅಧ್ಯಯನ ಮಾಡಿದರು ಸಾಲದು ಅವರು ಜೀವನವನ್ನ ತ್ಯಾಗ ಮಾಡಿ ಸಂವಿಧಾನವನ್ನು ದೇಶಕ್ಕೆ ಅರ್ಪಣೆ ಮಾಡಿದ್ದಾರೆ ಆ ಸಂವಿಧಾನದಿಂದಲ್ಲೇ ನಾವು ನೀವುಗಳು ಒಂದು ಕಡೆ ಸೇರಿ ಕಾರ್ಯಕ್ರಮ ಮಾಡಲು ಅವಕಾಶ ಮಾಡಿಕೊಟ್ಟಿದೆ, ಅಂಬೇಡ್ಕರ್ ಅವರ ಪ್ರತಿಮೆ, ಪುತ್ತಳಿಗಳು ನಿರ್ಮಾಣವಾಗುತ್ತಿರುವುದು ಸಂತಸಕರ ಸಂಗತಿ ಎಂದರು. ಯುವ ಸಮೂಹ ಉನ್ನತ ಶಿಕ್ಷಣ ಪಡೆಯುವ ಮೂಲಕ ಸಮ ಸಮಾಜ ನಿರ್ಮಾಣ ಮಾಡುವುದರ ಕಡೆಗೆ ಸಾಗಬೇಕೆಂದರು.

ಕಾರ್ಯಕ್ರಮದಲ್ಲಿ ಚಾಮುಲ್ ಮಾಜಿ ಅಧ್ಯಕ್ಷ ನಂಜುಂಡಪ್ರಸಾದ್, ವೀರಶೈವ ಮಹಾಸಭಾ ತಾಲ್ಲೂಕು ಅಧ್ಯಕ್ಷ ರವಿ ಕಮರಹಳ್ಳಿ ತಾ. ಪಂ ಮಾಜಿ ಸದಸ್ಯ ಬಸವರಾಜಪ್ಪ, ಕುರುಬರಹುಂಡಿ ಮಹದೇವಸ್ವಾಮಿ, ರಂಗಸ್ವಾಮಿ, ಯುವ ಮುಖಂಡ ಡಾ. ನವೀನ್ ಮೌರ್ಯ, ಸುಭಾಷ್ ಮಾಡ್ರಹಳ್ಳಿ, ವಕೀಲ ಮಾಧು, ರಂಗಪ್ಪ, ಶಿಕ್ಷಕ ಗೋಪಾಲಸ್ವಾಮಿ, ಸೇರಿದಂತೆ ಗ್ರಾಮಸ್ಥರು, ಮುಖಂಡರುಗಳು ಹಾಜರಿದ್ದರು.

> ನಮ್ಮ ಊರಲ್ಲಿ ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಮಾಡಬೇಕು ಎಂದು ಜಿದ್ದಿಗೆ ಬಿದ್ದು ನಿರ್ಮಾಣ ಮಾಡಿರುವ ಅಂಬೇಡ್ಕರ್ ಅವರ ಪುತ್ಥಳಿ ಬಹಳ ಸುಂದರವಾಗಿ ಕಾಣುತ್ತಿದೆ ನೋಡುತ್ತಿದ್ದರೆ ಮತ್ತೆ ಮತ್ತೆ ನೋಡಬೇಕು ಅನ್ನಿಸುತ್ತಿದೆ ಸಂತೋಷದ ವಿಚಾರ ಅದೇ ರೀತಿ ವಿದ್ಯಾರ್ಥಿಗಳು ಯುವ ಸಮೂಹ ಅವರ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು ಮುನ್ನೆಲೆಗೆ ಬರಬೇಕು.
>
> –ಡಾ. ಶಿವಕುಮಾರ್
> ಮುಖ್ಯ ಭಾಷಣಕಾರ

# ಟೌನ್ ಶಿಪ್ ಯೋಜನೆಗೆ ಭೂ ಸ್ವಾಧೀನಕ್ಕೆ ರೈತರ ವಿರೋಧ

• **ಉದಯವಾಹಿನಿ, ರಾಮನಗರ**



ತಾಲ್ಲೂಕಿನ ಬಿಡದಿ ಹೋಬಳಿಯ ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಭೂ ಸ್ವಾಧೀನ ವಿರೋಧಿಸಿ, ಆ ಭಾಗದ ರೈತರು ನಗರದ ಕಂದಾಯ ಭವನದಲ್ಲಿರುವ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಚೇರಿ ಆವರಣದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಭೂ ಸ್ವಾಧೀನವಾಗಲಿರುವ 26 ಗ್ರಾಮಗಳ ರೈತರ ಅಹವಾಲು ಆಲಿಕೆ ಸಭೆಯನ್ನು ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರು ಕಚೇರಿಯಲ್ಲಿ ಹಮ್ಮಿಕೊಂಡಿದ್ದರು. ವಿಷಯ ತಿಳಿದು ಮಹಿಳೆಯರು ಸೇರಿದಂತೆ ನೂರಕ್ಕೂ ಹೆಚ್ಚು ಮಂದಿ ಸ್ಥಳದಲ್ಲಿ ಜಮಾಯಿಸಿದರು.

ನಮ್ಮ ಭೂಮಿ ನಮ್ಮ ಹಕ್ಕು, ಕೊಡುವುದಿಲ್ಲ ಕೊಡುವುದಿಲ್ಲ ಭೂಮಿ ಕೊಡುವುದಿಲ್ಲ ಎಂದು ಘೋಷಣೆಗಳನ್ನು ಕೂಗಿದ ರೈತರು, ಶಾಸಕ ಬಾಲಕೃಷ್ಣ ಹಾಗೂ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಅಹವಾಲು ಸಭೆ ನಡೆಯುತ್ತಿದ್ದ ಕಚೇರಿ ಎದುರು ಕುಳಿತು ಧರಣಿ ಕುಳಿತರು. ಸ್ಥಳಕ್ಕೆ ಬಂದ ಬಾಲಕೃಷ್ಣ ಧರಣಿನಿರತರ ಮನವೊಲಿಸಲು ಮುಂದಾದರು. ಇದು ಸರ್ಕಾರದ ಯೋಜನೆ. ಯೋಜನೆಯನ್ನು ನಾನು ರದ್ದು ಮಾಡಲು ಸಾಧ್ಯವಿಲ್ಲ. ನಿಮ್ಮ ಅಹವಾಲುಗಳನ್ನು ನನಗೆ ತಿಳಿಸಿ. ಸರ್ಕಾರದ ಗಮನಕ್ಕೆ ತಂದು ಪರಿಹರಿಸುವೆ ಎಂದು ಭರವಸೆ ನೀಡಿದರು.

ಅದಕ್ಕೆ ಒಪ್ಪದ ರೈತರು, ಯೋಜನೆಯನ್ನು ರದ್ದುಪಡಿಸಿ ನಮ್ಮ ಭೂಮಿಯನ್ನು ನಮಗೆ ಬಿಟ್ಟು ಬಿಡಿ ಎಂದು ಆಗ್ರಹಿಸಿದರು. ಅದು ನನ್ನ ಕೈಯಲ್ಲಿ ಇಲ್ಲ ಎಂದು ಬಾಲಕೃಷ್ಣ ಹೇಳಿದಾಗ, ರೈತರು ಆಕ್ರೋಶ ಹೊರಹಾಕಿದರು. ಮನವೊಲಿಕೆಗೆ ರೈತರು ಬಗ್ಗದಿದ್ದಾಗ ಬಾಲಕೃಷ್ಣ ಕಚೇರಿ ಒಳಗೆ ಹೋದರು. ರೈತರು ಹೊರಗಡೆ ಧರಣಿ ಮುಂದುವರಿಸಿದರು. ಕೆಲ ಹೊತ್ತಿನ ನಂತರ ಹೊರಬಂದ ಬಾಲಕೃಷ್ಣ ಮತ್ತೆ ರೈತರ ಮನವೊಲಿಸಲು ಯತ್ನಿಸಿದರು. ಆಗಲೂ ರೈತರು ತಮ್ಮ ಪಟ್ಟು ಸಡಿಲಿಸಲಿಲ್ಲ. ಕಡಗೆ ಪೊಲೀಸರ ನೆರವಿನೊಂದಿಗೆ ಬಾಲಕೃಷ್ಣ ಕಚೇರಿಯಿಂದ ಹೊರ ನಡೆದರು.

# ತಮಿಳುನಾಡಿನಲ್ಲಿ ಶಬರಿ ಮಲೇ ಯಾತ್ರಿಗಳ ಮೇಲೆ ದಬ್ಬಾಳಿಕೆ : ಕರವೇ ಪ್ರತಿಭಟನೆ

• **ಉದಯವಾಹಿನಿ, ಗುಂಡ್ಲುಪೇಟೆ**



ಉದಯವಾಹಿನಿ ಚಿತ್ರ

ಕರ್ನಾಟಕದಿಂದ ಶಬರಿ ಮಲೆಗೆ ತೆರಳುವ ಯಾತ್ರಾರ್ಥಿಗಳ ವಾಹನಗಳನ್ನ ತಡೆದು ಪುಂಡಾಟ ತೋರುವ ಮೂಲಕ ಕನ್ನಡ ಭಾವುಟ ತೆರವು ಮಾಡುವಂತೆ ಬಲವಂತವಾಗಿ ಹಲ್ಲೆ ನಡೆಸಿರುವುದನ್ನ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಬಣದ ಕಾರ್ಯಕರ್ತರು ಶನಿವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪ್ರವಾಸಿ ಮಂದಿರದಿಂದ ಹೊರಟ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿ ಮೂಲಕ ಸಾಗಿ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಮಾನವ ಸರಪಳಿ ನಿರ್ಮಿಸಿ ತಮಿಳುನಾಡು ವಿರುದ್ಧ ದಿಕ್ಕಾರದ ಘೋಷಣೆಗಳನ್ನ ಕೂಗಿ ಆಕ್ರೋಶ ಹೊರಹಾಕಿದರು. ಬಳಿಕ ತಹಶೀಲ್ದಾರ್ ಕಚೇರಿ ಮುಂಭಾಗ ಜಮಾಯಿಸಿದ ಪ್ರತಿಭಟನಕಾರರು ತಮಿಳುನಾಡಿನಲ್ಲಿ ಕೆಲ ಕಿಡಿಗೇಡಿಗಳು ನಡೆಸುತ್ತಿರುವ ಕೃತ್ಯಕ್ಕೆ ಅಂಕುಶ ಹಾಕವಲ್ಲಿ ಅಲ್ಲಿನ ಎಂ.ಕೆ ಸ್ಟಾಲೀನ್ ಸರ್ಕಾರ ವಿಫಲವಾಗಿದೆ ಎಂದು ಕಿಡಿಕಾರಿದರು.

ಸಂಘಟನೆ ಜಿಲ್ಲಾ ಉಪಾಧ್ಯಕ್ಷ ರಾಜೇಂದ್ರ ನಾಯಕ್ ಮಾತನಾಡಿ ರಾಜ್ಯದಲ್ಲಿ ನೆಲೆಯೂರಿರುವ ತಮಿಳಿಗರಿಗೆ ರಕ್ಷಣೆಯಿದೆ ಆದರೆ ವರ್ಷಕೊಮ್ಮೆ ಶಬರಿ ಮಲೇ ಯಾತ್ರೆಗೆ ತೆರಳುವವರನ್ನ ಕಂಡರೆ ಕೆಲ ತಮಿಳಿಗರಿಗೆ ಸಹಿಸಲಾಗುತ್ತಿಲ್ಲ, ಕಿಡಿಗೇಡಿಗಳ ಈ ನಡೆ ಎರಡು ರಾಜ್ಯಗಳ ನಡುವೆ ಸಂಘರ್ಷ ಉಂಟುಮಾಡುವ ಎಲ್ಲಾ ಲಕ್ಷಣಗಳಿವೆ, ಕನ್ನಡಿಗರು ಶಾಂತಿಪ್ರಿಯರೆ ಹೊರತು ಕೈಲಾಗದವರಲ್ಲ, ನಮ್ಮಲ್ಲಿರುವ ತಮಿಳಿಗರು ತಮ್ಮ ರಾಜ್ಯದಲ್ಲಿ ನಡೆಯುತ್ತಿರುವ ದೌರ್ಜನ್ಯ ಕುರಿತಂತೆ ತುಟಿ ಬಿಚ್ಚದಿರುವುದು ವಿಪರ್ಯಾಸ, ಇದೆ ರೀತಿಯಾಗಿ ಕನ್ನಡದ ಅಸ್ಮಿತೆಗೆ ದಕ್ಕೆ ತರುವ ಪ್ರಕರಣ ಹೆಚ್ಚಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟಕೆ ಮುಂದಾಗಬೇಕಾಗುತ್ತದೆ ಆಗ ತಮಿಳಿಗರು ಪಶ್ಚಾತ್ತಾಪ ಪಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಈ ವೇಳೆ ಗೌರವಾಧ್ಯಕ್ಷ ಮಾಧು, ಟೌನ್ ಅಧ್ಯಕ್ಷ ರಮೇಶ್ ನಾಯಕ್, ನಾಗರಾಜು, ವಸಂತ, ಸ್ವಾಮಿ, ಕುನಾಲ್ ಗೌಡ ಸೇರಿದಂತೆ ಹಲವರು ಹಾಜರಿದ್ದರು.

# ರಾಜ್ಯಮಟ್ಟದ ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನೆ

• **ಉದಯವಾಹಿನಿ, ನಾಗಮಂಗಲ**



ಉದಯವಾಹಿನಿ ಚಿತ್ರ

ನೈತಿಕ, ಆಧ್ಯಾತ್ಮಿಕ, ಸಾಮಾಜಿಕ ಮತ್ತು ಭಾವನಾತ್ಮಕ ಗುಣಗಳನ್ನು ಮೈಗೂಡಿಸಿಕೊಂಡಾಗ ಜೀವನ ಯಶಸ್ಸಿನ ಹಾದಿಯಲ್ಲಿ ಸಾಗಲು ಸಾಧ್ಯ ಎಂದು ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕಿನ ಜಕ್ಕನಕಟ್ಟಿಯ ಕಿತ್ತೂರು ರಾಣಿಚನ್ನಮ್ಮ ವಸತಿ ಶಾಲೆ ವಿದ್ಯಾರ್ಥಿನಿ ಅನುಷಾ ಕರಿಬಸಯ್ಯ ಹಿರೇಮಠ ಹೇಳಿದರು. ಬಾಲಗಂಗಾಧರನಾಥ ಸ್ವಾಮೀಜಿಯವರ 81ನೇ ಜಯಂತ್ಯುತ್ಸವ, 13ನೇ ವರ್ಷದ ಸಂಸ್ಮರಣಾ ಮಹೋತ್ಸವದ ಅಂಗವಾಗಿ ಆದಿಚುಂಚನಗಿರಿ ಕ್ಷೇತ್ರದಲ್ಲಿ ನಡೆದ ರಾಜ್ಯಮಟ್ಟದ ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ಮಾನವೀಯತೆ, ಪ್ರಾಮಾಣಿಕತೆ, ಸಹಾನುಭೂತಿ, ಪ್ರೀತಿ, ಶಕ್ತಿ, ಸಹಿಷ್ಣುತೆಯನ್ನು ಮಕ್ಕಳು ಅಳವಡಿಸಿಕೊಳ್ಳಬೇಕು. ಪರಿಶ್ರಮದಿಂದ ಮಾತ್ರ ಯಶಸ್ಸು ಖಂಡಿತ ಎಂದರು.

**ಹಾಳು ಮಾಡುತ್ತಿರುವ ಮೊಬೈಲ್:** ಸಮ್ಮೇಳನ ಸರ್ವಾಧ್ಯಕ್ಷರಾಗಿದ್ದ ಶಿವಮೊಗ್ಗದ ಜಾವಳ್ಳಿಯ ಜ್ಞಾನದೀಪ ಶಾಲೆಯ ವಿದ್ಯಾರ್ಥಿ ಪಿ.ಬಿ. ಶ್ರೀಕಾಂತ್, ಮೊಬೈಲ್ ಫೋನ್ ನಮ್ಮಂತಹ ಎಳೆಯ ಮನಸ್ಸುಗಳನ್ನು ಆಕರ್ಷಿಸಿ ನಮ್ಮ ಸಮಯ ಮತ್ತು ಮನಸ್ಸು ಎರಡನ್ನೂ ಹಾಳು ಮಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಮಕ್ಕಳ ಮನಸ್ಸು ದೇವರ ಮನಸ್ಸಿದ್ದಂತೆ. ಆ ಮುಗ್ಧ ಮನಸ್ಸಿನಲ್ಲಿ ಕಲ್ಮಶ ಇರುವುದಿಲ್ಲ. ಭಾವನೆಗಳಿಗೆ ಭಾಷೆ ಲೇಪನ ಕೊಟ್ಟು ಬರಹ ಮೂಡಿಸಿದರೆ ವೇದ ಉಪನಿಷತ್ತುಗಳಿಗೆ ಸಮನಾದ ಸತ್ಯ ಹೊರಹೊಮ್ಮುತ್ತದೆ ಎಂದರು. ಕನ್ನಡ ಸಾಹಿತ್ಯ ಪರಿಷತ್ ಶಿವಮೊಗ್ಗ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಮಂಜುನಾಥ್, ಮೈಸೂರಿನ ಪೂರ್ಣಚೇತನ ಶಾಲೆಯ 4ನೇ ತರಗತಿ ವಿದ್ಯಾರ್ಥಿನಿ ಪೃಥು ಪಿ.ಅದ್ವೈತ್, ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಹಿ.ಚಿ.ಬೋರಲಿಂಗಯ್ಯ, ವಾಗ್ಮಿ ಪ್ರೊ.ಎಂ.ಕೃಷ್ಣಗೌಡ ಮತ್ತು ಅಂಕಣಕಾರ ಬಿ.ಚಂದ್ರೇಗೌಡ ಮಾತನಾಡಿದರು. ಅಂತರರಾಷ್ಟ್ರೀಯ ಷಟಲ್ ಬ್ಯಾಡ್ಮಿಂಟನ್ ಆಟಗಾರರಾದ ಎಸ್.ಪವನ್ ಮತ್ತು ಎಸ್.ಪುನೀತ್ ರಾಷ್ಟ್ರಧ್ವಜ ಹಾಗೂ ಗೋಲ್ಡನ್ ಬುಕ್ಆಫ್ ವರ್ಲ್ಡ್ ರೆಕಾರ್ಡ್ ಯೋಗ ವಿದ್ಯಾರ್ಥಿನಿ ಬಿ.ಕೆ.ಸಿಂಚನಾ ನಾಡ ಧ್ವಜಾರೋಹಣ ನೆರವೇರಿಸಿದರು.

> ಭಾವನೆ ಶುದ್ಧವಾಗಿದ್ದರೆ ಭಾಷೆಯ ಬೆಂಬಲವಿರುವುದಿಲ್ಲ. ಕಲಿಯಬಾರದ ಕಲಿಯಬಹುದಾದ ಎಲ್ಲಾ ಭಾಷೆಗಳನ್ನು ಕಲಿತರೆ ಭಾವನೆ ಶುದ್ಧವಾಗಿರುವುದಿಲ್ಲ
>
> –ನಿರ್ಮಲಾನಂದನಾಥ ಸ್ವಾಮೀಜಿ
> ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ

**ಶಿಕ್ಷಕರ ಗೋಳು ಕೇಳುವವರೇ ಇಲ್ಲ:** 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಮೊಬೈಲ್ ಫೋನ್ ಹಿಡಿದರೆ ದಂಡ ಹಾಕುವಂತೆ ರಾಜ್ಯ ಸರ್ಕಾರ ಕಟ್ಟುನಿಟ್ಟಿನ ಆದೇಶ ಹೊರಡಿಸಬೇಕು ಎಂದು ಸಮ್ಮೇಳನದ ಸರ್ವಾಧ್ಯಕ್ಷ ಪಿ.ಬಿ. ಶ್ರೀಕಾಂತ್ ಒತ್ತಾಯಿಸಿದರು.

ಈ ಆದೇಶ ಪಾಲಿಸಿದರೆ ಮಾತ್ರ ಮುಂದಿನ ಯುವ ಪೀಳಿಗೆ ಅಭಿವೃದ್ಧಿಯಾಗಲು ಸಾಧ್ಯ ಎಂದು ಪ್ರತಿಪಾದಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಗೋಳು ಕೇಳುವವರೇ ಇಲ್ಲದಿರುವುದು ಅತ್ಯಂತ ವಿಪರ್ಯಾಸ. ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವ ಯೋಚನೆ ಕೈಬಿಟ್ಟು ಸಬಲೀಕರಣಕ್ಕೆ ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.

# ಇ-ಸ್ವತ್ತು ಪಡೆಯಲು ಗ್ರಾಮೀಣ ಪ್ರದೇಶಗಳಲ್ಲಿ ತಾಂತ್ರಿಕ ಅಡಚಣೆ

• **ಉದಯವಾಹಿನಿ, ಕುಣಿಗಲ್**




ಉದಯವಾಹಿನಿ ಚಿತ್ರ

ನಿವೇಶನ, ಮನೆಗಳ ಇ-ಸ್ವತ್ತು ದಾಖಲೆಗಳಿಗಾಗಿ ಗ್ರಾಮೀಣ ಪ್ರದೇಶದ ರೈತರು ನಿತ್ಯ, ಗ್ರಾಮ ಪಂಚಾಯಿತಿ ಕಾರ್ಯಾಲಯಗಳಿಗೆ ಭೇಟಿ ನೀಡಿ ಅಧಿಕಾಗಳನ್ನು ವಿಚಾರಿಸುವ ಪರಿಪಾಠ ಹೆಚ್ಚಾಗಿದ್ದರೂ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ರಾಜ್ಯ ಸರ್ಕಾರ ಇ-ಸ್ವತ್ತು ಯೋಜನೆಯಡಿ ಗ್ರಾಮೀಣ ಪ್ರದೇಶದ ಜನರಿಗೆ ಅಧಿಕೃತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದ 15 ದಿನದಲ್ಲಿ ಇ-ಖಾತೆ ವಿತರಣೆ ಮಾಡುವುದಾಗಿ ತಿಳಿಸಿತ್ತು. ತಾಲ್ಲೂಕಿನ 36 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 92,355 ಆಸ್ತಿಗಳಿದ್ದು, ಮೊದಲ ಆವೃತ್ತಿಯಲ್ಲಿ 3,82,177 ಆಸ್ತಿಗಳ ಇ-ಸ್ವತ್ತು ಪಡೆಯಲಾಗಿದೆ. ಎರಡನೇ ಆವೃತ್ತಿಗೆ 54,138 ಆಸ್ತಿಗಳು ಬಾಕಿ ಉಳಿದಿವೆ. ಪುರಸಭೆ ವ್ಯಾಪ್ತಿಯಲ್ಲಿ 10,200 ಆಸ್ತಿಗಳಿದ್ದು ಮೊದಲ ಆವೃತ್ತಿಯಲ್ಲಿ ನಾಲ್ಕು ಸಾವಿರ ಇ- ಸ್ವತ್ತು ಪೂರ್ಣಗೊಂಡಿವೆ. 6,000 ಬಾಕಿ ಇದ್ದು, 400 ಅರ್ಜಿಗಳು ಬಾಕಿ ಇದೆ.

ಸಾರ್ವಜನಿಕರ ಆಸ್ತಿ ಭದ್ರತೆ ಮತ್ತು ಸ್ವತ್ತು ರಕ್ಷಣೆಗೆ ರಾಜ್ಯ ಸರ್ಕಾರ ಇ ಸ್ವತ್ತು ವ್ಯವಸ್ಥೆ ಜಾರಿಗೆ ತಂದಿದ್ದು, ಆಸ್ತಿ ದಾಖಲೆಗಳನ್ನು ಪಾರದರ್ಶಕ ಮತ್ತು ಡಿಜಿಟಲ್ ರೂಪದಲ್ಲಿ ಪಡೆಯಲು ಸರ್ಕಾರ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದ್ದು. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತಾಂತ್ರಿಕ ಮತ್ತು ಸರ್ವರ್ ಸಮಸ್ಯೆಯಿಂದಾಗಿ ಯಾರೊಬ್ಬರೂ ಇ ಖಾತೆ ಪಡೆಯಲು ಸಾಧ್ಯವಾಗಿಲ್ಲ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಹುಲಿಯೂರುದುರ್ಗ ಗ್ರಾಮ ಪಂಚಾಯಿತಿ ಸದಸ್ಯ ಎಚ್.ಎನ್.ನಟರಾಜು, ಸರ್ಕಾರ ಕೇಳಿರುವ 16 ದಾಖಲೆಗಳನ್ನು ಒದಗಿಸಲು ರೈತರು ಪರದಾಡಬೇಕಿದೆ. ನಂತರ ಪಂಚಾಯಿತಿ ಕಂಪ್ಯೂಟರ್ ಅಪರೇಟರ್ ವಿವಿಧ ಇಲಾಖೆಯ (ಕಂದಾಯ, ನೊಂದಣಿ) ತಂತ್ರಾಂಶಗಳೊಂದಿಗೆ ಮಾಹಿತಿ ಪಡೆಯುವ ಸಮಯದಲ್ಲಿ ತಾಂತ್ರಿಕ ಅಡಚಣೆ ಪ್ರಾರಂಭವಾಗುತ್ತದೆ. ಪಿಡಿಒ ಪರಿಶೀಲಿಸಿ ನಂತರ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಕ ಅಧಿಕಾರಿಯಿಂದ ಅನುಮೋದನೆ ಪಡೆಯುವ ಹಂತದಲ್ಲಿ ತಾಂತ್ರಿಕ ಸಮಸ್ಯೆಗಳು ಹೆಚ್ಚಾಗಿ ಇ-ಖಾತೆ ಪಡೆಯಲು ಸಮಸ್ಯೆಯಾಗುತ್ತಿದೆ ಎಂದು ದೂರಿದ್ದಾರೆ. ಹಳೇವೂರು ಗ್ರಾಮಪಂಚಾಯಿತಿ ಅಧ್ಯಕ್ಷ ಶ್ರೀನಿವಾಸ್ ಪ್ರತಿಕ್ರಿಯಿಸಿ, ಇ-ಖಾತೆ ನೀಡುವ ವಿಚಾರದಲ್ಲಿ ಸರ್ಕಾರ ಮೊದಲಬಾರಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಅವಕಾಶ ನೀಡಿತ್ತು. ತರಬೇತಿ ನೀಡಿತ್ತು ಆದರೆ ಪೂರಕ ವಾತಾವರಣ ನಿರ್ಮಿಸಿ ಕೊಡಲು ಸರ್ಕಾರ ವಿಫಲವಾಗಿರುವ ಕಾರಣ ಎಲ್ಲಾ ಗ್ರಾಮ ಪಂಚಾಯಿತಿ ಅಧ್ಯಕ್ಷರು ಅವಕಾಶ ವಂಚಿತರಾಗಿದ್ದಾರೆ. ಉಳಿದಿರುವ ಅಲ್ಪ ಅವಧಿಯಲ್ಲಾದರೂ ಅವಕಾಶ ನೀಡಬೇಕಿದೆ ಎಂದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ವಸಂತ್ ಕುಮಾರ್ ಪ್ರತಿಕ್ರಿಯಿಸಿ. ಸಾಫ್ಟ್‌ವೇರ್ ಸಮಸ್ಯೆಯಾಗಿದೆ. ಪಂಚಾಯಿತಿ ಕಾರ್ಯದರ್ಶಿಯಿಂದ ಅಧ್ಯಕ್ಷ ಲಾಗಿನ್ ನಂತರ ಪಿಡಿಒ ಲಾಗಿನ್‌ನಿಂದ ಇಒ ಲಾಗಿನ್ ಸಮಸ್ಯೆಯಾಗುತ್ತಿದೆ.ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲಾಗುತ್ತಿದ್ದು, ಶೀಘ್ರದಲ್ಲಿ ಪರಿಹಾರ ಸಿಗಲಿದೆ.

> ಇ-ಸ್ವತ್ತು ತಂತ್ರಾಂಶದಲ್ಲಿನ ತಾಂತ್ರಿಕ ಸಮಸ್ಯೆಗಳನ್ನು ಹಂತಹಂತವಾಗಿ ಬಗೆಹರಿಸಲಾಗುತ್ತಿದೆ. ಸಾರ್ವಜನಿಕರು ಗ್ರಾಮ ಪಂಚಾಯಿತಿ ಖಾತಾ ಪಡೆಯಲು ಸಿಟಿಜನ್ ಪೋರ್ಟಲ್‌ನಲ್ಲಿಯೂ ಅರ್ಜಿ ಸಲ್ಲಿಸಬಹುದು.
>
> –ಚಂದ್ರಹಾಸ್ ಇ-ಸ್ವತ್ತು ಜಿಲ್ಲಾ ಮಾಸ್ಟರ್ ಟ್ರೈನರ್

# ಹಿಂದಿನ ವೈಭವಕ್ಕೆ ಮರಳಿದ ಕೆಂಗಲ್ ದನಗಳ ಜಾತ್ರೆ

## ● ಗ್ರಾಮೀಣ ಭಾಗದ ಜನರ ಬಾಯಲ್ಲಿ ಅಯ್ಯನಗುಡಿ ದನಗಳ ಜಾತ್ರೆ ಎಂದೇ ಪ್ರಸಿದ್ಧ, ಗುಂಪುಗುಂಪಾಗಿ ಜಮಾಯಿಸಿರುವ ಎತ್ತು

• **ಉದಯವಾಹಿನಿ, ಚನ್ನಪಟ್ಟಣ**

ಸುಗ್ಗಿಹಬ್ಬ ಸಂಕ್ರಾಂತಿ ಆಚರಣೆ ಮಾರನೇ ದಿನದಿಂದ ಆರಂಭವಾಗುವ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಕೆಂಗಲ್ ಆಂಜನೇಯಸ್ವಾಮಿ ದನಗಳ ಜಾತ್ರೆ ವೈಭವದಿಂದ ಆರಂಭಗೊಂಡಿದೆ. ಗ್ರಾಮೀಣ ಭಾಗದ ಜನರ ಬಾಯಲ್ಲಿ ಐಯ್ಯನಗುಡಿ ದನಗಳ ಜಾತ್ರೆ ಎಂದೇ ಪ್ರಸಿದ್ಧ. ತಾಲ್ಲೂಕಿನ ಜನ-ಜಾನುವಾರು ಅತಿದೊಡ್ಡ ಜಾತ್ರೆಯಾಗಿರುವ ಕೆಂಗಲ್‌ಆಂಜನೇಯಸ್ವಾಮಿ ಜಾತ್ರೆಯಲ್ಲಿ ದೇವಾಲಯದ ಮುಂಭಾಗ, ಬಲಭಾಗ ಮತ್ತು ಎಡಭಾಗದ ವಿಶಾಲ ಪ್ರದೇಶವಿದೆ. ಬೆಂಗಳೂರು ಮೈಸೂರು ಹೆದ್ದಾರಿ ಇಕ್ಕೆಲ ಸೇರಿದಂತೆ ಅಲ್ಲಲ್ಲಿ ಗುಂಪುಗುಂಪಾಗಿ ಜಮಾಯಿಸಿರುವ ಎತ್ತು, ಹಸುಗಳನ್ನು ಕೊಳ್ಳುವ ಭರಾಟೆ ಭರದಿಂದ ಸಾಗಿದೆ. ಸಂಕ್ರಾಂತಿ ಆಚರಣೆ ಬಳಿಕ ತಮ್ಮ ರಾಸುಗಳನ್ನು ಈ ಜಾತ್ರೆಗೆ ವ್ಯಾಪಾರಕ್ಕಾಗಿ ತರುವ ರೈತರು ತಮ್ಮ ಜಾನುವಾರು ವ್ಯಾಪಾರ ಮಾಡಿ ತಮಗೆ ಬೇಕಾದ ಉತ್ತಮ ರಾಸು ಖರೀದಿಸುವುದು ಇಲ್ಲಿನ ಪದ್ಧತಿ. ಕಳೆದ ಕೆಲವು ವರ್ಷಗಳಿಂದ ಜಾತ್ರೆ ಕಳೆಗುಂದಿತ್ತು. ಕೋವಿಡ್ ಹಾಗೂ ಕಾಲುಬಾಯಿ ಜ್ವರದ ಸಂದರ್ಭದಲ್ಲಿ ದನಗಳ ಜಾತ್ರೆಯನ್ನು ಜಿಲ್ಲಾಡಳಿತ ನಿಷೇಧಿಸಿತ್ತು. ಆ ನಂತರ ಕಳೆಗುಂದಿದ್ದ ದನಗಳ ಜಾತ್ರೆ ಈ ವರ್ಷ ಮತ್ತೆ ಕಳೆಗಟ್ಟಿದೆ.

**ವಿವಿಧ ತಾಲ್ಲೂಕುಗಳಿಂದ ಆಗಮನ:** ಚನ್ನಪಟ್ಟಣ, ರಾಮನಗರ ಮಾತ್ರವಲ್ಲದೆ ಕನಕಪುರ, ಮಾಗಡಿ, ಮದ್ದೂರು, ಕುಣಿಗಲ್, ತುಮಕೂರು, ಆನೇಕಲ್, ದೊಡ್ಡಬಳ್ಳಾಪುರ, ನೆಲಮಂಗಲ, ಕೋಲಾರ, ತುರುವೇಕೆರೆ, ತಿಪಟೂರು ತಾಲ್ಲೂಕು ಸೇರಿದಂತೆ ವಿವಿಧ ತಾಲ್ಲೂಕುಗಳ ಜಾನುವಾರು ಹಾಗೂ ಹೊರರಾಜ್ಯಗಳ ಜಾನುವಾರುಗಳು ಸಹ ಆಗಮಿಸಿವೆ. ತಮ್ಮ ಜಾನುವಾರುಗಳನ್ನು ಅತ್ಯುತ್ತಮ ಜೋಡಿ ಎತ್ತುಗಳನ್ನು ಜಾತ್ರೆಗೆ ಕರೆ ತರುವಾಗ ರೈತರು ತಮಟೆ ವಾದ್ಯ, ಪೂಜಾ ಕುಣಿತದೊಂದಿಗೆ ಮೆರವಣಿಗೆ ಮಾಡಿಕೊಂಡು ಕರೆ ತರುವ ವಾಡಿಕೆಯೂ ಇಲ್ಲಿದೆ. ಕೆಲವರು ಪೆಂಡಾಲ್ ಹಾಕಿಸಿ ತಮ್ಮ ಎತ್ತುಗಳನ್ನು ಅದರ ಕೆಳಗೆ ಕಟ್ಟಿ, ವಿಶೇಷ ಆಕರ್ಷಣೆ ಸಹ ಮಾಡಿಸಿದ್ದಾರೆ. ಕೆಂಗಲ್ ದನಗಳ ಜಾತ್ರೆಯಲ್ಲಿ ಜನ ಜಾನುವಾರುಗಳಿಗೆ ಜಿಲ್ಲಾಡಳಿತ ಕುಡಿಯುವ ನೀರು ಸೇರಿದಂತೆ ಮೂಲ ಸೌಲಭ್ಯ ಆಯೋಜಿಸಿದೆ. ಮೂರ ನಾಲ್ಕು ದಿನಗಳ ಕಾಲ ನಡೆಯುವ ದನಗಳ ಜಾತ್ರೆಯಲ್ಲಿ ಪ್ರತಿದಿನ ಭಕ್ತರು ಹಾಗೂ ರೈತರು, ವ್ಯಾಪಾರಸ್ಥರಿಗೆ ಊಟದ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ವಿ.ಬಿ.ಚಂದ್ರು ತಿಳಿಸಿದರು.



ಉದಯವಾಹಿನಿ ಚಿತ್ರ

**ರಾಸು ಖರೀದಿಸುವುದು ಇಲ್ಲಿನ ಪದ್ಧತಿ**

### ವಿವಿಧ ರಾಜ್ಯಗಳ ಗ್ರಾಹಕರು

ಜಾನುವಾರು ಖರೀದಿಗೆ ತಮಿಳುನಾಡು, ಅಂಧ್ರಪ್ರದೇಶ, ತೆಲಂಗಾಣ ಸೇರಿದಂತೆ ವಿವಿಧ ಜಿಲ್ಲೆಯ ವ್ಯಾಪಾರಸ್ಥರು ಆಗಮಿಸುತ್ತಾರೆ. ಜತೆಗೆ ಜಾನುವಾರು ಬೆಲೆಯೂ ಗಗನಕ್ಕೆರುತ್ತದೆ. ಒಂಟಿ ಹಸುಗಳಿಗೆ 50 ಸಾವಿರದಿಂದ 2 ಲಕ್ಷದವರೆಗೆ ಬೆಲೆ ಇದ್ದರೆ, ಜೋಡಿಯಾಗುವ ಒಂಟಿ ಕರುಗಳಿಗೆ 80 ಸಾವಿರದಿಂದ ಒಂದೂವರೆ ಲಕ್ಷದವರೆಗೆ, ಜೋಡಿ ಎತ್ತುಗಳಿಗೆ 3 ಲಕ್ಷದಿಂದ 5ಲಕ್ಷದವರೆಗೆ ಬೆಲೆ ಇದೆ. ಇಷ್ಟಿದ್ದರೂ ವ್ಯಾಪಾರಸ್ಥರು ಜಾನುವಾರು ಖರೀದಿಸಲು ಆಸಕ್ತಿ ತೋರುವುದು ಇಲ್ಲಿಯ ವಿಶೇಷವಾಗಿದೆ.

### ಅತ್ಯುತ್ತಮ ರಾಸುಗಳಿಗೆ ಚಿನ್ನದ ಪದಕ

ಜಾತ್ರೆಯಲ್ಲಿ ಭಾಗವಹಿಸುವ ಅತ್ಯುತ್ತಮ ರಾಸುಗಳಿಗೆ ಕೆಂಗಲ್ ಅಯ್ಯನಗುಡಿ ದನಗಳ ಜಾತ್ರಾ ಸೇವಾ ಟ್ರಸ್ಟ್ ವತಿಯಿಂದ ಪ್ರತಿವರ್ಷ ಆಕರ್ಷಕ ಬಹುಮಾನ ನೀಡಲಾಗುತ್ತದೆ. ಜ.18ರಂದು ಉತ್ತಮ ರಾಸುಗಳ ರಾಜ್ಯಮಟ್ಟದ ಸ್ಪರ್ಧೆ ನಡೆಯಲಿದೆ. ಜಾತ್ರೆಯಲ್ಲಿರುವ ಅತ್ಯುತ್ತಮ ರಾಸು ಅತ್ಯುತ್ತಮ ಹೋರಿ ಕರುವಿಗೆ ಅತ್ಯುತ್ತಮ ಹೆಣ್ಣು ಕರುವಿಗೆ ತಲಾ ಒಂದು ಚಿನ್ನದ ಪದಕ ಪ್ರಶಸ್ತಿ ಪತ್ರ ನೀಡಲಾಗುತ್ತದೆ. ಜಾತ್ರೆಗೆ ಬರುವ ಜಾನುವಾರು ರೈತರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಬಹುಮಾನ ನೀಡಲಾಗುತ್ತಿದೆ. ಜಾತ್ರೆಯಲ್ಲಿ ಮೈಸೂರು ಭಾಗದ ಹಳ್ಳಿಕಾರ್ ತಳಿ ಜಾನುವಾರುಗಳಿಗೆ ಬೇಡಿಕೆ ಇದೆ. ಉತ್ತಮ ಹಳ್ಳಿಕಾರ್ ಜಾನುವಾರು ಕರೆ ತಂದಿರುವ ರೈತರು ಬಹುಮಾನಕ್ಕೆ ಸ್ಪರ್ಧೆ ಮಾಡುತ್ತಾರೆ. ಕೆಲ ರೈತರು ಆಕರ್ಷಣೆಗಾಗಿ ಜಾತ್ರೆಗೆ ಜಾನುವಾರು ಕರೆ ತಂದು ಕಟ್ಟುವುದು ಇಲ್ಲಿಯ ವಿಶೇಷವಾಗಿದೆ.

## ಮಿನಿ ನ್ಯೂಸ್

### ಪೌರಾಯುಕ್ತ ಅಮೃತಗೌಡ ಕಣ್ಣೀರು ನನಗೆ ಬಹಳ ನೋವು ತಂದಿದೆ; ಶಾಸಕ

• **ಉದಯವಾಹಿನಿ, ಬಾಗೇಪಲ್ಲಿ**



ಸಾರ್ವಜನಿಕ ಅಧಿಕಾರಿ, ಜನರಿಗೆ ಆಗಲಿ ನಾಯಕರು ಅವಹೇಳನವಾಗಿ, ಅವಾಚ್ಯ ಶಬ್ದಗಳಿಂದ ನಿಂದಿಸುವುದು ರಾಜಕೀಯ ನಾಯಕರಿಗೆ ಒಳ್ಳೆಯದಲ್ಲ ಎಂದು ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ತಿಳಿಸಿದರು. ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಶಿಡ್ಲಘಟ್ಟದಲ್ಲಿ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ, ಪೌರಾಯುಕ್ತ ಅಮೃತಗೌಡರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದು ಖಂಡನೀಯ. ಜಿಲ್ಲೆಗೆ ಅಧಿಕಾರಿಗಳು ಬರುವುದು ವಿರಳ ಆಗಿದೆ.

ಸರ್ಕಾರಿ ಅಧಿಕಾರಿಗಳು ಅವರವರ ಇತಿಮಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಫ್ಲೆಕ್ಸ್ ತೆರವು ಮಾಡಿದ ವಿಚಾರಕ್ಕೆ ಮಹಿಳಾ ಅಧಿಕಾರಿ ಅಮೃತರನ್ನು ನಿಂದನೆ ಮಾಡಿರುವುದು ಸರಿಯಲ್ಲ ಎಂದು ತಿಳಿಸಿದರು. ಈಗಾಗಲೇ ಕೆಪಿಸಿಸಿ ಶಿಸ್ತು ಸಮಿತಿಯಿಂದ ರಾಜೀವ್‌ಗೌಡರಿಗೆ ನೋಟಿಸ್ ಜಾರಿ ಮಾಡಿದೆ. 7 ದಿನದ ಒಳಗೆ ಉತ್ತರ ನೀಡಬೇಕು ಎಂದು ತಿಳಿಸಿದೆ.

ಶಿಡ್ಲಘಟ್ಟದ ಪೊಲೀಸ್ ಠಾಣೆಯಲ್ಲಿ ರಾಜೀವ್ ಗೌಡ ವಿರುದ್ಧ ಪ್ರಕರಣ ದಾಖಲಾಗಿದೆ. ಜನಪ್ರತಿನಿಧಿಗಳು ಮತ್ತು ರಾಜಕೀಯ ನಾಯಕರು ಅಧಿಕಾರಿಗಳಿಂದ ಆಡಳಿತ ವ್ಯವಸ್ಥೆಗೆ ತೊಂದರೆ ಆಗದಂತೆ ಕೆಲಸ ಮಾಡಿಸಬೇಕು. ಆದರೆ ವೈಯಕ್ತಿಕ ಹಾಗೂ ನಿಂದನೆ ಮಾಡುವುದು ಸರಿಯಲ್ಲ. ಅಧಿಕಾರಿಗಳ ಜತೆ ನಾವು ಇದ್ದೇವೆ ಎಂದು ತಿಳಿಸಿದರು.

### ಮದ್ದೂರು ನಗರಸಭೆ ಬಜೆಟ್ ಪೂರ್ವಭಾವಿ ಸಭೆ

• **ಉದಯವಾಹಿನಿ, ಮದ್ದೂರು**

ನಗರದ ವ್ಯಾಪ್ತಿಯಲ್ಲಿ ಎ ಖಾತಾ, ಬಿ ಖಾತಾಗಳನ್ನು ಸಂಬಂಧಪಟ್ಟ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ವಾರ್ಡ್ ಅಭಿಯಾನ ನಡೆಸಿ ನಿವೇಶನದಾರರಿಗೆ ನೀಡಬೇಕೆಂದು ಜಿಲ್ಲಾಧಿಕಾರಿ ಕುಮಾರ ತಿಳಿಸಿದರು. ನಗರದ ನಗರಸಭೆಯಲ್ಲಿ ನಡೆದ ಬಜೆಟ್ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ಜನಾಭಿಪ್ರಾಯಗಳನ್ನು ಆಧರಿಸಿ ಬಜೆಟ್ ಮಂಡನೆಯಾದರೆ ಅರ್ಥವಿರುತ್ತದೆ. ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರವಾಗಿರುವುದರಿಂದ ನೇರವಾಗಿ ಜನರ ಅಭಿಪ್ರಾಯಗಳನ್ನು ಸಂಗ್ರಹಿಸುವ ದೃಷ್ಟಿಯಿಂದ ಈ ಪೂರ್ವಭಾವಿ ಸಭೆಯನ್ನು ನಡೆಸಲಾಗಿದೆ ಎಂದರು. ನಗರದ ರಾಮ್ ರಹೀಮ್ ನಗರ, ಚನ್ನೇಗೌಡ ಬಡಾವಣೆ ವ್ಯಾಪ್ತಿಯಲ್ಲಿನ 5.5 ಎಕರೆ ಜಾಗದಲ್ಲಿ 242 ಮನೆಗಳು ಹಲವು ದಶಕಗಳಿಂದ ಇವೆ ಆದರೆ ಈವರೆಗೆ ಹಕ್ಕುಪತ್ರ ವಿತರಣೆಯಾಗಿಲ್ಲ. ಈ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಂಡರೆ ನಗರಸಭೆಗೆ ವರಮಾನ ಬರುತ್ತದೆ ಎಂದು ಪುರಸಭಾ ಮಾಜಿ ಸದಸ್ಯ ಮನ್ಸೂರ್ ಅಲಿ ಖಾನ್ ತಿಳಿಸಿದರು.

ನಗರದ ವ್ಯಾಪ್ತಿಯಲ್ಲಿನ ಯುಜಿಡಿ ನೀರು ನೀರು ಸೇರಿದಂತೆ ಚರಂಡಿ ನೀರು ಶಿಂಷಾ ನದಿಗೆ ಸೇರಿ ನದಿಯ ನೀರು ಕಲುಷಿತ ವಾಗುತ್ತಿರುವುದರಿಂದ ಪಕ್ಕದ ವೈದ್ಯನಾಥಪುರದ ಪುರಾಣ ಪ್ರಸಿದ್ಧ ವೈದ್ಯನಾಥೇಶ್ವರಸ್ವಾಮಿ ದೇವಸ್ಥಾನಕ್ಕೆ ಬರುವ ಭಕ್ತರು ನದಿಯಲ್ಲಿ ಸ್ನಾನ ಮಾಡಲು ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮಲಿನ ನೀರು ನದಿಗೆ ಸೇರದಂತೆ ಕ್ರಮ ವಹಿಸಬೇಕು ಎಂದು ಗ್ರಾಮದ ನಿವಾಸಿ ಪ್ರಭು ಅಧಿಕಾರಿಗಳನ್ನು ಒತ್ತಾಯಿಸಿದರು. ಇತ್ತೀಚೆಗೆ ಪೇಟೆ ಬೀದಿ ವಿಸ್ತರಣೆ ಮಾಡುವ ವೇಳೆ ಬೀದಿ ಬದಿಯ ವ್ಯಾಪಾರಸ್ಥರಿಗೆ ತೊಂದರೆಯಾಗಿರುವುದರಿಂದ ಅವರಿಗೆ ಕೂಡಲೇ ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕೆಂದು ಸಾರ್ವಜನಿಕರೊಬ್ಬರು ಒತ್ತಾಯಿಸಿದರು.

### 150 ಎಕರೆಯಲ್ಲಿ ಎಲೆಕ್ಟ್ರಿಕಲ್ ವೆಹಿಕಲ್ ಸಿಟಿ ಸ್ಥಾಪನೆ

• **ಉದಯವಾಹಿನಿ, ಚಿಂತಾಮಣಿ**


ತಾಲ್ಲೂಕಿನಲ್ಲಿ 150 ಎಕರೆಯಲ್ಲಿ ಎಲೆಕ್ಟ್ರಿಕಲ್ ವೆಹಿಕಲ್ ಸಿಟಿ ಸ್ಥಾಪಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ತಾಲ್ಲೂಕಿನ ಎರ್ರಕೋಟೆ, ದೂಮಲಪಲ್ಲಿಗಡ್ಡ ಗ್ರಾಮದ ಬಳಿ 150 ಎಕರೆ ಸಂಪೂರ್ಣ ಸರ್ಕಾರಿ ಪ್ರದೇಶವನ್ನು ಗುರುತಿಸಲಾಗಿದೆ. ಸಂಬಂಧಪಟ್ಟವರು ಈಗಾಗಲೇ ಅಲ್ಲಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಒಪ್ಪಿಗೆ ನೀಡಿದ್ದಾರೆ. ಬೇರೆ ಎಲ್ಲಿಗೋ ಹೋಗುತ್ತಿದ್ದ ಎಲೆಕ್ಟ್ರಿಕಲ್ ವೆಹಿಕಲ್ ಸಿಟಿಯನ್ನು ನಾನು ಪ್ರಯತ್ನಿಸಿ ಸಂಬಂಧಪಟ್ಟವರ ಜತೆ ಮಾತನಾಡಿ ಕ್ಷೇತ್ರಕ್ಕೆ ತರುತ್ತಿದ್ದೇನೆ ಎಂದರು.

ತಾಲ್ಲೂಕಿನ ಜೇಡರಹಳ್ಳಿ ಬಳಿ 20 ಎಕರೆ ಪ್ರದೇಶದಲ್ಲಿ ಡ್ರೋಣ್ ಟೆಸ್ಟಿಂಗ್ ಕೇಂದ್ರ ಸ್ಥಾಪಿಸಲಾಗುತ್ತದೆ. ಈಗಾಗಲೇ 10 ಎಕರೆ ನೀಡಲಾಗಿದೆ. ಉಳಿದ 10 ಎಕರೆ ಜಾಗವನ್ನು ಶೀಘ್ರವಾಗಿ ಮಂಜೂರು ಮಡಲಾಗುವುದು ಎಂದು ತಿಳಿಸಿದರು. ಕಾಗತಿ ಭಾಗದ ಕೈಗಾರಿಕಾ ಪ್ರದೇಶದ ಬಳಿ 200 ಎಕರೆಯನ್ನು ನೂತನ ಎಪಿಎಂಸಿ ಸ್ಥಾಪನೆಗೆ ಮೀಸಲಿಡಲಾಗಿದೆ. ನಗರದ ಚೇಳೂರು ರಸ್ತೆಯಲ್ಲಿರುವ ಎಪಿಎಂಸಿಯಲ್ಲಿ ಸ್ಥಳಾವಕಾಶದ ಕೊರತೆ ಇದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ವಿಸ್ತರಣೆ ಆಗಲಿರುವುದನ್ನು ಗಮನಿಸಿ 200 ಎಕರೆ ಪ್ರದೇಶದಲ್ಲಿ ಎಪಿಎಂಸಿ ವಿಸ್ತರಣಾ ಘಟಕ ಸ್ಥಾಪಿಸಿ, ಕೆಲವು ವ್ಯಾಪಾರಗಳನ್ನು ಅಲ್ಲಿಗೆ ಸ್ಥಳಾಂತರಿಸಲಾಗುವುದು ಎಂದರು. ಕೆ.ಸಿ.ವ್ಯಾಲಿ, ಎಚ್.ಎನ್ ವ್ಯಾಲಿ ಯೋಜನೆಗಳ ಮೂಲಕ ಬೆಂಗಳೂರಿನ ಸಂಸ್ಕರಿಸಿದ ನೀರನ್ನು ತಾಲ್ಲೂಕಿನ ಕೆರೆಗಳನ್ನು ತುಂಬಿಸುವ ಯೋಜನೆ ರೂಪಿಸಲಾಗಿದೆ. ಮುರುಗಮಲ್ಲ ಹೋಬಳಿಯಲ್ಲಿ ಕೆ.ಸಿ.ವ್ಯಾಲಿಯಲ್ಲಿ 54 ಕೆರೆ ತುಂಬಿಸಲಾಗುತ್ತದೆ. ಎಚ್.ಎನ್.ವ್ಯಾಲಿಯಲ್ಲಿ 119 ಕೆರೆ ತುಂಬಿಸಲಾಗುತ್ತದೆ ಎಂದರು.

ಅಂತರಾಳದಿಂದ.. EDITORIAL

# ಗಿಗ್ ಕಾರ್ಮಿಕರ ಸುರಕ್ಷತೆಗೆ ಒತ್ತು ಕಾರ್ಮಿಕ ನೀತಿ ಪರಿಷ್ಕಾರ ಅಗತ್ಯ

ಬೇಡಿಕೆ ಸಲ್ಲಿಸಿದ ಹತ್ತು ನಿಮಿಷಗಳಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಉತ್ಪನ್ನವನ್ನು ತಲುಪಿಸುತ್ತೇವೆ ಎನ್ನುವ ಬದ್ಧತೆಯಿಂದ ಹೊರಬರುವ ಕ್ವಿಕ್ ಕಾಮರ್ಸ್ ವಲಯದ ನಿರ್ಧಾರ, ಗಿಗ್ ಕಾರ್ಮಿಕರ ಮೇಲೆ ಉಂಟಾಗುತ್ತಿದ್ದ ಅತೀವ ಒತ್ತಡವನ್ನು ಕಡಿಮೆ ಮಾಡಬೇಕೆಂದು ನಡೆಯುತ್ತಿದ್ದ ಅಭಿಯಾನಕ್ಕೆ ಸಂದಿರುವ ಗಮನಾರ್ಹ ಯಶಸ್ಸು. ಕಳೆದ ತಿಂಗಳು ಗಿಗ್ ಕಾರ್ಮಿಕರು ನಡೆಸಿದ್ದ ಮುಷ್ಕರ, ಅವರು ಕೆಲಸ ಮಾಡುತ್ತಿರುವ ಕ್ಷೇತ್ರದ ಅಪಾಯಗಳ ಬಗ್ಗೆ ಗಮನಸೆಳೆದಿತ್ತು. ಇದರ ಪರಿಣಾಮವಾಗಿ, ಗ್ರಾಹಕರಿಗೆ ಅಗತ್ಯ ಉತ್ಪನ್ನಗಳನ್ನು ಕೆಲವೇ ನಿಮಿಷಗಳಲ್ಲಿ ಮನೆ ಬಾಗಿಲಿಗೆ ತಲುಪಿಸುವಲ್ಲಿ ಹೆಸರಾಗಿರುವ ಕಂಪನಿಗಳ ಜೊತೆ ಕೇಂದ್ರ ಕಾರ್ಮಿಕ ಸಚಿವ ಮನ್ಸುಕ್ ಮಾಂಡವೀಯ ಮಾತುಕತೆ ನಡೆಸಿದ್ದರು. ಕಡಿಮೆ ಸಮಯದಲ್ಲಿ ಸೇವೆ ಒದಗಿಸುವ ಬದ್ಧತೆಯಿಂದ ಉಂಟಾಗುವ ಅಪಾಯಗಳ ಬಗ್ಗೆ ಆತಂಕ ವ್ಯಕ್ತಪಡಿಸಿದ್ದ ಸಚಿವರು, ಮಾರ್ಕೆಟಿಂಗ್ ಮತ್ತು ಬ್ರಾಂಡಿಂಗ್ ಅಭಿಯಾನಗಳಿಂದ ನಿಗದಿತ ಸಮಯದ ಬದ್ಧತೆಯನ್ನು ಕೈಬಿಡುವಂತೆ ಒತ್ತಾಯಿಸಿದ್ದರು. ಕಾಲಮಿತಿ ಬದ್ಧತೆಯ ಪರಿಣಾಮ ಉತ್ಪನ್ನಗಳನ್ನು ಪೂರೈಸುವ ಕಾರ್ಮಿಕರ ಮೇಲೆ ಆಗುವುದರ ಬಗ್ಗೆಯೂ ವ್ಯಾಪಕ ಕಳವಳ ವ್ಯಕ್ತವಾಗಿತ್ತು. ತ್ವರಿತ ಸೇವೆಯ ಬದ್ಧತೆಯಿಂದ ಹೊರಬರುವುದಾಗಿ ಪ್ರಮುಖ ಕ್ವಿಕ್–ಕಾಮರ್ಸ್ ಸಂಸ್ಥೆಗಳು ಹೇಳಿದ್ದರೂ, ಪರಿಸ್ಥಿತಿಯಲ್ಲಿ ಗಮನಾರ್ಹ ಬದಲಾವಣೆ ಆಗಿದೆಯೆಂದು ಭಾವಿಸಲಾಗದು. ಕಾಲಮಿತಿಯೊಳಗೆ ಉತ್ಪನ್ನ ಪೂರೈಸುವ ಘೋಷಣೆಯನ್ನು ತಮ್ಮ ಪ್ರಚಾರ ವೇದಿಕೆಗಳಲ್ಲಿ ಸಂಸ್ಥೆಗಳು ನಿಲ್ಲಿಸಬಹುದು. ಬ್ರಾಂಡಿಂಗ್ ಸಂಪರ್ಕ, ಜಾಹೀರಾತುಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿನ ಅಭಿಯಾನಗಳಲ್ಲಿ ಗಟ್ಟಿ ಧ್ವನಿಯಲ್ಲಿ ಬಿತ್ತರಗೊಳ್ಳುತ್ತಿದ್ದ 'ಶೀಘ್ರ ಡೆಲಿವರಿ' ಎನ್ನುವ ಘೋಷಣೆ ಪ್ರಸ್ತುತ ಬದಲಾಗಿದೆಯಷ್ಟೇ. ಆದರೆ, ಈ ಕಂಪನಿಗಳು ಇದುವರೆಗೂ ತಾವು ಗೊತ್ತುಪಡಿಸುತ್ತಿದ್ದ ಅವಾಸ್ತವಿಕ ಕಾಲಮಿತಿಯು ಗಿಗ್ ಕಾರ್ಮಿಕರ ಮೇಲೆ ಅಪಾರ ಒತ್ತಡ ಉಂಟುಮಾಡುತ್ತದೆ ಹಾಗೂ ನಗರ ಸಾರಿಗೆ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುತ್ತದೆ ಎನ್ನುವುದನ್ನು ಒಪ್ಪಿಕೊಂಡಿಲ್ಲ.



> ಸಂಚಾರ ದಟ್ಟಣೆಯ ನಡುವೆ ನಿರ್ದಿಷ್ಟ ಸಮಯದೊಳಗೆ ಉತ್ಪನ್ನಗಳನ್ನು ತಲುಪಿಸುವ ಒತ್ತಡ ಹಾಗೂ ವಿಳಂಬದ ಸೇವೆಯಿಂದ ಎದುರಿಸಬೇಕಾದ ಪರಿಣಾಮಗಳು ಕಾರ್ಮಿಕರನ್ನು ಒತ್ತಡಕ್ಕೆ ದೂಡುತ್ತವೆ. ಈ ಒತ್ತಡ ಕಾರ್ಮಿಕರಿಗೆ ಮಾತ್ರವಲ್ಲದೆ, ರಸ್ತೆಗಳಲ್ಲಿ ಸಂಚರಿಸುವ ಇತರರಿಗೂ ಅಪಾಯ ಉಂಟುಮಾಡುವ ಸಾಧ್ಯತೆಗೆ ನಿದರ್ಶನಗಳಾಗಿ, ಅಪಘಾತಗಳು ಸಂಭವಿಸಿರುವುದನ್ನು ಗಮನಿಸಬಹುದು.

ಇದಕ್ಕೆ ಬದಲಾಗಿ, ತಮ್ಮ ವಾಣಿಜ್ಯ ಮಾದರಿಯು ಡೆಲಿವರಿ ಸಹವರ್ತಿಗಳ ಚಾಲನೆಯ ವೇಗವನ್ನು ಅವಲಂಬಿಸದೆ. ಆನ್‌ಲೈನ್ ಶಾಪಿಂಗ್ ವ್ಯವಸ್ಥೆಗೆ ಪೂರಕವಾದ ಉಗ್ರಾಣಗಳು (ಡಾರ್ಕ್ ಸ್ಟೋರ್) ಇರುವ ಸ್ಥಳವನ್ನು ಅವಲಂಬಿಸಿದೆ ಎಂದು ಹೇಳಲಾಗುತ್ತಿದೆ. ಡಾರ್ಕ್ ಸ್ಟೋರ್‌ಗಳ ಸಂಖ್ಯೆ, ಡೆಲಿವರಿ ಪಾಲುದಾರರ ಲಭ್ಯತೆ, ತಂತ್ರಜ್ಞಾನ ಮತ್ತು ಆರ್ಡರ್ ಬ್ಯಾಚಿಂಗ್‌ಗಳು ಡೆಲಿವರಿ ಸಮಯದ ಮೇಲೆ ಪ್ರಭಾವ ಬೀರುವ ಪ್ರಮುಖ ಸಂಗತಿಗಳಾಗಿವೆ ಎಂದೂ ವಾದಿಸಲಾಗುತ್ತಿದೆ. ಆದರೆ, ಈ ಎಲ್ಲಾ ಸಂಗತಿಗಳೂ ಮಿಳಿತಗೊಂಡು ಡೆಲಿವರಿ ಏಜೆಂಟರಿಗೆ ಅತ್ಯಂತ ಒತ್ತಡದ ಕಾಲಮಿತಿಯ ವೇಳಾಪಟ್ಟಿಯನ್ನು ಗೊತ್ತುಪಡಿಸುತ್ತವೆ. ಇಡೀ ಸಮಸ್ಯೆಯ ಕೇಂದ್ರದಲ್ಲಿ ಬೇಡಿಕೆ ಮತ್ತು ಪೂರೈಕೆಯ ಸಮೀಕರಣವಿದೆ.

ತ್ವರಿತವಾಗಿ ಉತ್ಪನ್ನಗಳನ್ನು ಪಡೆಯುವ ಗ್ರಾಹಕರ ನಿರೀಕ್ಷೆಗಳು ಹಾಗೂ ಅಂಥ ಅಪೇಕ್ಷೆಗಳನ್ನು ಪೂರೈಸಲು ಸಿದ್ಧವಾಗಿರುವ ಹಣಕಾಸಿನ ಮುಗ್ಗಟ್ಟಿನಿಂದ ಬಳಲುತ್ತಿರುವ ಕಾರ್ಮಿಕರಿಂದಾಗಿ ಈ ತ್ವರಿತ ಡೆಲಿವರಿ ವಹಿವಾಟು ಜೀವಂತವಾಗಿದೆ. ಯುರೋಪ್‌ನ ಕೆಲವು ದೇಶಗಳಲ್ಲಿ ಇರುವಂತೆ ಡಾರ್ಕ್ ಸ್ಟೋರ್‌ಗಳನ್ನು ವಸತಿ ಪ್ರದೇಶಗಳಿಂದ ದೂರ ಇರಿಸುವುದನ್ನು ಕಡ್ಡಾಯಗೊಳಿಸಿದರೆ ಪರಿಸ್ಥಿತಿಯಲ್ಲಿ ಸುಧಾರಣೆ ಆಗಬಹುದು ಎನ್ನುವ ವಿಶ್ಲೇಷಣೆಯೂ ಇದೆ. ಆದರೆ, ಇಂಥ ಬೆಳವಣಿಗೆಗಳಿಂದ ಗಿಗ್ ಕಾರ್ಮಿಕರ ಜೀವನ ಸುಧಾರಿಸಬಹುದು ಎನ್ನುವುದಕ್ಕೆ ಯಾವ ಖಾತರಿಯೂ ಇಲ್ಲ. ಇನ್ನುಮುಂದೆ, ತ್ವರಿತ ಪೂರೈಕೆಯ ಘೋಷಣೆಗಳು ಸಾರ್ವಜನಿಕವಾಗಿ ಪ್ರಕಟಗೊಳ್ಳದಿರಬಹುದಾದರೂ, ಉತ್ಪನ್ನಗಳನ್ನು ಕ್ಷಿಪ್ರವಾಗಿ ತಲುಪಿಸುವ ವಿಧಾನದಲ್ಲಿ ಬದಲಾವಣೆ ಆಗುತ್ತದೆಂದು ಹೇಳಲಾಗದು. ಈ ಎಲ್ಲಾ ಬೆಳವಣಿಗೆಗಳ ಒಟ್ಟಾರೆ ಪರಿಣಾಮ, ಗಿಗ್ ಕಾರ್ಮಿಕರ ಸಮಸ್ಯೆಗಳನ್ನು ಅಧಿಕೃತವಾಗಿ ಗುರ್ತಿಸಿ ಒಪ್ಪಿಕೊಂಡಿರುವುದು. ಪ್ರಸಕ್ತ ವಿದ್ಯಮಾನ, ಕಾರ್ಮಿಕರ ಕಲ್ಯಾಣವನ್ನು ಗಮನದಲ್ಲಿ ಇರಿಸಿಕೊಂಡ ಸಮಗ್ರ, ನೀತಿ ರೂಪುಗೊಳ್ಳಲು ಕಾರಣವಾಗುತ್ತದೆಯೇ ಎನ್ನುವುದನ್ನು ಕಾದು ನೋಡಬೇಕು.

# ರಾಮಾಯಣ



## ಸುಗ್ರೀವನು ವಾಲಿಯನ್ನು ಯುಂದ್ಧಕ್ಕೆ ಕರೆದದ್ದು

• ಹಿಂದಿನ ಸಂಚಿಕೆಯಿಂದ 120ನೆಯ ಅಧ್ಯಾಯ

ನಕ್ಷತ್ರಗಳು ಭೋಗಾದೃಷ್ಟವು ತೀರಿದ ಬಳಿಕ ನಕ್ಷತ್ರಲೋಕದಿಂದ ಭೂಲೋಕಕ್ಕೆ ಬೀಳುವಂತೆ, ಅಂತರಿಕ್ಷಮಾರ್ಗದಲ್ಲಿ ಸಂಚರಿಸುತ್ತಿದ್ದ ಪಕ್ಷಿಗಳು ಭೂದಿಂಯ ಮೇಲೆ ಬಿದ್ದದ್ದು. ಬಿರುಗಾಳಿಯಿಂದೇಳುವ ತೆರೆಗಳಿಂದ ಸಮುದ್ರವು ಉಕ್ಕುವಂತೆ ಪರಾಕ್ರಮಾತಿಶಯದಿಂದ ಹೆಚ್ಚಿದ ತೇಜಸ್ಸುಳ್ಳ ಸುಗ್ರೀವನು ಗುಡುಗಿನಂತೆ ಬೊಬ್ಬಿಟ್ಟು ಕೂಗುತ್ತ ಅತ್ಯಂತ ಶೌರ್ಯವುಳ್ಳವನಾಗಿ ಯುದ್ಧ ಸಂನದ್ಧನಾದನು.

### ತಾರಾದೇವಿಯು ವಾಲಿಗೆ ಹೇಳಿದ ನೀತಿ

ಈ ಪ್ರಕಾರ ಬೊಬ್ಬಿಟ್ಟು ಕೂಗುತ್ತಿದ್ದ ತನ್ನ ತಮ್ಮನಾದ ಸುಗ್ರೀವನ ಗರ್ಜನೆಯನ್ನು ಅತ್ಯಂತ ಕೋಪಯುಕ್ತನಾಗಿ ವಾಲಿಯು ಕೇಳಿದನು. ಅವನು ರೋಷದಿಂದ ಸಂಧ್ಯಾಕಾಲದ ಮೇಘಕ್ಕೆ ಸಮಾನವಾದ ಶರೀರಕಾಂತಿಯುಳ್ಳವನಾಗಿ ರಾಹುತುಡುಕಿದ ಸೂರ್ಯನಂತೆ ಕಾಂತಿಗುಂದಿದನು. ರೋಷದಿಂದ ಪ್ರಜ್ವಲಿಸುತ್ತಿದ್ದ ಆ ವಾಲಿಯು ಸುಗ್ರೀವನ ಆರ್ಭಟಧ್ವನಿಯನ್ನು ಕೇಳಿದೊಡನೆಯೇ ಅತಿವೇಗದಿಂದ ಹೆಣರಟು ತನ್ನ ಪಾದಹತಿಯಿಂದ ಭೂಮಿಯನ್ನು ಒಡೆಯುವಂತೆ ಬರುತ್ತಿದ್ದನು. ಅದನ್ನು ಕಂಡು ಆತನ ಸ್ತ್ರೀಯಾದ ತಾರಾದೇವಿಯು ಬೆದರಿ ಕಂಗೆಟ್ಟು ಆತನನ್ನು ಸ್ನೇಹಾತಿಶಯ ದಿಂದ ಹಿಡಿದು ತಬ್ಬಿಕೊಂಡು ನಿಲ್ಲಿಸಿ ಆತನಿಗೆ ಪ್ರೇಯಸ್ಕರವೂ ಹಿತವೂ ಆದ ಮಾತುಗಳಿಂದ ಹೀಗೆಂದಳು : ಪ್ರಾಣಕಾಂತ್ತ ವಹಾಕಾಲದ ನದೀಪ್ರವಾಹದಂತೆ ಪ್ರತಿಕ್ಷಣದಲ್ಲಿಯೂ ಹೆಚ್ಚುತ್ತಿರುವ ಈ ರೋಷವನ್ನು, ಬಾಡಿದ ಪುಷ್ಪಮಾಲೆಯನ್ನು ತೆಗೆದೆಸೆಯುವಂತೆ ತ್ಯಜಿಸು. ನಾಳೆ ಪ್ರಾತಃಕಾಲದಲ್ಲಿ ಸುಗ್ರೀವನ ವೃತ್ತಾಂತವನ್ನು ಚೆನ್ನಾಗಿ ವಿಚಾರಿಸಿಕೊಂಡು ಯುದ್ಧಕ್ಕೆ ಹೋಗು. ಈಗ ಹೋಗಬೇಡ. ಸುಗ್ರೀವನೊಬ್ಬನೇ ಅಲ್ಲ. ನಿನಗೆ ಬಹಳ ಮಂದಿ ಶತ್ರುಗಳುಂಟು. ನೀನು ಹೀಗೆ ಅತಿವೇಗದಿಂದ ಯುದ್ಧಕ್ಕೆ ಹೋಗುವುದು ನನ್ನ ಮನಸ್ಸಿಗೆ ಸರಿಯೆನಿಸುತ್ತಿಲ್ಲ. ನಿನ್ನೆ ಸುಗ್ರೀವನು ಯುದ್ಧಕ್ಕೆ ಬಂದು ನಿನ್ನ ಮುಷ್ಟಿಪ್ರಹಾರಗಳಿಂದ ಗಾಯಪಡೆದು ನೊಂದು ಮುರಿದುಹೋದನು. ಇಂದು ತಿರುಗಿ ಬಂದು ನಿನ್ನನ್ನು ಸಮರಕ್ಕೆ ಕರೆಯುತ್ತಿರುವುದು ನನ್ನ ಮನಸ್ಸಿಗೆ ಸಂಶಯವನ್ನುಂಟು ಮಾಡುತ್ತಿದೆ. ನಿನ್ನೆ ಮುರಿದು ಹೋದವನು ಇಂದು ತಿರುಗಿ ಬಂದು ಗರ್ವಿತನಾಗಿ ನಿನ್ನನ್ನು ಯುದ್ಧಕ್ಕೆ ಬೊಬ್ಬಿಟ್ಟು ಕೂಗುವುದು ಅಲ್ಪಕಾರ್ಯವಲ್ಲ. ಏನಾದರೂ ಒಂದು ವಿಶೇಷಕಾರಣವಿರಬೇಕು. ಸುಗ್ರೀವನು ಯಾರನ್ನಾದರೂ ಸಹಾಯಮಾಡಿಕೊಂಡಲ್ಲದೆ ಇಲ್ಲಿಗೆ ಬರಲಾರನು. ಒಬ್ಬರ ಸಹಾಯದಿಂದಲೇ ಇಲ್ಲಿಗೆ ಬಂದು ಗರ್ಜಿಸುತ್ತಿದ್ದಾನೆ. ಸುಗ್ರೀವನು ಸ್ವಭಾವದಿಂದ ಮಹಾನಿಪುಣ ಅತ್ಯಂತ ಬುದ್ಧಿಸಂಪನ್ನ. ಒಬ್ಬನ ಪರಾಕ್ರಮವನ್ನು ಪರೀಕ್ಷಿಸಿ ನೋಡದೆ ಅವನ ಸಹಾಯವನ್ನು ಮಾಡಿಕೊಳ್ಳನು. ಪ್ರಾಣಕಾಂತ, ನಾನು ಒಂದು ವೃತ್ತಾಂತವನ್ನು ಕೇಳಿದ್ದೇನೆ. ಅದೇನೆಂದರೆ, ಅಂಗದಕುಮಾರನು ವಿನೋದಾರ್ಥವಾಗಿ ವನಕ್ಕೆ ಹೋದಾಗ ಆತನಿಗಾಪ್ತರಾದ ಬೇಹುಗಾರರಿಂದ ಕೇಳಿದ ಒಂದು ವೃತ್ತಾಂತವನ್ನು ನನ್ನೊಡನೆ ಹೇಳಿದನು. ಅಯೋಧ್ಯಾಪಟ್ಟಣಕ್ಕೆ ಒಡೆಯನಾದ ದಶರಥರಾಯನ ಇಬ್ಬರು ಕುಮಾರರು ಬಂದಿದ್ದಾರಂತೆ. ಅವರ ಹೆಸರು ರಾಮಲಕ್ಷ್ಮರಂತೆ. ಅವರು ಇಕ್ಷ್ವಾಕುವಂಶದ ರಾಜರಂತೆ. ಅವರು ತಮ್ಮ ಇಷ್ಟಾರ್ಥವನ್ನು ಸಲ್ಲಿಸಕೊಳ್ಳಬೇಕೆಂದು ಸುಗ್ರೀವನೊಡನೆ ಸ್ನೇಹವನ್ನು ಮಾಡಿಕೊಂಡಿದ್ದಾರಂತೆ. ಶ್ರೀರಾಮನು ದಶರಥರಾಯನ ನಾಲ್ವರು ಕುಮಾರರಲ್ಲಿ ಜ್ಯೇಷ್ಠನಾಗಿ ರಣಪಂಡಿತನಾದವನಂತೆ. ಪ್ರಳಯಕಾಲಾಗ್ನಿಯಂತೆ ಸಮಸ್ತ ಶತ್ರುಗಳನ್ನೂ ಸಂಹರಿಸುವವನಂತೆ. ಸಮಸ್ತ ಸತ್ಪುರುಷರಿಗೂ ಆಶ್ರಯನಾದವನೂ ಕಂಗೆಟ್ಟವರಿಗೆ ಅಭಯವನ್ನು ಕೊಡುವವನೂ ಅನಾಥರಕ್ಷಕನೂ ಅತಿಕೀರ್ತಿವಂತನೂ ಮಹಾಜ್ಞಾನಿಯೂ ಆಗಿರುವನಂತೆ.

ಮುಂದುವರಿಯುವುದು...

# ಮುಳ್ಳು ಕೊನೆಯ ಮೇಲೆ; ತಾತ್ತ್ವಿಕ ವಿವರಣೆ



ಸತ್ಸಂಗ ಸಂದೇಶ
ಡಾ.ಗುರುರಾಜ ಪೋಶೆಟ್ಟಿಹಳ್ಳಿ
ಲೇಖಕರು
ಸಂಸ್ಕೃತಿ ಚಿಂತಕರು




ಪುರಂದರ ದಾಸರು ಒಗಟು ರೂಪದಲ್ಲಿ ಹೇಳುವ ಈ ಕೃತಿ, ಹೊರಗೆ ಸರಳವಾದ ಗ್ರಾಮ್ಯ ಚಿತ್ರಣದಂತೆ ಕಂಡರೂ ಒಳಗೆ ಜೀವಕರ್ಮ ಗುಣಭಕ್ತಿಮೋಕ್ಷಗಳ ಗಾಢ ತತ್ತ್ವವನ್ನು ಹೊತ್ತುಕೊಂಡಿದೆ.

**1. ಮುಳ್ಳು ಕೊನೆಯ ಮೇಲೆ ಮೂರು ಕೆರೆಯ ಕಟ್ಟಿ, ಎರಡು ಬರಿದು ಒಂದು ತುಂಬಲೇ ಇಲ್ಲ:** ಮುಳ್ಳು ಕೊನೆ ಎಂದರೆ ಜೀವ ಮೂರು ಕೆರೆಗಳು ಸ್ಥೂಲ ಶರೀರ, ಸೂಕ್ಷ್ಮ ಶರೀರ, ಲಿಂಗ ದೇಹ; ಈ ಮೂರು ಶರೀರಗಳೊಳಗೆ ಜೀವ ನೆಲೆಸಿದೆ.ಆದರೆ ಜೀವ ಉತ್ತಮ ಕರ್ಮಗಳನ್ನು ಮಾಡಿ ಪುಣ್ಯವನ್ನು ಸಂಗ್ರಹಿಸಿಕೊಳ್ಳಲಿಲ್ಲ. ಅದರ ಪರಿಣಾಮವಾಗಿ ಎರಡು ಕೆರೆಗಳು ಬರಿದಾಗಿವೆ, ಒಂದು ಕೂಡ ಪೂರ್ಣವಾಗಿ ತುಂಬಲಿಲ್ಲ.

**2. ತುಂಬಲಿಲ್ಲದ ಕೆರೆಗೆ ಬಂದರು ಮೂವರು ಒಡ್ಡರು, ಇಬ್ಬರು ಕುಂಟರು, ಒಬ್ಬಗೆ ಕಾಲೇ ಇಲ್ಲ:** ಮೂರು ಒಡ್ಡರು ಬಾಲ್ಯ, ಯೌವನ, ವೃದ್ಧಾಪ್ಯ ಇಬ್ಬರು ಕುಂಟರು ಬಾಲ್ಯದಲ್ಲಿ ಕರ್ಮಾಚರಣೆ ಸಾಧ್ಯವಿಲ್ಲ, ವೃದ್ಧಾಪ್ಯದಲ್ಲಿ ಶಕ್ತಿ ಇಲ್ಲ, ಕಾಲಿಲ್ಲದ ಒಡ್ಡ ಯೌವನ ಶಕ್ತಿ ಇದ್ದರೂ ಮನಸ್ಸು ಚಂಚಲ; ಸದ್ಗತಿಯ ದಾರಿಗೆ ಹೆಜ್ಜೆಯೇ ಇಲ್ಲ.

**3. ಕಾಲಿಲ್ಲದ ಒಡ್ಡರಿಗೆ ಕೊಟ್ಟರು ಮೂರು ಎಮ್ಮೆಗಳು, ಎರಡು ಬರಡು, ಒಂದಕ್ಕೆ ಕರುವೇ ಇಲ್ಲ:** ಮೂರು ಎಮ್ಮೆಗಳು ವ್ಯಾಮೋಹಗಳು, ಹಣ,ಹೆಂಡತಿ,ಮಕ್ಕಳು, ಎರಡು ಬರಡು ಹೆಂಡತಿ ಮತ್ತು ಮಕ್ಕಳು ಅವರು ನಮ್ಮ ಕರ್ಮಫಲಕ್ಕೆ ಸಹಕಾರಿ ಅಲ್ಲ; ಅವರು ಸ್ವತಂತ್ರ ಜೀವಿಗಳು. ಕರುವಿಲ್ಲದ ಎಮ್ಮೆ ಹಣ; ಹಣದಿಂದ ದಾನ ಧರ್ಮ ಮಾಡಿ ಪುಣ್ಯ ಸಂಪಾದಿಸಬಹುದಿತ್ತು. ಆದರೆ ದಾನ ಮಾಡುವ ಮನಸ್ಸೇ ಇಲ್ಲ ''ಕರುವೇ ಇಲ್ಲ''.

**4. ಕರುವಿಲ್ಲದ ಎಮ್ಮೆಗೆ ಕೊಟ್ಟರು ಮೂರು ಹೊನ್ನುಗಳು, ಎರಡು ಸವಕಲು, ಒಂದು ಸಲ್ಲಲೇ ಇಲ್ಲ:** ಮೂರು ಹೊನ್ನುಗಳು ಸಂಪತ್ತು, ಎರಡು ಸವಕಲು ಸ್ವಾರ್ಥಕ್ಕಾಗಿ ಖರ್ಚು ಮಾಡಿದವು, ಒಂದು ಸಲ್ಲದ ಹೊನ್ನು ದಾನ (ಮಾಡಲೇ ಇಲ್ಲ)

**5. ಸಲ್ಲದ ಹೊನ್ನುಗಳಿಗೆ ಬಂದರು ಮೂರು ನೋಟಗರು:** ಮೂರು ನೋಟಗರು ಮೂರು ವಿಧದ ಕರ್ಮಗಳು, ಸಂಚಿತ ಕರ್ಮ ಪೂರ್ವಜನ್ಮದ ಪಾಪಪುಣ್ಯ ಪ್ರಾರಬ್ಧ ಕರ್ಮ ಈ ಜನ್ಮದಲ್ಲಿ ಅನುಭವಿಸಬೇಕಾದ ಫಲ, ಆಗಾಮಿ ಕರ್ಮ ಈ ಜನ್ಮದಲ್ಲಿ ನಾವು ಮಾಡುತ್ತಿರುವ ಕರ್ಮ.

**6. ಕಣ್ಣಿಲ್ಲದ ನೋಟಗರಿಗೆ ಕೊಟ್ಟರು ಮೂರು ಊರುಗಳ, ಎರಡು ಹಾಳು, ಒಂದಕ್ಕೆ ಒಕ್ಕಲೇ ಇಲ್ಲ:** ಮೂರು ಊರುಗಳು ರಾಜಸ ಗುಣ,ತಾಮಸ ಗುಣ, ಸಾತ್ವಿಕ ಗುಣ, ರಾಜಸ ಮತ್ತು ತಾಮಸ ಹಾಳಾದ ಊರುಗಳು. ಸಾತ್ವಿಕ ಗುಣ ಬೆಳೆಸಿಕೊಳ್ಳಲೇ ಇಲ್ಲ ಒಕ್ಕಲೇ ಇಲ್ಲ.

**7. ಒಕ್ಕಲಿಲ್ಲದ ಊರಿಗೆ ಬಂದರು ಮೂವರು ಕುಂಬಾರರು, ಇಬ್ಬರು ಚೊಂಚರು, ಒಬ್ಬಗೆ ಕೈಯೇ ಇಲ್ಲ:** ಮೂರು ಕುಂಬಾರರು ಹರಿ, ಹರ, ಬ್ರಹ್ಮ ಹರ ಮತ್ತು ಬ್ರಹ್ಮ ಚೊಂಚರು (ಹರಿಯ ಆಜ್ಞೆಗೆ ಒಳಪಟ್ಟವರು). ಹರಿ ಕೈಯಿಲ್ಲದ ಕುಂಬಾರ ಜೀವನದಲ್ಲಿ ನಾವು ಪುಣ್ಯ ಮಾಡದೇ ಇದ್ದರೆ, ಹರಿ ಕೈ ನೀಡಿ ಎಳೆದುಕೊಳ್ಳಲು ಸಾಧ್ಯವಿಲ್ಲ.

**8. ಕೈಯಿಲ್ಲದ ಕುಂಬಾರರು ಮಾಡಿದರು ಮೂರು ಮಡಕೆಗಳು, ಎರಡು ಒಡಕು, ಒಂದಕ್ಕೆ ಬುಡವೇ ಇಲ್ಲ:** ಮೂರು ಮಡಕೆಗಳು ಜ್ಞಾನ, ವೈರಾಗ್ಯ, ಭಕ್ತಿ ಜ್ಞಾನ ಮತ್ತು ವೈರಾಗ್ಯ ಒಡಕು ಮಡಕೆಗಳು. ಭಕ್ತಿ ಬುಡವೇ ಇಲ್ಲ (ನಮ್ಮಲ್ಲಿ ಭಕ್ತಿಯೇ ಇಲ್ಲ).

**9. ಬುಡವಿಲ್ಲದ ಗಡಿಗೆಗೆ ಹಾಕಿದರು ಅಕ್ಕಿಗಳ, ಎರಡು ಬೇಯದು, ಒಂದು ಬೇಯಲೇ ಇಲ್ಲ:** ಮೂರು ಅಕ್ಕಿಗಳು ಸಾತ್ವಿಕ ಭಕ್ತಿ, ರಾಜಸಿಕ ಭಕ್ತಿ, ತಾಮಸಿಕ ಭಕ್ತಿ ರಾಜಸಿಕ ಮತ್ತು ತಾಮಸಿಕ ಭಕ್ತಿ ಪ್ರಯೋಜನವಿಲ್ಲ,ಸಾತ್ವಿಕ ಭಕ್ತಿ ಸಾಧ್ಯವಿದ್ದರೂ,ನಾವು ಅದನ್ನು ಬೆಳೆಸಲೇ ಇಲ್ಲ ಬೇಯಲೇ ಇಲ್ಲ.

**10. ಬೇಯಲಿಲ್ಲದ ಅಕ್ಕಿಗೆ ಬಂದರು ಮೂವರು ನೆಂಟರು, ಇಬ್ಬರು ಉಣ್ಣರು, ಒಬ್ಬಗೆ ಹಸಿವೇ ಇಲ್ಲ:** ಮೂರು ನೆಂಟರು ಜೀವ, ದೈವ ಗುಣ, ರಾಕ್ಷಸ ಗುಣ ಉಣ್ಣುವವನು ಜೀವ ಮಾತ್ರ.ಆದರೆ ಜೀವಕ್ಕೆ ಸಾತ್ವಿಕತೆಯ ಹಸಿವೆ ಇಲ್ಲ.

**11. ಹಸಿವಿಲ್ಲದ ನೆಂಟರಿಗೆ ಕೊಟ್ಟರು ಮೂರು ಟೊಣೆಪೆಗಳು, ಎರಡು ಸೋಕವು, ಒಂದು ತಾಕಲೇ ಇಲ್ಲ:** ಮೂರು ಟೊಣೆಪೆಗಳು (ಏಟುಗಳು) , ಅಧ್ಯಾತ್ಮಿಕ,ನೈಸರ್ಗಿಕ ಅವಘಡ, ಇತರ ಜೀವಿಗಳಿಂದ ಉಪಟಳ ಮೊದಲ ಎರಡು ನಮ್ಮ ನಿಯಂತ್ರಣದಲ್ಲಿಲ್ಲ. ನಮ್ಮ ಕೈಯಲ್ಲಿರುವುದು ಅಧ್ಯಾತ್ಮಿಕ ಟೊಣಪೆ. ಆದರೆ ಅದು ನಮ್ಮ ಜೀವನಕ್ಕೆ ತಾಕಲೇ ಇಲ್ಲ.

**12. ತಾಕಲಿಲ್ಲದ ಟೊಣೆಪೆ ತಾಕಿಸಿ ಸದ್ಗತಿಯನು ಈಯಬೇಕು ಪುರಂದರ ವಿಠ್ಠಲರಾಯ** ಇದು ದಾಸರ ಅಂತಿಮ ಪ್ರಾರ್ಥನೆ, ಅಧ್ಯಾತ್ಮ ಚಿಂತನೆ ಎಂಬ ಟೊಣಪೆಯನ್ನು ನನ್ನ ಜೀವನಕ್ಕೆ ತಾಕಿಸು. ನನ್ನನ್ನು ಸದ್ಗತಿಯ ದಾರಿಗೆ ಕರೆದೊಯ್ಯು ಪುರಂದರ ವಿಠ್ಠಲರಾಯ.

**ಸಾರಾಂಶ:** ಈ ಒಗಟಿನಲ್ಲಿ ಪುರಂದರ ದಾಸರು ಹೇಳುವುದೇನಂದರೆ ಜೀವನದಲ್ಲಿ ಎಲ್ಲವೂ ಇದ್ದರೂ,ಸಾತ್ವಿಕ ಗುಣ, ಸಾತ್ವಿಕ ಭಕ್ತಿ, ಅಧ್ಯಾತ್ಮ ಚಿಂತನೆ ಇಲ್ಲದಿದ್ದರೆ, ಎಲ್ಲವೂ ವ್ಯರ್ಥ. ಒಗಟಿನ ಅಂತ್ಯದಲ್ಲಿ ದಾಸರು ಉಪದೇಶಿಸುವುದಿಲ್ಲ ವಿನಂತಿಸುತ್ತಾರೆ.ಅದೇ ಭಕ್ತಿಯ ಶ್ರೇಷ್ಠತೆ.

# ಹುಣಿಸೆಹಣ್ಣಿನ ಉಪಯೋಗಗಳು

ಪ್ರತಿನಿತ್ಯ ಎಲ್ಲರ ಮನೆಗಳಲ್ಲೂ ಹುಣಿಸೆಹಣ್ಣನ್ನು ಕಡ್ಡಾಯವಾಗಿ ಬಳಕೆ ಮಾಡುತ್ತೇವೆ. ಇದರಲ್ಲಿರುವ ಹುಳಿರಸ ಅಡುಗೆಗೆ ಒಳ್ಳೆಯ ರುಚಿಯನ್ನು ಕೊಡುತ್ತದೆ. ಹುಳಿರಸ ಇರುವ ಅನೇಕ ಪದಾರ್ಥಗಳಿದ್ದಾಗ್ಯೂ ಹುಣಿಸೆಹಣ್ಣು ಪ್ರತಿನಿತ್ಯದಲ್ಲಿ ಬಳಕೆಯಾಗುತ್ತದೆ. ಅದನ್ನು ಶೇಖರಿಸಿಟ್ಟುಕೊಂಡು ವರ್ಷಪೂರ್ತಿ ಬಳಸಬಹುದಾಗಿದೆ. ಹುಣಿಸೆಹಣ್ಣು ಹಳೆಯದಾದಷ್ಟೂ ಆರೋಗ್ಯಕ್ಕೆ ಒಳ್ಳೆಯದು. ಹಳೆಯಹುಣಿಸೆಹಣ್ಣಿನಲ್ಲಿ ಸಿಹಿಅಂಶವಿದ್ದು, ಹೃದಯಕ್ಕೆ ಬಲಕೊಡುತ್ತದೆ. ಆದರೆ ಇದರ ಬಳಕೆ ಮಿತವಾಗಿರಬೇಕು. ಇದರಲ್ಲಿ ಕಬ್ಬಿಣ, ಸುಣ್ಣ, ಗಂಧಕ, ನಿಯಾಸಿನ್, ಫಾಸ್ಪರಸ್, ಮೆಗ್ನೀಷಿಯಂ, ತಾಮ್ರ ಸಿ ಜೀವಸತ್ವ ಅಡಗಿದೆ. ಇದರ ಕಾಯಿ, ಹಣ್ಣು, ಎಲೆ, ಬೀಜ ಎಲ್ಲವೂ ಔಷಧೀಯ ಗುಣಗಳಿಂದ ಕೂಡಿದೆ.

**ಉಷ್ಣದ ತಲೆನೋವು:** ಸಣ್ಣನಿಂಬೆಗಾತ್ರದ ಹುಣಿಸೆಹಣ್ಣನ್ನು ನೀರಿನಲ್ಲಿ ನೆನೆಹಾಕಿ ಚೆನ್ನಾಗಿ ಕಿವುಚಿಶೋಧಿಸಿ, ಸಕ್ಕರೆ ಬೆರೆಸಿ ಕುಡಿಯುವುದರಿಂದತಲೆನೋವು ಕಡಿಮೆ ಆಗುತ್ತದೆ.

**ಕಣ್ಣು ಕೆಂಪಾಗುವಿಕೆ, ಕಣ್ಣಲ್ಲಿ ನೀರು ಸುರಿಯುವುದು:** ಅತಿ ಉಷ್ಣದಿಂದ, ವಿಪರೀತವಾದ ಬಿಸಿಲಿನ ತಾಪದಿಂದ ಉಂಟಾಗುವ ಕಣ್ಣು ಕೆಂಪಾಗುವಿಕೆ, ಕಣ್ಣಲ್ಲಿ ನೀರು ಸುರಿಯುವುದು, ಈ ರೀತಿಯ ಸಮಸ್ಯೆಗಳಿಗೆ ಹುಣಿಸೆಹಣ್ಣನ್ನು ನೀರಿನಲ್ಲಿ ನೆನೆಹಾಕಿ ಕಿವುಚಿ, ಶೋಧಿಸಿ, ಅದಕ್ಕೆ ಕಲ್ಲುಸಕ್ಕರೆ ಹಾಕಿ, 7 ದಿನಗಳ ಕಾಲ ಕುಡಿದರೆ ಕಡಿಮೆ ಆಗುತ್ತದೆ.

**ವಾಂತಿ, ಭೇದಿ, ಹೊಟ್ಟೆನೋವಿಗೆ:** ಹುಣಿಸೆಹಣ್ಣು, ಪುದೀನಾ, ಮೆಣಸು, ಏಲಕ್ಕಿ, ಉಪ್ಪು ನುಣ್ಣಗೆ ಅರೆದು ಚಟ್ನಿಯ ರೀತಿ ಮಾಡಿಕೊಳ್ಳಿ. ಇದನ್ನು ಸೇವಿಸುವುದರಿಂದ ವಾಂತಿ, ಭೇದಿ, ಹೊಟ್ಟೆನೋವು ಕಡಿಮೆ ಆಗುತ್ತದೆ.

**ಆಮಶಂಕೆ, ಅತಿಸಾರ:** ಸಣ್ಣ ನಿಂಬೆಗಾತ್ರದಷ್ಟು ಹುಣಿಸೆಹಣ್ಣನ್ನು ಮಜ್ಜಿಗೆಯಲ್ಲಿ ನೆನೆಸಿ ಚೆನ್ನಾಗಿ ಕಿವುಚಿ, ಮತ್ತೆಸ್ವಲ್ಪಮಜ್ಜಿಗೆಯನ್ನು ಮಿಶ್ರಮಾಡಿ ದಿನಕ್ಕೆ 2–3 ಬಾರಿ ಕುಡಿದರೆ ಆಮಶಂಕೆ ಹಾಗೂ ಅತಿಸಾರ ಕಡಿಮೆ



# ದಿನಕ್ಕೆ ಒಂದೆರಡು ಸಿಗರೇಟ್ ಸೇದುವುದರಿಂದ ಹೃದಯಕ್ಕೆ ಅಪಾಯವಾಗೋದಿಲ್ವಾ?





ಇತ್ತೀಚಿನ ದಿನಗಳಲ್ಲಿ, ಸಿಗರೇಟ್ ಸೇದುವುದು ಕೇವಲ ಅಭ್ಯಾಸವಲ್ಲ ಬದಲಾಗಿ ಅನೇಕ ಜನರಿಗೆ ದಿನಚರಿಯಾಗಿ ಬಿಟ್ಟಿದೆ. ಅದು ಕಚೇರಿ ವಿರಾಮ, ಸ್ನೇಹಿತರೊಂದಿಗೆ ಒಂದು ಕಪ್ ಚಹಾ ಅಥವಾ ಟೆನ್ಷನ್‌ನ್ನು ನಿವಾರಿಸುವ ಮಾರ್ಗವಾಗಿರಬಹುದು. ಅನೇಕರು ದಿನಕ್ಕೆ ಒಂದು ಅಥವಾ ಎರಡು ಸಿಗರೇಟ್ ಸೇದುವುದು ಸಂಪೂರ್ಣವಾಗಿ ಸುರಕ್ಷಿತವೆಂದು ಪರಿಗಣಿಸುತ್ತಾರೆ. ಇದರಿಂದ ಅವರ ಹೃದಯಕ್ಕೆ ಯಾವುದೇ ಅಪಾಯವಿಲ್ಲ ಎಂದು ಅವರು ನಂಬುತ್ತಾರೆ. ಆದರೆ ಸ್ವಲ್ಪ ಪ್ರಮಾಣದ ಸಿಗರೇಟ್ ಸೇದುವುದು ಹೃದಯಕ್ಕೆ ನಿಜವಾಗಿಯೂ ಸುರಕ್ಷಿತವೇ? ಎನ್ನುವುದನ್ನು ತಜ್ಞರಿಂದಲೇ ತಿಳಿಯೋಣ.

**ಒಂದು ಸಿಗರೇಟ್ ಹೃದಯಾಘಾತಕ್ಕೆ ಕಾರಣವಾಗಬಹುದೇ?:** ಖಂಡಿತವಾಗಿಯೂ ಒಂದು ದಿನದಲ್ಲಿ ಒಂದು ಅಥವಾ ಎರಡು ಸಿಗರೇಟ್‌ಗಳು ಹೃದಯಾಘಾತದ ಅಪಾಯವನ್ನು ಹೆಚ್ಚಿಸಬಹುದು ಎನ್ನುತ್ತಾರೆ ಯಲಹಂಕದ ಸ್ಪರ್ಶ ಆಸ್ಪತ್ರೆಯ ಕನ್ಸಲ್ಟೆಂಟ್ ಇಂಟರ್ವೆನ್ಷನಲ್ ಕಾರ್ಡಿಯಾಲಜಿಸ್ಟ್ ಡಾ. ನೂತನ್ ಕುಮಾರ್. ಸಿಗರೇಟ್‌ನಲ್ಲಿರುವ ನಿಕೋಟಿನ್, ಕಾರ್ಬನ್ ಮಾನಾಕ್ಸೈಡ್ ಮತ್ತು ಇತರ ವಿಷಕಾರಿ ರಾಸಾಯನಿಕಗಳು ಹೃದಯ ಮತ್ತು ರಕ್ತನಾಳಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತವೆ. ಸಿಗರೇಟ್ ಸೇದಿದ ತಕ್ಷಣ, ರಕ್ತನಾಳಗಳು ಸಂಕುಚಿತಗೊಳ್ಳಲು ಪ್ರಾರಂಭಿಸುತ್ತವೆ, ರಕ್ತದ ಹರಿವನ್ನು ಕಡಿಮೆ ಮಾಡುತ್ತದೆ. ಇದು ಹೃದಯವನ್ನು ಹೆಚ್ಚು ಕೆಲಸ ಮಾಡಲು ಒತ್ತಾಯಿಸುತ್ತದೆ ಮತ್ತು ಹೃದಯ ಬಡಿತ ಮತ್ತು ರಕ್ತದೊತ್ತಡ ಇದ್ದಕ್ಕಿದ್ದಂತೆ ಹೆಚ್ಚಾಗಬಹುದು.

**ಸಂಶೋಧನೆ ಏನು ಹೇಳುತ್ತೆ?:** ದಿನಕ್ಕೆ ಕೇವಲ 1–2 ಸಿಗರೇಟ್ ಸೇದುವುದರಿಂದ ಹೃದಯಾಘಾತ ಮತ್ತು ಪಾರ್ಶ್ವವಾಯು ಬರುವ ಅಪಾಯವು 30–50% ಹೆಚ್ಚಾಗುತ್ತದೆ. ಲಘು ಧೂಮಪಾನಿಗಳು ತಮ್ಮನ್ನು ಧೂಮಪಾನ ಮಾಡದವರ ಹತ್ತಿರ ಪರಿಗಣಿಸುವ ತಪ್ಪನ್ನು ಮಾಡುತ್ತಾರೆ, ಆದರೆ ವಾಸ್ತವದಲ್ಲಿ ಅವರ ಅಪಾಯವು ಗಮನಾರ್ಹವಾಗಿ ಹೆಚ್ಚಾಗುತ್ತದೆ. ಸಿಗರೇಟ್ ರಕ್ತದಲ್ಲಿನ ಆಮ್ಲಜನಕದ ಪ್ರಮಾಣವನ್ನು ಕಡಿಮೆ ಮಾಡುತ್ತದೆ ಮತ್ತು ಪ್ಲೇಟ್‌ಲೆಟ್‌ಗಳನ್ನು ಹೆಚ್ಚು ಜಿಗುಟಾಗಿಸುತ್ತದೆ. ಇದು ರಕ್ತ ಹೆಪ್ಪುಗಟ್ಟುವಿಕೆಯ ಅಪಾಯವನ್ನು ಹೆಚ್ಚಿಸುತ್ತದೆ. ಈ ಹೆಪ್ಪುಗಟ್ಟುವಿಕೆ ಹೃದಯ ಅಪಧಮನಿಯಲ್ಲಿ ಸಿಲುಕಿಕೊಂಡಾಗ, ಅದು ಹೃದಯಾಘಾತಕ್ಕೆ ಕಾರಣವಾಗಬಹುದು.

ಒಬ್ಬ ವ್ಯಕ್ತಿಗೆ ಈಗಾಗಲೇ ಅಧಿಕ ರಕ್ತದೊತ್ತಡ, ಮಧುಮೇಹ ಅಥವಾ ಕೊಲೆಸ್ಟ್ರಾಲ್ ಇದ್ದರೆ ಈ ಅಪಾಯ ಮತ್ತಷ್ಟು ಹೆಚ್ಚಾಗುತ್ತದೆ.

**ವೈದ್ಯರು ಏನಂತಾರೆ?:** ಹೃದಯದ ಆರೋಗ್ಯದ ವಿಷಯದಲ್ಲಿ ಧೂಮಪಾನದ ಸುರಕ್ಷಿತ ಮಟ್ಟವಿಲ್ಲ. ಒಂದೇ ಒಂದು ಸಿಗರೇಟ್ ಕೂಡ ದೇಹವನ್ನು ನಿಕೋಟಿನ್, ಕಾರ್ಬನ್ ಮಾನಾಕ್ಸೈಡ್, ವಿಷಕಾರಿ ರಾಸಾಯನಿಕಗಳಿಗೆ ಒಡ್ಡಿಕೊಳ್ಳಬಹುದು, ಇದು ರಕ್ತನಾಳಗಳ ಮೇಲೆ ತಕ್ಷಣವೇ ಪರಿಣಾಮ ಬೀರುತ್ತದೆ. ಈ ವಸ್ತುಗಳು ಹೃದಯಕ್ಕೆ ಆಮ್ಲಜನಕದ ಪೂರೈಕೆಯನ್ನು ಕಡಿಮೆ ಮಾಡುತ್ತದೆ, ಹೃದಯ ಬಡಿತ ಮತ್ತು ರಕ್ತದೊತ್ತಡವನ್ನು ಹೆಚ್ಚಿಸುತ್ತದೆ ಮತ್ತು ರಕ್ತ ಹೆಪ್ಪುಗಟ್ಟುವಿಕೆಗೆ ಹೆಚ್ಚು ಒಳಗಾಗುವಂತೆ ಮಾಡುತ್ತದೆ.

**ನಿಷ್ಕ್ರಿಯ ಧೂಮಪಾನವು ನಿಮಗೆ ಕೆಟ್ಟದ್ದೇ?:** ನಿಮ್ಮನ್ನು ಧೂಮಪಾನ ಮಾಡುವುದು ಮಾತ್ರವಲ್ಲದೆ, ಇತರ ಜನರ ಹೊಗೆಯನ್ನು ಉಸಿರಾಡುವುದು ಹೃದಯಕ್ಕೆ ಅಪಾಯಕಾರಿ ಎನ್ನುತ್ತಾರೆ ವೈದ್ಯರು. ನಿಷ್ಕ್ರಿಯ ಧೂಮಪಾನವು ರಕ್ತನಾಳಗಳನ್ನು ಹಾನಿಗೊಳಿಸುತ್ತದೆ ಮತ್ತು ಹೃದಯಾಘಾತದ ಅಪಾಯವನ್ನು ಹೆಚ್ಚಿಸುತ್ತದೆ, ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳಲ್ಲಿ.

**ನೀವು ಇದ್ದಕ್ಕಿದ್ದಂತೆ ಧೂಮಪಾನವನ್ನು ನಿಲ್ಲಿಸಿದರೆ ಏನಾಗುತ್ತದೆ?:** ಒಳ್ಳೆಯ ಸುದ್ದಿ ಏನೆಂದರೆ ಧೂಮಪಾನವನ್ನು ಸಂಪೂರ್ಣವಾಗಿ ತ್ಯಜಿಸುವುದರಿಂದ ಹೃದಯದ ಹಾನಿಯನ್ನು ತ್ವರಿತವಾಗಿ ಹಿಮ್ಮೆಟ್ಟಿಸಲು ಪ್ರಾರಂಭಿಸುತ್ತದೆ. ಹೃದಯಾಘಾತದ ಅಪಾಯವು 24 ಗಂಟೆಗಳಲ್ಲಿ ಕಡಿಮೆಯಾಗಲು ಪ್ರಾರಂಭವಾಗುತ್ತದೆ ಮತ್ತು 1 ವರ್ಷದೊಳಗೆ, ಅಪಾಯವನ್ನು ಅರ್ಧದಷ್ಟು ಕಡಿಮೆ ಮಾಡಬಹುದು. 5 ರಿಂದ 10 ವರ್ಷಗಳಲ್ಲಿ, ಹೃದ್ರೋಗದ ಅಪಾಯವು ಧೂಮಪಾನ ಮಾಡದ ವ್ಯಕ್ತಿಯಂತೆಯೇ ಆಗಬಹುದು.

**ನಿಯಮಿತವಾಗಿ ಹಲ್ಲುಜ್ಜುತ್ತಿದ್ದರೂ ಬಾಯಿಯಿಂದ ದುರ್ವಾಸನೆ ಬರುತ್ತಿದೆಯೇ? ಹಾಗಂತ ಹಲ್ಲಿನ ಹಾಗೂ ಒಸಡಿನ ಸಮಸ್ಯೆಗಳಿಂದ ಮಾತ್ರವಲ್ಲ ಬದಲಿಗೆ ದೇಹದಲ್ಲಿ ಕೆಲವೊಂದು ಬಗೆಯ ವಿಟಮಿನ್ಸ್ ಕೊರತೆಯಿಂದ ಕೂಡ ಬಾಯಿ ವಾಸನೆ ಬರಲು ಶುರುವಾಗುತ್ತದೆಯಂತೆ!**

# ವಿಟಮಿನ್ಸ್ ಕೊರತೆಯಾದರೆ ಬಾಯಿ ದುರ್ವಾಸನೆ ಬರುತ್ತದೆ ಇದಕ್ಕೆ ಪರಿಹಾರಗಳೇನು?


ಕೆಲವರ ಬಾಯಿ ತುಂಬಾನೇ ದುರ್ವಾಸನೆಯಿಂದ ಕೂಡಿರುತ್ತದೆ, ಅವರ ಎದುರು ನಿಂತು ಮಾತನಾಡುವುದಕ್ಕೂ ಆಗುವುದಿಲ್ಲ ಸಾಮಾನ್ಯವಾಗಿ ಬಾಯಿ ದುರ್ವಾಸನೆಗೆ ಪ್ರಮುಖ ಕಾರಣಗಳು ಏನು ಎಂದು ನೋಡುವುದಾದರೆ, ಬಾಯಿ ಸರಿಯಾಗಿ ಶುಚಿಯಾಗಿ ಇಲ್ಲದೆ ಇರುವುದು, ಊಟ ತಿಂಡಿಯ ನಂತರ ಬಾಯಿ ಸರಿಯಾಗಿ ಮುಕ್ಕಳಿಸದಿರುವುದು, ಅಥವಾ ಜೀರ್ಣಕಾರಿಗೆ ಸಂಬಂಧಪಟ್ಟ ಸಮಸ್ಯೆಗಳು ಇಲ್ಲಾಂದ್ರೆ ಹಲ್ಲಿನ ಹಾಗೂ ಒಸಡಿನ ಸಮಸ್ಯೆಗಳಿಂದ ಕೂಡ ಬಾಯಿ ವಾಸನೆ ಬರಲು ಕಾರಣವಾಗುತ್ತದೆ. ಆದರೆ ಅಧ್ಯಾಯಾನದ ಪ್ರಕಾರ ಕೆಲವೊಮ್ಮೆ ಜೀವಸತ್ವಗಳ ಅಥವಾ ಕೆಲವೊಂದು ಪ್ರಮುಖ ವಿಟಮಿನ್ಸ್ ಕೊರತೆಯಿಂದಾಗಿಯೂ ಕೂಡ ಬಾಯಿ ವಾಸನೆ ಬರುವ ಸಾಧ್ಯತೆಗಳು ಇರುತ್ತವೆಯಂತೆ.

**ವಿಟಮಿನ್ ಕೊರತೆಯು ಬಾಯಿಯ ದುರ್ವಾಸನೆಗೆ ಕಾರಣವಾಗುತ್ತದೆಯಂತೆ!**

**ವಿಟಮಿನ್ ಸಿ ಕೊರತೆ:** ಒಸಡುಗಳು ಮತ್ತು ಹಲ್ಲುಗಳ ಆರೋಗ್ಯಕ್ಕೆ ವಿಟಮಿನ್ ಸಿ ಅತ್ಯಗತ್ಯ. ಕೊರತೆಯು ಒಸಡುಗಳು ಊದಿಕೊಳ್ಳುವುದು, ರಕ್ತಸ್ರಾವ ಮತ್ತು ಬ್ಯಾಕ್ಟೀರಿಯಾದ ಪ್ಲೇಕ್‌ಗೆ ಕಾರಣವಾಗಬಹುದು, ಇದು ಬಾಯಿಯ ದುರ್ವಾಸನೆಗೆ ಕಾರಣವಾಗಬಹುದು. ಹೀಗಾಗಿ ವಿಟಮಿನ್ ಸಿ ಹೆಚ್ಚಿರುವ ಹಣ್ಣುಗಳಾದ ಆಮ್ಲಾ ಸೀಬೆ, ಕಿವಿ ಹಣ್ಣು, ಕಿತ್ತಳೆ, ಅನಾನಸ್, ಸ್ಟ್ರಾಬೆರಿ, ಕ್ಯಾಪ್ಸಿಕಂ ಮುಂತಾದ ಆಹಾರಗಳನ್ನು ತಮ್ಮ ಆಹಾರ ಪದ್ಧತಿಯಲ್ಲಿ ಸೇರಿಸಿಕೊಳ್ಳಿ.

**ವಿಟಮಿನ್ ಡಿ ಕೊರತೆ:** ಈ ವಿಟಮಿನ್ ಮೂಳೆಗಳು ಮತ್ತು ಹಲ್ಲುಗಳನ್ನು ಬಲಪಡಿಸುತ್ತದೆ. ವಿಟಮಿನ್ ಡಿ ಕೊರತೆಯು ಹಲ್ಲುಗಳು ದುರ್ಬಲ ಗೊಳ್ಳಲು, ಹಲ್ಲು ಕೊಳೆಯುವ ಅಪಾಯ ಮತ್ತು ಒಸಡು ಸೋಂಕುಗಳಿಗೆ ಕಾರಣವಾಗಬಹುದು, ಇದು ಬಾಯಿಯ ದುರ್ವಾಸನೆಗೆ ಕಾರಣವಾಗ ಬಹುದು. ವಿಟಮಿನ್ ಡಿ ಹೆಚ್ಚಿರುವ ಆಹಾರಗಳಾದ ಮಶ್ರೂಮ್, ಮೊಟ್ಟೆಯ ಹಳದಿ ಭಾಗ, ಹಸುವಿನ ಹಾಲು, ಮೊಸರು, ಸೋಯಾ ಹಾಲು ಹಾಗೂ ಸೋಯಾ ಉತ್ಪನ್ನಗಳನ್ನು ಆಹಾರ ಪದ್ಧತಿಯಲ್ಲಿ ಹೆಚ್ಚಾಗಿ ಸೇವನೆ ಮಾಡಿ

**ವಿಟಮಿನ್ ಬಿ 12 ಕೊರತೆ:** ವಿಟಮಿನ್ ಬಿ 12 ಕೊರತೆಯು ಬಾಯಿ ಹುಣ್ಣುಗಳಿಗೆ ಕಾರಣವಾಗಬಹುದು ಮತ್ತು ಜೀರ್ಣಕ್ರಿಯೆಯ ಮೇಲೂ ಪರಿಣಾಮ ಬೀರುತ್ತದೆ. ಆದಷ್ಟು ಆಹಾರಪದ್ಧತಿಯಲ್ಲಿ ಬಿಳಿ ಅಥವಾ ಕೆಂಪು ಮಾಂಸ, ಮೀನು ಮೊಟ್ಟೆ, ಹಾಲು, ಮೊಸರು ಇಂತಹ ಆಹಾರಗಳನ್ನು ಹೆಚ್ಚಾಗಿ ಸೇವನೆ ಮಾಡಿ.








**ವಿಟಮಿನ್ ಎ ಕೊರತೆ:** ವಿಟಮಿನ್ ಎ ಕೊರತೆಯು ಬಾಯಿ ಮತ್ತು ಗಂಟಲಿನಲ್ಲಿ ತೇವಾಂಶವನ್ನು ಕಡಿಮೆ ಮಾಡುತ್ತದೆ, ಇದು ಶುಷ್ಕತೆ ಮತ್ತು ಕೆಟ್ಟ ವಾಸನೆಯನ್ನು ಹೆಚ್ಚಿಸುತ್ತದೆ.

**ಫೋಲಿಕ್ ಆಮ್ಲ (ವಿಟಮಿನ್ ಬಿ 9) ಕೊರತೆ:** ಇದರ ಕೊರತೆಯು ಒಸಡುಗಳನ್ನು ದುರ್ಬಲಗೊಳಿಸುತ್ತದೆ, ಆಗಾಗ್ಗೆ ಸೋಂಕುಗಳಿಗೆ ಕಾರಣ ಆಗಬಹುದು, ಇದು ಬಾಯಿಯ ದುರ್ವಾಸನೆಗೆ ಕಾರಣವಾಗುತ್ತದೆ.

**ಬಾಯಿ ದುರ್ವಾಸನೆ ತಡೆಗೆ ಈ ಮನೆಮದ್ದು ಅನುಸರಿಸಿ ನೋಡಿ:** ನೀರಿನ ಜೊತೆಗೆ ಇತರ ಆರೋಗ್ಯಕರ ಪಾನೀಯಗಳನ್ನು ಕುಡಿಯುವ ಅಭ್ಯಾಸ ಮಾಡಿಕೊಳ್ಳಿ: ತಜ್ಞರು ನಿಮ್ಮ ಬಾಯಿ ದೀರ್ಘಕಾಲದವರೆಗೆ ಒಣಗಲು ಬಿಡಬೇಡಿ ಎಂದು ಸಲಹೆ ನೀಡುತ್ತಾರೆ. ನಿಮ್ಮ ಬಾಯಿಯನ್ನು ತಾಜಾವಾಗಿಡಲು ದಿನವಿಡೀ ನೀರು, ಇತರ ಪಾನೀಯಗಳನ್ನು ಕುಡಿಯಿರಿ.

**ಏಲಕ್ಕಿ ಮತ್ತು ದಾಲ್ಚಿನ್ನಿ:** ಬಾಯಿಯ ದುರ್ವಾಸನೆಯನ್ನು ತಡೆಗಟ್ಟಲು, ಒಂದು ಸಣ್ಣ ತುಂಡು ಏಲಕ್ಕಿ ಮತ್ತು ದಾಲ್ಚಿನ್ನಿಯನ್ನು ಅಗಿಯಿರಿ. ನಿಮ್ಮ ಬಾಯಿಯಲ್ಲಿ ಉತ್ಪತ್ತಿಯಾಗುವ ಲಾಲಾರಸವು ನಿಮ್ಮ ಆಹಾರವನ್ನು ಸುಲಭವಾಗಿ ಜೀರ್ಣಿಸಿ ಕೊಳ್ಳಲು ಸಹಾಯ ಮಾಡುತ್ತದೆ ಮತ್ತು ನಿಮ್ಮ ಬಾಯಿಯು ಬಾಯಿಯ ದುರ್ವಾಸನೆಯಿಂದ ಮುಕ್ತವಾಗಿರುತ್ತದೆ.

**ಬೇ ಎಲೆ ಚಹಾ:** ಬಾಯಿಯ ದುರ್ವಾಸನೆಯನ್ನು ತಕ್ಷಣವೇ ತೊಡೆದುಹಾಕಲು ಬೇ ಎಲೆ ಚಹಾವನ್ನು ಕುಡಿಯಿರಿ. ನಾಲ್ಕು ಬೇ ಎಲೆಗಳನ್ನು ನೀರಿನಲ್ಲಿ ಕೆಲವು ನಿಮಿಷಗಳ ಕಾಲ ಕುದಿಸಿ, ನಂತರ ಅದನ್ನು ಜರಡಿ ಮೂಲಕ ಸೋಸಿ ಕುಡಿಯಿರಿ.

**ಕೊತ್ತಂಬರಿ ಬೀಜಗಳು:** ಕೊತ್ತಂಬರಿ ಬೀಜಗಳು ಬಾಯಿಯ ದುರ್ವಾಸನೆ ಅನ್ನು ನಿವಾರಿಸುವಲ್ಲಿ ಸಹ ಪರಿಣಾಮಕಾರಿ. ಇದನ್ನು ಮಾಡಲು, ಈ ಬೀಜಗಳನ್ನು ಹುರಿದು ಪುಡಿಮಾಡಿ. ನಂತರ, ಮಿಶ್ರಣಕ್ಕೆ ಸ್ವಲ್ಪ ಕಪ್ಪು ಉಪ್ಪನ್ನು ಸೇರಿಸಿ, ಊಟದ ನಂತರ ಸ್ವಲ್ಪ ಪ್ರಮಾಣದಲ್ಲಿ ಅಗಿಯಿರಿ.

**ತುಳಸಿ ಎಲೆಗಳು:** ತುಳಸಿ ಎಲೆಗಳನ್ನು ನೀರಿನಲ್ಲಿ ಕುದಿಸಿ, ಸ್ವಲ್ಪ ಉಪ್ಪು ಸೇರಿಸಿ, ದಿನವಿಡೀ ಹಲವಾರು ಬಾರಿ ಬಾಯಿ ಮುಕ್ಕಳಿಸಿ. ಇದು ಬಾಯಿಯ ದುರ್ವಾಸನೆಯನ್ನು ನಿವಾರಿಸಲು ಮತ್ತು ಬಾಯಿಯಲ್ಲಿನ ಉರಿಯೂತವನ್ನು ಶಮನ ಗೊಳಿಸಲು ಸಹಾಯ ಮಾಡುತ್ತದೆ.

**ಪರಿಹಾರ ಪಡೆಯಲು ಮನೆಮದ್ದುಗಳು:** ವಿಟಮಿನ್ ಭರಿತ ಆಹಾರವನ್ನು ಸೇವಿಸಿ – ನಿಂಬೆ, ಕಿತ್ತಳೆ, ಆಮ್ಲಾ, ಹಸಿರು ಎಲೆ ತರಕಾರಿಗಳು, ಕ್ಯಾರೆಟ್, ಟೊಮೆಟೊ, ಮೊಟ್ಟೆ, ಹಾಲು ಮತ್ತು ಬೇಳೆಕಾಳು ಅಂತಹ ವಿಟಮಿನ್ ಭರಿತ ಆಹಾರಗಳನ್ನು ನಿಮ್ಮ ಆಹಾರದಲ್ಲಿ ಸೇರಿಸಿ. ಸಾಕಷ್ಟು ನೀರು ಕುಡಿಯಿರಿ – ಬಾಯಿ ಒಣಗುವುದರಿಂದ ದುರ್ವಾಸನೆ ಹೆಚ್ಚಾಗುತ್ತದೆ, ಆದ್ದರಿಂದ ಸಾಕಷ್ಟು ನೀರು ಕುಡಿಯಿರಿ. ನಿಯಮಿತವಾಗಿ ಹಲ್ಲುಜ್ಜುವುದು ಮತ್ತು ಫ್ಲಾಸ್ ಮಾಡುವುದು – ದಿನಕ್ಕೆ ಎರಡು ಬಾರಿ ಹಲ್ಲುಜ್ಜುವುದು ಮತ್ತು ನಿಮ್ಮ ಹಲ್ಲುಗಳ ನಡುವಿನ ಕಸವನ್ನು ತೆಗೆದು ಹಾಕಲು ಫ್ಲಾಸ್ ಮಾಡುವುದು. ಗ್ರೀನ್ ಟೀ ಅಥವಾ ಗಿಡಮೂಲಿಕೆ ಚಹಾವನ್ನು ಕುಡಿಯಿರಿ –ಅವುಗಳಲ್ಲಿರುವ ಉತ್ಕರ್ಷಣ ನಿರೋಧಕಗಳು ಬ್ಯಾಕ್ಟೀರಿಯಾವನ್ನು ಕಡಿಮೆ ಮಾಡುವ ಮೂಲಕ ಉಸಿರಾಟವನ್ನು ತಾಜಾವಾಗಿರಿಸುತ್ತದೆ.

**ಧೂಮಪಾನ ಮತ್ತು ಮದ್ಯಪಾನದಿಂದ ದೂರವಿರಿ:** ಧೂಮಪಾನ ಮತ್ತು ಮದ್ಯಪಾನ ಮಾಡುವ ಅಭ್ಯಾಸ ಮಾಡಿಕೊಳ್ಳುವುದರಿಂದ ಬಾಯಿಯನ್ನು ಒಣಗಿಸುತ್ತವೆ ಮತ್ತು ದುರ್ವಾಸನೆಯನ್ನು ಉಂಟುಮಾಡುತ್ತವೆ. ಉಪ್ಪು ನೀರಿನಿಂದ ಬಾಯಿ ಮುಕ್ಕಳಿಸುವುದು – ಉಗುರು ಬೆಚ್ಚಗಿನ ನೀರಿನಲ್ಲಿ ಉಪ್ಪಿನೊಂದಿಗೆ ಬಾಯಿ ಮುಕ್ಕಳಿಸುವುದರಿಂದ ಬ್ಯಾಕ್ಟೀರಿಯಾ ಕಡಿಮೆಯಾಗುತ್ತದೆ. ದಂತ ತಪಾಸಣೆ ಮಾಡಿ – ಕೆಟ್ಟ ವಾಸನೆ ಮುಂದುವರಿದರೆ, ನಿಮ್ಮ ಹಲ್ಲು ಮತ್ತು ಒಸಡುಗಳನ್ನು ಪರೀಕ್ಷಿಸಿ.

## 1000 ಕೋಟಿ ರೂ. ವಂಚಿಸಲು ಯತ್ನಿಸಿದ್ದ ಬ್ಯಾಂಕ್ ಮ್ಯಾನೇಜರ್ ಸೇರಿ 18 ಜನರ ವಿರುದ್ಧ ಸಿಬಿಐ ಎಫ್‌ಐಆರ್

**ನವದೆಹಲಿ:** ಸೈಬರ್ ಅಪರಾಧ ಮತ್ತು ಇತರ ಅಕ್ರಮ ಚಟುವಟಿಕೆಗಳಿಂದ ಸಂಗ್ರಹವಾದ 1,000 ಕೋಟಿ ರೂ.ಗಳಿಗೂ ಹೆಚ್ಚಿನ ಹಣವನ್ನು ಮರೆಮಾಚಲು ಮತ್ತು ವಂಚಿಸಲು ಬಳಸಲಾದ ಮ್ಯೂಲ್ ಖಾತೆಗಳನ್ನು ತೆರೆದ ಆರೋಪದ ಮೇಲೆ ಪಂಜಾಬ್ ಮತ್ತು ಸಿಂಧ್ ಬ್ಯಾಂಕಿನ ಶಾಖೆಯ ಮುಖ್ಯಸ್ಥ ಮತ್ತು ಇತರ 18 ಜನರ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ. ನಕಲಿ ದಾಖಲೆಗಳನ್ನು ಬಳಸಿಕೊಂಡು ಅಸ್ತಿತ್ವದಲ್ಲಿಲ್ಲದ ಕಂಪನಿಗಳ ಹೆಸರಿನಲ್ಲಿ ತೆರೆಯಲಾದ 13 ಮ್ಯೂಲ್ ಖಾತೆಗಳನ್ನು ಬಹಿರಂಗಪಡಿಸಿದ ಪ್ರಾಥಮಿಕ ತನಿಖೆಯ ಆಧಾರದ ಮೇಲೆ ಸಂಸ್ಥೆ ಕ್ರಮ ಕೈಗೊಂಡಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ. ರಾಜಸ್ಥಾನದ ಶ್ರೀಗಂಗಾನಗರದಲ್ಲಿರುವ ಬ್ಯಾಂಕಿನ ಸರ್ಕಾರಿ ಬಾಲಕಿಯರ ಹಿರಿಯ ಮಾಧ್ಯಮಿಕ ಶಾಲಾ ಶಾಖೆಯಲ್ಲಿ ಖಾತೆಗಳನ್ನು ತೆರೆಯಲು ಬಳಸಲಾಗುವ ಹಲವಾರು ವ್ಯಕ್ತಿಗಳು ನಕಲಿ ಮತ್ತು ನಕಲಿ ದಾಖಲೆಗಳು, ಸುಳ್ಳು ಬಾಡಿಗೆ ಒಪ್ಪಂದಗಳು ಮತ್ತು ಇತರ ನಕಲಿ ಪೋಷಕ ದಾಖಲೆಗಳನ್ನು ವ್ಯವಸ್ಥೆಗೊಳಿಸಿದ್ದಾರೆ ಎಂದು ಸಂಸ್ಥೆ ಕಂಡುಹಿಡಿದಿದೆ.

ವಿಕಾಸ್ ವಾಧ್ವಾ ಆ ಶಾಖೆಯ ಮುಖ್ಯಸ್ಥರಾಗಿದ್ದರು.ಈ ಖಾತೆಗಳನ್ನು ಅಪರಿಚಿತ ಬ್ಯಾಂಕ್ ಅಧಿಕಾರಿಗಳ ಸಮ್ಮತಿ ಮತ್ತು ಕ್ರಿಮಿನಲ್ ಪಿತೂರಿಯೊಂದಿಗೆ ತೆರೆಯಲಾಗಿದೆ ಎಂದು ಆರೋಪಿಸಲಾಗಿದೆ, ಮಾನದಂಡಗಳು, ಸರಿಯಾದ ಪರಿಶ್ರಮದ ಅವಶ್ಯಕತೆಗಳು ಮತ್ತು ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳನ್ನು ಉಲ್ಲಂಘಿಸಲಾಗಿದೆ ಎಂದು ಸಂಸ್ಥೆ ಎಕ್ಸ್‌ನಲ್ಲಿ ಆರೋಪಿಸಿದೆ.




ನಕಲಿ ಗುರುತಿನ ದಾಖಲೆಗಳನ್ನು ಬಳಸಿಕೊಂಡು ಸ್ಥಾಪಿಸಲಾದ ಮ್ಯೂಲ್ ಖಾತೆಯನ್ನು ಪ್ರಾಥಮಿಕವಾಗಿ ಖಾತೆಯನ್ನು ತೆರೆಯಲು ಬಳಸಿದ ವ್ಯಕ್ತಿಗಳ ಅರಿವಿಲ್ಲದೆ ಅಥವಾ ತಿಳಿಯದೆ ಅಕ್ರಮ ಹಣವನ್ನು ಸಾಗಿಸಲು ಅಥವಾ ಅಕ್ರಮವಾಗಿ ವರ್ಗಾಯಿಸಲು ಬಳಸಲಾಗುತ್ತದೆ. ಕಾಲ್ಪನಿಕ ಸಂಸ್ಥೆಗಳ ಹೆಸರಿನಲ್ಲಿ ಈ ಚಾಲ್ತಿ ಖಾತೆಗಳನ್ನು ತೆರೆಯಲು ಅನುಕೂಲವಾಗುವಂತೆ ಬ್ಯಾಂಕ್ ಅಧಿಕಾರಿಗಳು ನಕಲಿ ಸೈಟ್ ಭೇಟಿ ವರದಿಗಳು ಮತ್ತು ವ್ಯವಹಾರ ಪರಿಶೀಲನೆಯನ್ನು ರಚಿಸಿದ್ದಾರೆ ಎಂದು ಏಜೆನ್ಸಿ ಎಫ್‌ಐಆರ್ ಆರೋಪಿಸಿದೆ.

ಈ ಚಾಲ್ತಿ ಖಾತೆಗಳನ್ನು ತೆರೆಯಲಾದ ಎಲ್ಲಾ 13 ಸಂಸ್ಥೆಗಳು ಅಸ್ತಿತ್ವದಲ್ಲಿಲ್ಲ ಮತ್ತು ನಕಲಿ ಮತ್ತು ಕೃತಕ ದಾಖಲೆಗಳನ್ನು ಬಳಸಿಕೊಂಡು ಈ ಚಾಲ್ತಿ ಖಾತೆಗಳನ್ನು ತೆರೆಯಲು ಮತ್ತು ನಿರ್ವಹಿಸಲು ಮಾತ್ರ ರಚಿಸಲಾಗಿದೆ ಎಂದು ಕೇಂದ್ರ ತನಿಖಾ ಸಂಸ್ಥೆ ಹೇಳಿದೆ.

## ದೀದಿ ವಿರುದ್ಧ 100 ಕೋಟಿ ಮಾನನಷ್ಟ ಮೊಕದ್ದಮೆ ದಾಖಲಿಸಿದ ಸುವೇಂದು





**ಕೋಲ್ಕತ್ತಾ:** ಪಶ್ಚಿಮ ಬಂಗಾಳದ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದಂತೆ 100 ಕೋಟಿ ರೂ.ಗಳ ಪರಿಹಾರ ಕೋರಿ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ.

ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಬ್ಯಾನರ್ಜಿ ಅವರಿಗೆ ಕಳುಹಿಸಲಾದ ಮಾನನಷ್ಟ ನೋಟಿಸ್‌ಗೆ ಉತ್ತರ ಸಿಗದ ನಂತರ ಇಲ್ಲಿನ ಅಲಿಪೋರ್ ನ್ಯಾಯಾಲಯದ ಹಿರಿಯ ವಿಭಾಗದ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದೇನೆ ಎಂದು ಅಧಿಕಾರಿ ಹೇಳಿದ್ದಾರೆ.

ಮಮತಾ ಬ್ಯಾನರ್ಜಿ, ನೀವು ಸಮಸ್ಯೆಗಳು ಮತ್ತು ಜನರನ್ನು ಅಸ್ಪಷ್ಟಗೊಳಿಸುವಾಗ ನಾನು ನನ್ನ ಬದ್ಧತೆಗಳನ್ನು ಗೌರವಿಸುತ್ತೇನೆ. ಕೆಲವು ಕಲ್ಲಿದ್ದಲು ಹಗರಣದಲ್ಲಿ ನನ್ನ ಭಾಗಿಯಾಗಿದೆ ಎಂಬ ನಿಮ್ಮ ಕೆಟ್ಟ ಕಾಲ್ಪನಿಕ ಆರೋಪಗಳಿಗೆ ಸಂಬಂಧಿಸಿದ ಮಾನನಷ್ಟ ನೋಟಿಸ್‌ಗೆ ನಿಮ್ಮ ಮೋಸಗೊಳಿಸುವ ಮೌನವು ಪರಿಸ್ಥಿತಿಯನ್ನು ಉಳಿಸಲು ನಿಮಗೆ ಸಹಾಯ ಮಾಡುವುದಿಲ್ಲ ಎಂದು ಬಿಜೆಪಿ ಶಾಸಕರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ರಾಜ್ಯದಲ್ಲಿ 2021 ರ ವಿಧಾನಸಭಾ ಚುನಾವಣೆಗೆ ಮೊದಲು ಕೇಸರಿ ಪಕ್ಷವನ್ನು ಸೇರುವ ಮೊದಲು ಅಧಿಕಾರಿ ತೃಣಮೂಲ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿದ್ದರು.ನಿಮ್ಮ ಮೋಸದ ದುಸ್ಸಾಹಸಕ್ಕಾಗಿ ನಿಮ್ಮನ್ನು ನ್ಯಾಯಾಲಯಕ್ಕೆ ಎಳೆಯುವ ನನ್ನ ಮಾತನ್ನು ನಾನು ಉಳಿಸಿಕೊಂಡಿದ್ದೇನೆ ಮತ್ತು ನಿಮ್ಮ ವಿರುದ್ಧ ಮೊಕದ್ದಮೆ ಹೂಡಿದ್ದೇನೆ ಎಂದು ಅಧಿಕಾರಿ ಅವರು ಸಲ್ಲಿಸಿದ ಹಕ್ಕು ಮೊಕದ್ದಮೆಯ ನೋಂದಣಿಯ ಫೋಟೋವನ್ನು ಹಂಚಿಕೊಂಡಿದ್ದಾರೆ.

ದಯವಿಟ್ಟು ನಿಮ್ಮ ವಕೀಲರನ್ನು ಬೇಗ ಸಂಪರ್ಕಿಸಿ, ಇಲ್ಲದಿದ್ದರೆ ನೀವು ಶೀಘ್ರದಲ್ಲೇ ನನಗೆ 100 ಕೋಟಿ ರೂಪಾಯಿ ಪರಿಹಾರವನ್ನು ಪಾವತಿಸಬೇಕಾಗುತ್ತದೆ, ಅದನ್ನು ನಾನು ದತ್ತಿ ಸಂಸ್ಥೆಗೆ ದೇಣಿಗೆ ನೀಡುತ್ತೇನೆ ಎಂದು ಅಧಿಕಾರಿ ಹೇಳಿದರು.

● ಪಾಕಿಸ್ತಾನ ಭಯೋತ್ಪಾದನೆಯನ್ನು ಸೋಲಿಸಲು ದೃಢನಿಶ್ಚಯ ಹೊಂದಿದೆ

# ಭಯೋತ್ಪಾದನೆ ವಿರುದ್ಧ ಶೆಹಬಾಜ್ ಗುಡುಗು

**ಇಸ್ಲಾಮಾಬಾದ್:** ಮಗುವನ್ನು ಚಿವುಟಿ ತೊಟ್ಟಿಲು ತೂಗುವ ಪಾಕಿಸ್ತಾನ, ಭಯೋತ್ಪಾದಕರನ್ನು ಭಾರತದ ವಿರುದ್ಧ ಛೂ ಬಿಡುವ ಚಾಳಿಯನ್ನು ಇನ್ನೂ ಬಿಟ್ಟಿಲ್ಲ. ಮೇಲ್ನೋಟಕ್ಕೆ ಭಯೋತ್ಪಾದನೆಯನ್ನು ಟೀಕಿಸುವ ಮತ್ತು ಆಂತರ್ಯದಲ್ಲಿ ಭಯೋತ್ಪಾದನೆಗೆ ಕುಮ್ಮಕ್ಕು ನೀಡುವ ಪಾಕಿಸ್ತಾನದ ಕುಟೀಲ ನೀತಿಯನ್ನು ಇಡೀ ಜಗತ್ತು ಅರ್ಥ ಮಾಡಿಕೊಂಡಿದೆ.

ಪಾಕಿಸ್ತಾನ ಭಯೋತ್ಪಾದನೆ ವಿರೋಧಿ ಹೇಳಿಕೆ ನೀಡಿದರೆ ಇಡೀ ಜಗತ್ತು ನಗುವ ಸ್ಥಿತಿಗೆ ಬಂದು ತಲುಪಿದೆ. ಆದರೆ ಆ ದೇಶದ ಪ್ರಧಾನಿ ಶೆಹಬಾಜ್ ಷರೀಫ್ ಮಾತ್ರ, ಭಯೋತ್ಪಾದನೆಯನ್ನು ಅಳಿಸಿಹಾಕುವ ಘೋಷಣೆ ಮಾಡಿದ್ದಾರೆ. ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಇಂದು ಶನಿವಾರ ನಡೆದ . ರಾಷ್ಟ್ರೀಯ ಪೈಗಾಮ್-ಎ-ಅಮನ್ ಸಮಿತಿಯನ್ನು ಪ್ರತಿನಿಧಿಸುವ ಹಿರಿಯ ಧರ್ಮಗುರುಗಳೊಂದಿಗಿನ ಸಭೆಯಲ್ಲಿ ಮಾತನಾಡಿದ ಅವರು, ಪಾಕಿಸ್ತಾನವು ಉಗ್ರವಾದವನ್ನು ಸೋಲಿಸಲು ದೃಢನಿಶ್ಚಯ ಮಾಡಿದೆ ಎಂದು ಹೇಳಿದ್ದಾರೆ.

ಪಾಕಿಸ್ತಾನ ಭಯೋತ್ಪಾದನೆಯನ್ನು ಸೋಲಿಸಲು ದೃಢನಿಶ್ಚಯ ಹೊಂದಿದೆ. ನಮ್ಮ ಜನರ ಬೆಂಬಲದೊಂದಿಗೆ ಉಗ್ರವಾದದ ಬೆದರಿಕೆಯನ್ನು ಗಂಟುಮೂಟೆ ಕಟ್ಟಿ ಹಿಂದೂ ಮಹಾಸಾಗರಕ್ಕೆ ಎಸೆಯುತ್ತೇವೆ. ಉಗ್ರಗಾಮಿಗಳಿಗೆ ಪಾಕಿಸ್ತಾನದ ಶತ್ರುಗಳು ಬೆಂಬಲ ನೀಡುತ್ತಿದ್ದಾರೆ ಎಂದು ಶೆಹಬಾಜ್ ಷರೀಫ್ ಅವರು ಪೈಗಾಮ್-ಎ-ಅಮನ್ ಸಮಿತಿ ಸಭೆಯನ್ನುದ್ದೇಶಿಸಿ ಹೇಳಿದರು. ಭಯೋತ್ಪಾದನೆಯಿಂದಾಗಿ 100,000 ಕ್ಕೂ ಹೆಚ್ಚು ಪಾಕಿಸ್ತಾನಿಗಳು ಸಾವನ್ನಪ್ಪಿದ್ದಾರೆ ಎಂದು ಹೇಳಿದ ಪ್ರಧಾನಿ ಶೆಹಬಾಜ್ ಷರೀಫ್, ಅಂತಾರಾಷ್ಟ್ರೀಯ ಸಮುದಾಯವು ಉಗ್ರವಾದ ವಿರುದ್ಧದ ಹೋರಾಟದಲ್ಲಿ ಪಾಕಿಸ್ತಾನ ಮಾಡಿದ ಅಪಾರ ತ್ಯಾಗಗಳನ್ನು ಗುರುತಿಸಬೇಕು ಎಂದು ಮನವಿ ಮಾಡಿದರು.

**ಭಾರತದ ವಿರುದ್ಧ ನಿರಂತರ ಜಿಹಾದ್**

**ಶೆಹಬಾಜ್ ಷರೀಫ್‌ಉಲ್ಲೇಖಿಸುತ್ತಿರುವ ಭಯೋತ್ಪಾದನೆಯು ಪಾಕಿಸ್ತಾನದಿಂದ ಸ್ವಾತಂತ್ರ್ಯ ಪಡೆಯಲು ಹೋರಾಡುತ್ತಿರುವ ಬಲೂಚಿಸ್ತಾನದ ಸಶಸ್ತ್ರ ಪಡೆಗಳಿಗೆ ಸಂಬಂಧಿಸಿದ್ದಾಗಿದೆಯೇ ಹೊರತು, ಭಾರತದ ವಿರುದ್ಧ ನಿರಂತರವೂ ಜಿಹಾದ್ ಯುದ್ಧದಲ್ಲಿ ತೊಡಗಿರುವ ಭಯೋತ್ಪಾದಕ ಸಂಘಟನೆಗಳ ಬಗ್ಗೆ ಅಲ್ಲ ಎಂಬುದು ಇಲ್ಲಿ ಉಲ್ಲೇಖನೀಯ. ಇದೇ ಕಾರಣಕ್ಕೆ ಇತ್ತೀಚಿಗೆ ಭಾರತದ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರು, ನಾವು ಕೆಟ್ಟ ನೆರೆಹೊರೆಯನ್ನು ಹೊಂದಿದ್ದೇವೆ.**

ಆರಂಭದಿಂದಲೂ ಭಯೋತ್ಪಾದನೆ ಬಗ್ಗೆ ಪಾಕಿಸ್ತಾನ ದ್ವಂದ್ವ ನಿಲುವು ಪ್ರದರ್ಶಿಸುತ್ತಲೇ ಇದ್ದು, ಅದು ತನ್ನ ವಿರುದ್ಧದ ಸಶಸ್ತ್ರ ಹೋರಾಟಗಳನ್ನು ಮಾತ್ರ ಭಯೋತ್ಪಾದನೆ ಎಂದು ಪರಿಗಣಿಸುತ್ತದೆ. ಶೆಹಬಾಜ್ ಷರೀಫ್ ಕೂಡ ಇದೇ ಉಗ್ರವಾದವನ್ನು ಹೆಡೆಮುರಿ ಕಟ್ಟಿ ಹಿಂದೂ ಮಹಾಸಾಗರಕ್ಕೆ ಎಸೆಯುವ ಬಗ್ಗೆ ಮಾತನಾಡುತ್ತಿದ್ದಾರೆ.

ಭಾರತದೊಂದಿಗೆ ನಾಲ್ಕು ದಿನಗಳ ಸಂಘರ್ಷದ ಸಮಯದಲ್ಲಿ ಪಾಕಿಸ್ತಾನ ತನ್ನ ಶಕ್ತಿಯನ್ನು ಪ್ರದರ್ಶಿಸಿದೆ ಎಂದು ಪ್ರತಿಪಾದಿಸಿರುವ ಶೆಹಬಾಜ್ ಷರೀಫ್, ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆಯಲ್ಲಿ ಪಾಕಿಸ್ತಾನ ಸೇನೆಯ ಗೆಲುವು ಸಾಧಿಸಿದೆ ಎಂಬ ತಮ್ಮ ಸುಳ್ಳು ಪ್ರತಿಪಾದನೆಯನ್ನು ಪುನರುಚ್ಚರಿಸಿದ್ದಾರೆ.

ಪಾಕಿಸ್ತಾನವು ಟ್ರಿಲಿಯನ್‌ಗಟ್ಟಲೆ ಡಾಲರ್ ಗಳಷ್ಟು ಮೌಲ್ಯದ ಅಪಾರ ನೈಸರ್ಗಿಕ ಸಂಪನ್ಮೂಲಗಳಿಂದ ಆಶೀರ್ವದಿಸಲ್ಪಟ್ಟಿದೆ. ಇವುಗಳನ್ನು ಪರಿಣಾಮಕಾರಿಯಾಗಿ ಅನ್ವೇಷಿಸಿದರೆ, ಬಡತನ ಮತ್ತು ನಿರುದ್ಯೋಗದಂತಹ ಸವಾಲುಗಳನ್ನು ನಿವಾರಿಸಬಹುದು.

ನಾವು ಗುಪ್ತ ನಿಧಿಗಳನ್ನು ಬಳಸಿದರೆ, ನಮ್ಮ ಎಲ್ಲಾ ಸಮಸ್ಯೆಗಳು ಕೊನೆಗೊಳ್ಳುತ್ತವೆ ಎಂದು ಶೆಹಬಾಜ್ ಷರೀಫ್ ಸಭೆಯಲ್ಲಿ ಹೇಳಿದರು. ದೇಶದಲ್ಲಿ ಉಗ್ರವಾದ, ದ್ವೇಷ ಭಾಷಣ, ಭಯೋತ್ಪಾದನೆ ಮತ್ತು ಪಂಥೀಯತೆಯನ್ನು ಎದುರಿಸಲು ಧರ್ಮಗುರುಗಳನ್ನು ಒಳಗೊಂಡ ಸಮಿತಿಯನ್ನು ಕಳೆದ ವರ್ಷ ಸ್ಥಾಪಿಸಲಾಯಿತು. ಇದು ತೆಹ್ರೀಕ್-ಎ-ತಾಲಿಬಾನ್ ಪಾಕಿಸ್ತಾನ ಮತ್ತು ಅಫ್ಘಾನ್ ತಾಲಿಬಾನ್ ಸಂಘಟನೆಗಳನ್ನು ಬಲವಾಗಿ ಖಂಡಿಸಿದೆ. ಯಾವುದೇ ಸಂದರ್ಭಗಳಲ್ಲಿ ಭಯೋತ್ಪಾದನೆಗೆ ಯಾವುದೇ ಸಮರ್ಥನೆ ಇಲ್ಲ ಎಂದು ಈ ಸಮಿತಿ ಒತ್ತಿ ಹೇಳಿದೆ.

- ಉಗ್ರವಾದ ಗಂಟುಮೂಟೆ ಕಟ್ಟಿ ಹಿಂದೂ ಮಹಾಸಾಗರಕ್ಕೆ ಎಸೆಯುತ್ತೇವೆ
- ಭಯೋತ್ಪಾದನೆಯ ಹೆಡೆಮುರಿ ಕಟ್ಟಿ ಹಿಂದೂ ಮಹಾಸಾಗರಕ್ಕೆ ಎಸೆಯುತ್ತಾರಂತೆ ಷರೀಫ್.
- ಪೈಗಾಮ್-ಎ-ಅಮನ್ ಸಭೆಯಲ್ಲಿ ಶಾಂತಿದೂತನಂತೆ ಪೋಸ್ ಕೊಟ್ಟ ಪಾಕಿಸ್ತಾನ ಪ್ರಧಾನಿ.


ಉಗ್ರವಾದ ಮತ್ತು ಭಯೋತ್ಪಾದನೆಯ ವಿರುದ್ಧ ರಾಷ್ಟ್ರೀಯ ನಿರೂಪಣೆಯನ್ನು ಬಲಪಡಿಸುವಲ್ಲಿ ಸಮಿತಿಯು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಪ್ರಧಾನಿ ಶೆಹಬಾಜ್ ಷರೀಫ್ ಇದೇ ವೇಳೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



## ದೇಶವ್ಯಾಪಿ ಪ್ರತಿಭಟನೆಯಲ್ಲಿ ಸಾವಿಗೀಡಾದವರ ಸಂಖ್ಯೆ 3,000ಕ್ಕೆ ಏರಿಕೆ

**ಟೆಹ್ರಾನ್:** ಇರಾನ್ ತನ್ನ ಇತಿಹಾಸದಲ್ಲೇ ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದೆ. 1979ರ ಇಸ್ಲಾಮಿಕ್ ಕ್ರಾಂತಿಯ ನಂತರ ಕಂಡುಬರದಂತಹ ತೀವ್ರತರವಾದ ಆರ್ಥಿಕ ಕುಸಿತ, ಹಣದುಬ್ಬರ ಮತ್ತು ದೇಶಾದ್ಯಂತ ಭುಗಿಲೆದ್ದಿರುವ ಬೃಹತ್ ಜನವಿರೋಧಿ ಪ್ರತಿಭಟನೆಗಳು ಇಡೀ ರಾಷ್ಟ್ರವನ್ನು ಅಸ್ಥಿರಗೊಳಿಸಿವೆ. ಇರಾನ್‌ನಲ್ಲಿ ಆರ್ಥಿಕ ಸಂಕಷ್ಟದ ಹಿನ್ನೆಲೆಯಲ್ಲಿ ಆರಂಭವಾದ ದೇಶಾದ್ಯಂತದ ಪ್ರತಿಭಟನೆಗಳು ಈಗ ರಕ್ತಪಾತಕ್ಕೆ ತಿರುಗಿದ್ದು, ಸಾವಿನ ಸಂಖ್ಯೆ 3,000 ದಾಟಿದೆ ಎಂದು ಮಾನವ ಹಕ್ಕುಗಳ ಕಾರ್ಯಕರ್ತರು ಶನಿವಾರ ತಿಳಿಸಿದ್ದಾರೆ. ಇದು ಕಳೆದ ಹಲವು ದಶಕಗಳಲ್ಲಿ ಇರಾನ್ ಕಂಡ ಅತ್ಯಂತ ಭೀಕರ ಆಂತರಿಕ ಹಿಂಸಾಚಾರ ಎಂದು ವರದಿಯಾಗಿದೆ.

ಅಮೆರಿಕ ಮೂಲದ ಹ್ಯೂಮನ್ ರೈಟ್ಸ್ ಆಕ್ಟಿವಿಸ್ಟ್ಸ್ ನ್ಯೂಸ್ ಏಜೆನ್ಸಿ ಮಾಹಿತಿ ಪ್ರಕಾರ, ಈವರೆಗೆ 2,885 ಪ್ರತಿಭಟನಾಕಾರರು ಸೇರಿದಂತೆ ಒಟ್ಟು 3,090 ಜನರು ಸಾವನ್ನಪ್ಪಿದ್ದಾರೆ. ಸತತ ಎಂಟು ದಿನಗಳ ಸಂಪೂರ್ಣ ಬ್ಲ್ಯಾಕ್‌ಔಟ್ ನಂತರ ದೇಶದಲ್ಲಿ ಇಂಟರ್ನೆಟ್ ಸಂಪರ್ಕವು ಅಲ್ಪ ಪ್ರಮಾಣದಲ್ಲಿ (ಸುಮಾರು 2%) ಚೇತರಿಸಿಕೊಳ್ಳುತ್ತಿದೆ ಎಂದು ನೆಟ್‌ಬ್ಲಾಕ್ಸ್ ವರದಿ ಮಾಡಿದೆ. ಸುಮಾರು 800 ಪ್ರತಿಭಟನಾಕಾರರಿಗೆ ನೀಡಲಾಗಿದ್ದ ಮರಣದಂಡನೆ ಶಿಕ್ಷೆಯನ್ನು ಇರಾನ್ ಆಡಳಿತ ಹಿಂಪಡೆದಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.



- ಇರಾನ್‌ನ ಆಂತರಿಕ ಸಂಘರ್ಷದಲ್ಲಿ 2,885 ಪ್ರತಿಭಟನಾಕಾರರು ಸೇರಿದಂತೆ ಒಟ್ಟು 3,090 ಜನರು ಪ್ರಾಣ ಕಳೆದುಕೊಂಡಿರುವ ಬಗ್ಗೆ ವರದಿ
- ನೇರವಾಗಿ ಇರಾನ್‌ನ ಸರ್ವೋಚ್ಚ ನಾಯಕ ಅಲಿ ಖಮೇನಿ ವಿರುದ್ಧದ ಆಕ್ರೋಶದ ಅಲೆಯಾಗಿ ಮಾರ್ಪಟ್ಟಿರುವ ಪ್ರತಿಭಟನೆ
- 800 ಮಂದಿಯ ಮರಣದಂಡನೆಯನ್ನು ಇರಾನ್ ರದ್ದುಗೊಳಿಸಿದ್ದು, ಪರಿಸ್ಥಿತಿಯನ್ನು ಹತ್ತಿರದಿಂದ ಗಮನಿಸುರುವ ಅಮೆರಿಕ ಅಧ್ಯಕ್ಷ ಟ್ರಂಪ್

**ಪ್ರತಿಭಟನೆಯ ಹಿನ್ನೆಲೆ ಏನು?:** ಇರಾನ್‌ನ ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿ, ಏರುತ್ತಿರುವ ಬೆಲೆಗಳು ಮತ್ತು ಉದ್ಯೋಗದ ಅಭದ್ರತೆಯ ವಿರುದ್ಧ ಡಿಸೆಂಬರ್ 28 ರಂದು ಪ್ರತಿಭಟನೆಗಳು ಪ್ರಾರಂಭವಾಗಿದ್ದವು. ಟೆಹ್ರಾನ್, ಮಶ್ಹಾದ್ ಮತ್ತು ಇಸ್ಫಹಾನ್‌ನಂತಹ ಪ್ರಮುಖ ನಗರಗಳಲ್ಲಿ ವ್ಯಾಪಾರಿಗಳು, ವಿದ್ಯಾರ್ಥಿಗಳು ಮತ್ತು ಸಾಮಾನ್ಯ ಜನರು ಬೀದಿಗಿಳಿದಿದ್ದರು.

ಈ ಆರ್ಥಿಕ ಅಸಮಾಧಾನವು ಶೀಘ್ರದಲ್ಲೇ ಆಡಳಿತ ವಿರೋಧಿ ಅಲೆಯಾಗಿ ಬದಲಾಯಿತು. ಪ್ರತಿಭಟನಾಕಾರರು 86 ವರ್ಷದ ಸರ್ವೋಚ್ಚ ನಾಯಕ ಖಮೇನಿ ಅವರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಅವರ ಪತನಕ್ಕೆ ಒತ್ತಾಯಿಸುತ್ತಿದ್ದಾರೆ ಎಂದು ರಾಯಿಟರ್ಸ್ ವರದಿ ಮಾಡಿದೆ.

## ಅಮೆರಿಕದ ವಸ್ತುಗಳಿಗೆ 30% ತೆರಿಗೆ ಹಾಕಿದ ಭಾರತ

**ವಾಷಿಂಗ್ಟನ್:** ಭಾರತದ ಮೇಲೆ ಅಮೆರಿಕ ಸುಂಕ ಸಮರ ಹಾಕಿದ ಬೆನ್ನಲ್ಲೇ ಭಾರತವೂ ಅಮೆರಿಕದಿಂದ ಆಮದಾಗುವ ವಸ್ತುಗಳ ಮೇಲೆ ಸುಂಕ ವಿಧಿಸಿರುವ ವಿಚಾರ ತಡವಾಗಿ ಬೆಳಕಿಗೆ ಬಂದಿದೆ. ಭಾರತದ ಕೆಲ ವಸ್ತುಗಳಿಗೆ ಅಮೆರಿಕ ಈಗ 50% ಸುಂಕ ವಿಧಿಸಿದೆ. ಆದರೆ ಭಾರತವೂ ಅಮೆರಿಕದಿಂದ ಆಮದಾಗುವ ದ್ವಿದಳ ಧಾನ್ಯಗಳ ಮೇಲೆ 30% ಸುಂಕ ಹೇರಿದೆ.

ಇಬ್ಬರು ಅಮೇರಿಕನ್ ಸೆನೆಟರ್‌ಗಳು ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಪತ್ರ ಬರೆದು, ಅಮೆರಿಕದ ದ್ವಿದಳ ಧಾನ್ಯಗಳ ಮೇಲೆ ಭಾರತ ವಿಧಿಸಿರುವ 30% ಆಮದು ಸುಂಕವನ್ನು ತೆಗೆದುಹಾಕುವಂತೆ ಒತ್ತಾಯಿಸಿದ್ದಾರೆ. ಅಷ್ಟೇ ಅಲ್ಲದೇ ಇದು ಅನ್ಯಾಯ ಎಂದು ಕರೆದಿದ್ದಾರೆ.

ಉತ್ತರ ಡಕೋಟಾದ ಕೆವಿನ್ ಕ್ರೇಮರ್ ಮತ್ತು ಮಾಂಟಾನಾದ ಸ್ಟೀವ್ ಡೈನ್ಸ್ ಅವರು ಜ.16 ರಂದು ಬರೆದ ಪತ್ರದಲ್ಲಿ, ಕಳೆದ ವರ್ಷ ಅಕ್ಟೋಬರ್ 30 ರಂದು ಭಾರತವು ಅಮೆರಿಕದ ಹಳದಿ ಬಟಾಣಿಗಳ ಮೇಲೆ 30% ಸುಂಕವನ್ನು ವಿಧಿಸಿದೆ. ಇದು ನವೆಂಬರ್ 1 ರಿಂದ ಜಾರಿಗೆ ಬಂದಿದೆ. ಸರ್ಕಾರ ಇದರ ಬಗ್ಗೆ ಯಾವುದೇ ಪ್ರಚಾರ ಮಾಡದ ಕಾರಣ ಇದು ಅಷ್ಟೊಂದು ಸುದ್ದಿಯಾಗಲಿಲ್ಲ ಎಂದು ಉಲ್ಲೇಖಿಸಿದ್ದಾರೆ. ಭಾರತದ ಈ ನಿರ್ಧಾರದಿಂದ ಅಮೆರಿಕದ



ದ್ವಿದಳ ಧಾನ್ಯ ಬೆಳೆ ಉತ್ಪಾದಕರಿಗೆ ಸಮಸ್ಯೆಯಾಗಿದೆ. ತಮ್ಮ ಉತ್ತಮ ಗುಣಮಟ್ಟದ ಉತ್ಪನ್ನವನ್ನು ಭಾರತಕ್ಕೆ ರಫ್ತು ಮಾಡುವಾಗ ಗಮನಾರ್ಹ ಸ್ಪರ್ಧಾತ್ಮಕ ಅನಾನುಕೂಲತೆಯನ್ನು ಎದುರಿಸುತ್ತಿದ್ದಾರೆ. ಕಡಲೆ, ಒಣಗಿದ ಬೀನ್ಸ್, ಬಟಾಣಿಗಳನ್ನು ಭಾರತೀಯರು ಹೆಚ್ಚಾಗಿ ಬಳಕೆ ಮಾಡುತ್ತಾರೆ. ಅಮೆರಿಕದ ದ್ವಿದಳ ಧಾನ್ಯಗಳ ಭಾರತ ಮೇಲೆ ಗಣನೀಯ ಸುಂಕವನ್ನು ವಿಧಿಸಿದೆ ಎಂದು ದೂರಿದ್ದಾರೆ.

ಅಮೆರಿಕದ ಉತ್ತರ ಡಕೋಟಾ ಮತ್ತು ಮೊಂಟಾನಾ ರಾಜ್ಯದಲ್ಲಿ ಬಟಾಣಿ ಮತ್ತು ದ್ವಿದಳ ಧಾನ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಮಾಡಲಾಗುತ್ತದೆ. ಭಾರತವು ವಿಶ್ವದ ಅತಿದೊಡ್ಡ ದ್ವಿದಳ ಧಾನ್ಯಗಳ ಗ್ರಾಹಕವಾಗಿದ್ದು, ಜಾಗತಿಕವಾಗಿ ಬಳಕೆಯ ಪೈಕಿ ಸುಮಾರು 27% ರಷ್ಟು ಭಾರತದಲ್ಲೇ ಬಳಕೆಯಾಗುತ್ತದೆ.




## ಗಾಜಾ ಪುನರಾಭಿವೃದ್ಧಿ ಶಾಂತಿ ಮಂಡಳಿಯಲ್ಲಿ ಅಜಯ್ ಬಂಗಾ

**ನ್ಯೂಯಾರ್ಕ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸಂಘರ್ಷವನ್ನು ಕೊನೆಗೊಳಿಸುವ ಸಮಗ್ರ ಯೋಜನೆಯಡಿಯಲ್ಲಿ ಗಾಜಾ ಪುನರಾಭಿವೃದ್ಧಿಗಾಗಿ ರಚಿಸಲಾಗಿರುವ ಶಾಂತಿ ಮಂಡಳಿಗೆ ಹೆಸರಿಸಲಾದ ನಾಯಕರಲ್ಲಿ ವಿಶ್ವ ಬ್ಯಾಂಕ್ ಗುಂಪಿನ ಭಾರತೀಯ-ಅಮೆರಿಕನ್ ಅಧ್ಯಕ್ಷ ಅಜಯ್ ಬಂಗಾ ಮತ್ತು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಸೇರಿದ್ದಾರೆ. ಶ್ವೇತಭವನವು ಶಾಂತಿ ಮಂಡಳಿಯ ಸ್ಥಾಪಕ ಕಾರ್ಯನಿರ್ವಾಹಕ ಮಂಡಳಿಗೆ ನೇಮಕಗೊಂಡ ಸದಸ್ಯರ ಪಟ್ಟಿಯನ್ನು ಬಿಡುಗಡೆ ಮಾಡಿದೆ.ಇದು ರಾಜತಾಂತ್ರಿಕತೆ, ಅಭಿವೃದ್ಧಿ, ಮೂಲಸೌಕರ್ಯ ಮತ್ತು ಆರ್ಥಿಕ ಕಾರ್ಯತಂತ್ರದಲ್ಲಿ ಅನುಭವ ಹೊಂದಿರುವ ನಾಯಕರನ್ನು ಒಳಗೊಂಡಿದೆ ಎಂದು ಅದು ಹೇಳಿದೆ.

ಬಂಗಾ ಮತ್ತು ರೂಬಿಯೊ ಜೊತೆಗೆ, ಕಾರ್ಯನಿರ್ವಾಹಕ ಮಂಡಳಿಯಲ್ಲಿ ಮಧ್ಯಪ್ರಾಚ್ಯಕ್ಕೆ ಅಮೆರಿಕದ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್, ಟ್ರಂಪ್ ಅವರ ಅಳಿಯ ಜೇರೆಡ್ ಕುಶ್ನರ್, ಯುಕೆಯ ಮಾಜಿ ಪ್ರಧಾನಿ ಟೋನಿ ಬ್ಲೇರ್, ಖಾಸಗಿ ಇಕ್ವಿಟಿ ಸಂಸ್ಥೆ ಅಪೊಲೊ ಗ್ಲೋಬಲ್ ಮ್ಯಾನೇಜ್ಮೆಂಟ್ ಸಿಇಒ ಮಾರ್ಕ್ ರೋವನ್ ಮತ್ತು ಅಮೆರಿಕದ ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರ ರಾಬರ್ಟ್ ಗೇಬ್ರಿಯಲ್ ಸೇರಿದ್ದಾರೆ. ಪ್ರತಿಯೊಬ್ಬ ಕಾರ್ಯಕಾರಿ ಮಂಡಳಿಯ ಸದಸ್ಯರು ಗಾಜಾದ ಸ್ಥಿರೀಕರಣ



ಮತ್ತು ದೀರ್ಘಕಾಲೀನ ಯಶಸ್ಸಿಗೆ ನಿರ್ಣಾಯಕವಾದ ನಿರ್ದಿಷ್ಟ ಪೋರ್ಟ್‌ಫೋಲಿಯೊವನ್ನು ಮೇಲ್ವಿಚಾರಣೆ ಮಾಡುತ್ತಾರೆ, ಇದರಲ್ಲಿ ಆಡಳಿತ ಸಾಮರ್ಥ್ಯ-ವರ್ಧನೆ, ಪ್ರಾದೇಶಿಕ ಸಂಬಂಧಗಳು, ಪುನರ್ನಿರ್ಮಾಣ, ಹೂಡಿಕೆ ಆಕರ್ಷಣೆ, ದೊಡ್ಡ ಪ್ರಮಾಣದ ಹಣಕಾಸು ಮತ್ತು ಬಂಡವಾಳ ಕ್ರೋಢೀಕರಣ ಸೇರಿವೆ, ಆದರೆ ಇವುಗಳಿಗೆ ಸೀಮಿತವಾಗಿಲ್ಲ ಎಂದು ಶ್ವೇತಭವನ ಹೇಳಿದೆ.

ಮುಂದಿನ ವಾರಗಳಲ್ಲಿ ಹೆಚ್ಚುವರಿ ಕಾರ್ಯಕಾರಿ ಮಂಡಳಿ ಮತ್ತು ಗಾಜಾ ಕಾರ್ಯಕಾರಿ ಮಂಡಳಿ ಸದಸ್ಯರನ್ನು ಘೋಷಿಸಲಾಗುವುದು ಎಂದು ಅದು ಹೇಳಿದೆ. ಭದ್ರತೆ ಮತ್ತು ಬಾಳಿಕೆ ಬರುವ ಭಯೋತ್ಪಾದನಾ-ಮುಕ್ತ ವಾತಾವರಣವನ್ನು ಸ್ಥಾಪಿಸಲು, ಯುಎಸ್ ವಿಶೇಷ ಕಾರ್ಯಾಚರಣೆ ಕಮಾಂಡ್ ಸೆಂಟ್ರಲ್‌ನ ಕಮಾಂಡರ್ ಮೇಜರ್ ಜನರಲ್ ಜಾಸ್ಪರ್ ಜೆಫರ್ಸ್ ಅವರನ್ನು ಅಂತರರಾಷ್ಟ್ರೀಯ ಸ್ಥಿರೀಕರಣ ಪಡೆ ಕಮಾಂಡರ್ ಆಗಿ ನೇಮಿಸಲಾಗಿದೆ.

# ಬಾಂಗ್ಲಾದೇಶದಲ್ಲಿ ಹಿಂದುಗಳ ಮೇಲೆ ನಿಲ್ಲದ ದಾಳಿ

### ಬಹೋರ್ ಗ್ರಾಮದಲ್ಲಿರುವ ಹಿಂದೂ ಶಾಲಾ ಶಿಕ್ಷಕರೊಬ್ಬರ ಮನೆಗೆ ಉದ್ರಿಕ್ತ ಗುಂಪೊಂದು ಬೆಂಕಿ ಹಚ್ಚಿದೆ

**ಢಾಕಾ:** ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದುಗಳ ಮೇಲಿನ ಹಿಂಸಾಚಾರ ಮುಂದುವರಿದಿದೆ. ಇತ್ತೀಚಿನ ಘಟನೆಯಲ್ಲಿ, ಸಿಲ್ಹೆಟ್ ಜಿಲ್ಲೆಯ ಬಹೋರ್ ಗ್ರಾಮದಲ್ಲಿರುವ ಹಿಂದೂ ಶಾಲಾ ಶಿಕ್ಷಕರೊಬ್ಬರ ಮನೆಗೆ ಉದ್ರಿಕ್ತ ಗುಂಪೊಂದು ಬೆಂಕಿ ಹಚ್ಚಿದೆ. ಬಹೋರ್ ಗ್ರಾಮದ ಜನಪ್ರಿಯ ಶಾಲಾ ಶಿಕ್ಷಕ ಬೀರೇಂದ್ರ ಕುಮಾರ್ ಡೇ ಅವರ ಮನೆಯ ಮೇಲೆ ನಡೆದ ಈ ದಾಳಿಯು ಅವರ ಕುಟುಂಬ ಸದಸ್ಯರಲ್ಲಿ ಹಾಗೂ ಸುತ್ತಮುತ್ತಲ ನಿವಾಸಿಗಳಲ್ಲಿ ತೀವ್ರ ಭಯ ಮತ್ತು ಆತಂಕವನ್ನು ಸೃಷ್ಟಿಸಿದೆ.

- ಸಿಲ್ಹೆಟ್ ಜಿಲ್ಲೆಯ ಶಿಕ್ಷಕ ಬೀರೇಂದ್ರ ಕುಮಾರ್ ಡೇ ಅವರ ಮನೆಗೆ ದುಷ್ಕರ್ಮಿಗಳಿಂದ ಬೆಂಕಿ, ಕುಟುಂಬಸ್ಥರು ಸ್ವಲ್ಪದರಲ್ಲಿ ಪಾರು
- ಕಳೆದ 24 ದಿನಗಳಲ್ಲಿ ಹಿಂದೂಗಳ ಮೇಲೆ ನಡೆದ 9ನೇ ದಾಳಿ ಇದಾಗಿದ್ದು, ಡಿಸೆಂಬರ್ 18ರ ನಂತರ ಕನಿಷ್ಠ 8 ಮಂದಿ ಹಿಂದೂಗಳು ಸಾವು
- ಮುಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರ ಅಲ್ಪಸಂಖ್ಯಾತರನ್ನು ರಕ್ಷಿಸುವಲ್ಲಿ ವಿಫಲ ಎಂದು ಮಾನವ ಹಕ್ಕುಗಳ ಸಂಘಟನೆ ಆಕ್ರೋಶ

ಬಹೋರ್ ಗ್ರಾಮದ ನಿವಾಸಿ ಮತ್ತು ಸ್ಥಳೀಯವಾಗಿ 'ಝುನು ಸರ್' ಎಂದೇ ಜನಪ್ರಿಯರಾದ ಶಿಕ್ಷಕ ಬೀರೇಂದ್ರ ಕುಮಾರ್ ಡೇ ಅವರ ಮನೆಯ ಮೇಲೆ ದುಷ್ಕರ್ಮಿಗಳು ದಾಳಿ ನಡೆಸಿದ್ದಾರೆ. ಘಟನೆಯ ಸಮಯದಲ್ಲಿ ಬೀರೇಂದ್ರ ಕುಮಾರ್ ಮತ್ತು ಅವರ ಕುಟುಂಬದ ವೃದ್ಧ ಸದಸ್ಯರು ಮನೆಯ ಒಳಗಡೆಯೇ ಇದ್ದರು. ಈ ಭೀಕರ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದ್ದು, ಬೆಂಕಿಯ ಕೆನ್ನಾಲಿಗೆಯು ಇಡೀ ಮನೆಯನ್ನು ಆವರಿಸಿಕೊಳ್ಳುತ್ತಿರುವಾಗ ಕುಟುಂಬದವರು ಪ್ರಾಣ ಉಳಿಸಿಕೊಳ್ಳಲು ತತ್ತರಿಸುತ್ತಿರುವ ದೃಶ್ಯಗಳು ಮನಕಲಕುವಂತಿವೆ. ಸ್ಥಳೀಯರ ಸಮಯೋಚಿತ ಸಹಾಯದಿಂದ ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



**ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕ ಖಂಡನೆ:** ಬಾಂಗ್ಲಾದೇಶದ ಈ ಪರಿಸ್ಥಿತಿಯು ಜಾಗತಿಕ ಮಟ್ಟದಲ್ಲಿ ತೀವ್ರ ಆತಂಕಕ್ಕೆ ಕಾರಣವಾಗಿದೆ. ಬ್ರಿಟಿಷ್ ಸಂಸದ ಬಾಬ್ ಬ್ಲ್ಯಾಕ್ ಮ್ಯಾನ್ ಈ ವಿಷಯವನ್ನು ಪ್ರಸ್ತಾಪಿಸಿ, ಬಾಂಗ್ಲಾದೇಶದ ಸ್ಥಿತಿ ಅತ್ಯಂತ ಭೀಕರವಾಗಿದೆ ಎಂದು ಹೇಳಿದ್ದಾರೆ. ಹಿಂದೂಗಳನ್ನು ಹತ್ಯೆ ಮಾಡಲಾಗುತ್ತಿದೆ ಮತ್ತು ಅವರ ಧಾರ್ಮಿಕ ಸ್ಥಳಗಳನ್ನು ಸುಡಲಾಗುತ್ತಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ. ಮುಂಬರುವ ಚುನಾವಣೆಗಳ ಪಾರದರ್ಶಕತೆಯ ಬಗ್ಗೆಯೂ ಅವರು ಪ್ರಶ್ನೆ ಎತ್ತಿದ್ದಾರೆ. ಜನವರಿ 9 ರಂದು ಭಾರತ ಸರ್ಕಾರವು ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ಮರುಕಳಿಸುತ್ತಿರುವ ದಾಳಿಗಳ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದೆ. ಅಲ್ಲಿನ ಸರ್ಕಾರವು ಈ ಕೋಮು ಹಿಂಸಾಚಾರವನ್ನು ಕಟ್ಟುನಿಟ್ಟಾಗಿ ಹತ್ತಿಕ್ಕಬೇಕು ಎಂದು ಭಾರತ ಆಶಿಸಿದೆ.

**ಪ್ರಚಲಿತ ಸ್ಥಿತಿ ಹೇಗಿದೆ?:** ಮುಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರದ ಅವಧಿಯಲ್ಲಿ ಅಲ್ಪಸಂಖ್ಯಾತರ ರಕ್ಷಣೆ ವಿಫಲವಾಗುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಇದು ವಿಶ್ವಾದ್ಯಂತ ಮಾನವ ಹಕ್ಕುಗಳ ಸಂಘಟನೆಗಳ ಆಕ್ರೋಶಕ್ಕೆ ಕಾರಣವಾಗಿದೆ.

**ಹಿಂಸಾಚಾರದ ಸರಣಿ**

**ಕಳೆದ 24 ದಿನಗಳಲ್ಲಿ ಹಿಂದೂ ಸಮುದಾಯದ ಮೇಲೆ ನಡೆದ 9ನೇ ಪ್ರಮುಖ ದಾಳಿ ಇದಾಗಿದೆ. ಡಿಸೆಂಬರ್ 18 ರಂದು ನಡೆದ ಗಾರ್ಮೆಂಟ್ ಕಾರ್ಖಾನೆ ಕಾರ್ಮಿಕ ದೀಪು ಚಂದ್ರ ದಾಸ್ ಅವರ ಭೀಕರ ಹತ್ಯೆಯ ನಂತರ, ಹಿಂಸಾಚಾರದ ಅಲೆ ಎದ್ದಿದೆ. ಇತ್ತೀಚಿನ ಘಟನೆಗಳಲ್ಲಿ ಕನಿಷ್ಠ 8 ಮಂದಿ ಹಿಂದೂಗಳು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಹಕ್ಕುಗಳ ಸಂಘಟನೆಗಳ ಪ್ರಕಾರ, ಕನಿಷ್ಠ 51 ಹಿಂಸಾಚಾರದ ಘಟನೆಗಳು ದಾಖಲಾಗಿದ್ದು, ಹಿಂದೂಗಳ ಮನೆಗಳು, ಭೂಮಿ ಮತ್ತು ದೇವಾಲಯಗಳನ್ನು ಗುರಿಯಾಗಿಸಿಕೊಂಡು ದಾಳಿ ಅಥವಾ ಲೂಟಿ ಮಾಡಲಾಗುತ್ತಿದೆ.**

## ಮಿನಿ ನ್ಯೂಸ್

### ತಮಿಳುನಾಡು ಮಾಜಿ ಸಿಎಂ ಎಂಜಿಆರ್‌ಗೆ ಪ್ರಧಾನಿ ಮೋದಿ ನಮನ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರು ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಂ.ಜಿ.ರಾಮಚಂದ್ರನ್ (ಎಂಜಿಆರ್)ಗೆ ಗೌರವ ಸಲ್ಲಿಸಿದ್ದಾರೆ. ತಮಿಳುನಾಡಿನ ಖ್ಯಾತ ನಟ ಮತ್ತು ಎಐಎಡಿಎಂಕೆ ಸಂಸ್ಥಾಪಕ ಎಂ ಜಿ ರಾಮಚಂದ್ರನ್ ಅವರ ಜನ್ಮ ವಾರ್ಷಿಕೋತ್ಸವದಂದು ಅವರಿಗೆ ಮೋದಿ ಗೌರವ ಸಲ್ಲಿಸಿದರು. ಅಸಾಧಾರಣ ವ್ಯಕ್ತಿ ಎಂಜಿಆರ್ ಅವರ ಜಯಂತಿಯಂದು ಅವರಿಗೆ ಗೌರವ ಸಲ್ಲಿಸಲಾಗುತ್ತಿದೆ. ತಮಿಳುನಾಡಿನ ಪ್ರಗತಿಗೆ ಅವರ ಕೊಡುಗೆ ಅತ್ಯುತ್ತಮವಾಗಿದೆ ಎಂದು ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ತಮಿಳು ಸಂಸ್ಕೃತಿಯನ್ನು ಜನಪ್ರಿಯಗೊಳಿಸುವಲ್ಲಿ ಅವರ ಪಾತ್ರವೂ ಅಷ್ಟೇ ಗಮನಾರ್ಹವಾಗಿದೆ. ನಮ್ಮ ಸಮಾಜಕ್ಕಾಗಿ ಅವರ ದೃಷ್ಟಿಕೋನವನ್ನು ಸಾಕಾರಗೊಳಿಸಲು ನಾವು ಯಾವಾಗಲೂ ಕೆಲಸ ಮಾಡುತ್ತೇವೆ ಎಂದು ಪ್ರಧಾನಿ ಹೇಳಿದರು.

### ಕಚ್‌ನಲ್ಲಿ 4.1 ತೀವ್ರತೆಯ ಭೂಕಂಪ

ಅಹಮದಾಬಾದ್: ಬೆಳಗಿನ ಜಾವ ಗುಜರಾತ್‌ನ ಕಚ್ ಜಿಲ್ಲೆಯಲ್ಲಿ 4.1 ತೀವ್ರತೆಯ ಭೂಕಂಪ ಸಂಭವಿಸಿದ್ದು, ಸ್ಥಳೀಯರಲ್ಲಿ ಭೀತಿ ಮೂಡಿಸಿದೆ, ಆದರೆ ಯಾವುದೇ ಸಾವುನೋವುಗಳು ವರದಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಖಾವ್ಡಾದಿಂದ ಸುಮಾರು 55 ಕಿ.ಮೀ ಈಶಾನ್ಯ ದೂರದಲ್ಲಿ ಭೂಕಂಪದ ಕೇಂದ್ರಬಿಂದು ಬೆಳಗಿನ ಜಾವ 1.22 ಕ್ಕೆ ದಾಖಲಾಗಿದೆ ಎಂದು ಗಾಂಧಿನಗರ ಮೂಲದ ಭೂಕಂಪನ ಸಂಶೋಧನಾ ಸಂಸ್ಥೆ ತಿಳಿಸಿದೆ.

ಯಾವುದೇ ಸಾವುನೋವು ಅಥವಾ ಆಸ್ತಿಪಾಸ್ತಿಗೆ ಹಾನಿ ವರದಿಯಾಗಿಲ್ಲ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಚ್ ಜಿಲ್ಲೆ ಅತಿ ಹೆಚ್ಚು ಅಪಾಯಕಾರಿ ಭೂಕಂಪ ವಲಯದಲ್ಲಿದೆ ಮತ್ತು ಕಡಿಮೆ ತೀವ್ರತೆಯ ಭೂಕಂಪಗಳು ಅಲ್ಲಿ ನಿಯಮಿತವಾಗಿ ಸಂಭವಿಸುತ್ತವೆ. ಕಚ್‌ನಲ್ಲಿ 2001 ರಲ್ಲಿ ಸಂಭವಿಸಿದ ಭೂಕಂಪವು ಕಳೆದ ಎರಡು ಶತಮಾನಗಳಲ್ಲಿ ಭಾರತದಲ್ಲಿ ಮೂರನೇ ಅತಿದೊಡ್ಡ ಮತ್ತು ಎರಡನೇ ಅತ್ಯಂತ ವಿನಾಶಕಾರಿಯಾಗಿದೆ. ಜನವರಿ 26 ರಂದು 7.6 ತೀವ್ರತೆಯ ಭೂಕಂಪ ವರದಿಯಾಗಿದ್ದು, ಕಚ್ ಜಿಲ್ಲೆಯ ಭಚೌ ಬಳಿ ಇದರ ಕೇಂದ್ರಬಿಂದುವಾಗಿದ್ದು, ಇದರ ಪರಿಣಾಮವಾಗಿ 13,800 ಜನರು ಸಾವನ್ನಪ್ಪಿದರು ಮತ್ತು ದೊಡ್ಡ ಪ್ರಮಾಣದ ವಿನಾಶ ಉಂಟಾಯಿತು.

### ಗೋವಾದಲ್ಲಿ ಇಬ್ಬರು ಪ್ರೇಯಸಿಯರನ್ನು ಕೊಂದ ರಷ್ಯಾ ಪ್ರಜೆ ಅರೆಸ್ಟ್

**ಪಣಜಿ:** ಗೋವಾದಲ್ಲಿ ರಷ್ಯಾ ಪ್ರಜೆಯೊಬ್ಬ ಇಬ್ಬರು ಯುವತಿಯರನ್ನು ಹತ್ಯೆ ಮಾಡಿದ್ದಾನೆ. ಉತ್ತರ ಗೋವಾದ ಅರಾಂಬೋಲ್ ಮತ್ತು ಮೋರ್ಜಿಮ್ ಗ್ರಾಮಗಳಲ್ಲಿ ದೇಶವಾಸಿಗಳಾದ ಎಲೆನಾ ವನೀವಾ ಮತ್ತು ಎಲೆನಾ ಕಸ್ತಾನೋವಾ ಅವರನ್ನು ಕೊಂದ ಆರೋಪದ ಮೇಲೆ ರಷ್ಯಾದ ಪ್ರಜೆ ಅಲೆಕ್ಸಿ ಲಿಯೊನೊವ್ ಎಂಬಾತನನ್ನು ಬಂಧಿಸಲಾಗಿದೆ.

ಜ. 14 ರಂದು ಮೋರ್ಜಿಮ್‌ನಲ್ಲಿರುವ ತನ್ನ ಕೋಣೆಯಲ್ಲಿ ತನ್ನ ಸ್ನೇಹಿತೆ ಎಲೆನಾ ವನೀವಾ (37) ಅವರ ಕುತ್ತಿಗೆಯನ್ನು ಚಾಕುವಿನಿಂದ ಕತ್ತರಿಸಿ ಕೊಂದಿದ್ದಾನೆ ಎಂದು ಮಾಂಡ್ರೆಮ್ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ.ವನೀವಾ ಅವರ ಮನೆ ಮಾಲೀಕ ನೀಡಿದ ದೂರಿನ ಪ್ರಕಾರ, ಈ ಘಟನೆ ರಾತ್ರಿ 11 ಗಂಟೆಯ ನಂತರ ನಡೆದಿದೆ ಎಂದು ಅವರು ಹೇಳಿದರು. ನಂತರ ಆರೋಪಿ ಜನವರಿ 15 ರಂದು ಸಂಜೆ ಎಂಟು ಕಿಲೋಮೀಟರ್ ದೂರದಲ್ಲಿರುವ ಅರಾಂಬೋಲ್ ಗ್ರಾಮಕ್ಕೆ ತನ್ನ ಸ್ನೇಹಿತೆ ಎಲೆನಾ ಕಸ್ತಾನೋವಾ (37) ಅವರನ್ನು ಭೇಟಿ ಮಾಡಲು ಹೋದನು.ಅವಳು ಅವಳನ್ನು ಹಗ್ಗದಂತಹ ವಸ್ತುವಿನಿಂದ ಕಟ್ಟಿ ನಂತರ ಅವಳ ಕತ್ತು ಸೀಳಿದನು ಎಂದು ಮೋರ್ಜಿಮ್ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪೊಲೀಸರ ಪ್ರಕಾರ ಶುಕ್ರವಾರ ಎರಡೂ ಶವಗಳನ್ನು ವಶಪಡಿಸಿಕೊಳ್ಳಲಾಗಿದೆ.ಲಿಯೊನೊವ್ ಅವರನ್ನು ಮಾಂಡ್ರೆಮ್ ಪೊಲೀಸರು ಬಂಧಿಸಿದ್ದಾರೆ ಮತ್ತು ಜೋಡಿ ಕೊಲೆಗಳ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದೆ.

### 14 ವರ್ಷದ ಬಾಲಕಿ ಮೇಲೆ 53 ವರ್ಷದ ವ್ಯಕ್ತಿಯಿಂದ ಆಸಿಡ್ ದಾಳಿ

**ವಯನಾಡ್:** ಕೇರಳದಲ್ಲಿ 14 ವರ್ಷದ ಬಾಲಕಿಯೊಬ್ಬಳ ಮೇಲೆ ಆಸಿಡ್ ದಾಳಿ ನಡೆದಿದೆ. ಕೇರಳದ ವಯನಾಡ್ ಜಿಲ್ಲೆಯಲ್ಲಿ ಬಾಲಕಿಯ ಪಕ್ಕದ ಮನೆ ವ್ಯಕ್ತಿ ಆಸಿಡ್ ದಾಳಿ ನಡೆಸಿರುವುದರಿಂದ ಆಕೆ ತೀವ್ರ ಸುಟ್ಟ ಗಾಯಗಳಿಗೆ ಒಳಗಾಗಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಿಡಿಗೇಡಿಯ ಕುಕೃತ್ಯದಿಂದ ಸುಟ್ಟ ಗಾಯಗಳಿಂದ ನರಳುತ್ತಿರುವ ಬಾಲಕಿಯನ್ನು ಎಂಟನೇ ತರಗತಿ ವಿದ್ಯಾರ್ಥಿನಿ ಮಹಾಲಕ್ಷ್ಮೀ ಎಂದು ಗುರುತಿಸಲಾಗಿದೆ. ಪುಲ್ಪಳ್ಳಿಯ ಮರಕಾವುವಿನ ಪ್ರಿಯದರ್ಶಿ ಉನತಿ ನಿವಾಸಿ ಆರೋಪಿ ರಾಜು ಜೋಸ್ (53) ಎಂಬಾತನನ್ನು ಬಂಧಿಸಲಾಗಿದೆ. ಅಕ್ಕ ಪಕ್ಕದ ಮನೆಯವರ ಗಲಾಟೆ ಹಿನ್ನೆಲೆಯಲ್ಲಿ ಜೋಸ್ 14 ವರ್ಷದ ಬಾಲಕಿ ಮೇಲೆ ಆಸಿಡ್ ದಾಳಿ ನಡೆಸಿದ್ದಾನೆ. ಸಂತ್ರಸ್ತೆಯನ್ನು ಮೊದಲು ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು ಮತ್ತು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕೋಝಿಕ್ಕೋಡ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಆಕೆಯ ಮುಖದ ಮೇಲಿನ ಗಾಯಗಳು ಸೇರಿದಂತೆ ಸುಮಾರು ಶೇ. 40 ರಷ್ಟು ಸುಟ್ಟ ಗಾಯಗಳಾಗಿವೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.ದಾಳಿಯ ನಂತರ ಆರೋಪಿ ಸ್ಥಳದಿಂದ ಪರಾರಿಯಾಗಿದ್ದಾನೆ ಆದರೆ ಮುಂಜಾನೆ ಆತನನ್ನು ಬಂಧಿಸಲಾಗಿದೆ.

### ಭಾರತೀಯ ಪ್ರಜೆಗೆ ಅಮೆರಿಕದಲ್ಲಿ ಜೈಲು

**ನ್ಯೂಯಾರ್ಕ್:** ಒರೆಗಾನ್‌ನಿಂದ ರಷ್ಯಾಕ್ಕೆ ನಿಯಂತ್ರಿತ ವಿಮಾನ ಘಟಕಗಳನ್ನು ಅಕ್ರಮವಾಗಿ ರಫ್ತು ಮಾಡಲು ಸಂಚು ರೂಪಿಸಿದ್ದಕ್ಕಾಗಿ 58 ವರ್ಷದ ಭಾರತೀಯ ಪ್ರಜೆಗೆ ಅಮೆರಿಕದಲ್ಲಿ ಎರಡೂವರೆ ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ.

ಈ ವಾರದ ಆರಂಭದಲ್ಲಿ ಘೋಷಿಸಲಾದ ತೀರ್ಪಿನಲ್ಲಿ, ಒರೆಗಾನ್ ಜಿಲ್ಲೆಯ ಅಮೆರಿಕದ ವಕೀಲ ಸ್ಕಾಟ್ ಬ್ರಾಡ್‌ಫೋರ್ಡ್, ಸಂಜಯ್ ಕೌಶಿಕ್ ಅವರ ಕ್ರಮಗಳು ಉದ್ದೇಶಪೂರ್ವಕ ಮತ್ತು ಲಾಭ-ಚಾಲಿತವಾಗಿವೆ ಎಂದು ಹೇಳಿದರು.ಇದು ಪುನರಾವರ್ತಿತ ವಹಿವಾಟುಗಳು, ಗಣನೀಯ ಲಾಭಗಳು ಮತ್ತು ಅನುಮೋದಿತ ರಷ್ಯಾದ ಘಟಕಗಳು ಸೇರಿದಂತೆ ವಿದೇಶಿ ಸಹ-ಸಂಚುಕೋರರೊಂದಿಗೆ ಸಮನ್ವಯವನ್ನು ಒಳಗೊಂಡ ಲೆಕ್ಕಾಚಾರದ, ಲಾಭ-ಚಾಲಿತ ಯೋಜನೆಯಾಗಿದೆ.

ಈ ಪ್ರತಿವಾದಿಯು ತನ್ನ ವೈಯಕ್ತಿಕ ಲಾಭಕ್ಕಾಗಿ ಅಮೆರಿಕದ ರಾಷ್ಟ್ರೀಯ ಭದ್ರತೆ ಮತ್ತು ವಿದೇಶಾಂಗ ನೀತಿಗೆ ನಿರ್ಣಾಯಕವಾದ ಸುರಕ್ಷತೆಗಳನ್ನು ದುರ್ಬಲಗೊಳಿಸಲು ಹಲವು ಸಂದರ್ಭಗಳಲ್ಲಿ ಪ್ರಯತ್ನಿಸಿದನು ಎಂದು ಅವರು ಹೇಳಿದರು.

ರಷ್ಯಾ ನಿಯಂತ್ರಣ ಸುಧಾರಣಾ ಕಾಯ್ದೆಯನ್ನು ಉಲ್ಲಂಘಿಸಿ, ನಿಯಂತ್ರಿತ ವಿಮಾನ ಘಟಕಗಳನ್ನು ಮತ್ತು ರಷ್ಯಾದಲ್ಲಿ ಅಂತಿಮ ಬಳಕೆದಾರರಿಗೆ ಸಂಚರಣೆ ಮತ್ತು ಹಾರಾಟ ನಿಯಂತ್ರಣ ವ್ಯವಸ್ಥೆಯನ್ನು ರಫ್ತು ಮಾಡಲು ಇತರರೊಂದಿಗೆ ಸಂಚು ರೂಪಿಸಿದ್ದಕ್ಕಾಗಿ ದೆಹಲಿಯ ಕೌಶಿಕ್‌ಗೆ ನ್ಯಾಯಾಲಯವು 30 ತಿಂಗಳ ಫೆಡರಲ್ ಜೈಲು ಶಿಕ್ಷೆ ಮತ್ತು 36 ತಿಂಗಳ ಮೇಲ್ವಿಚಾರಣೆಯ ಬಿಡುಗಡೆಯನ್ನು ವಿಧಿಸಿತು.

## ಮಹೇಶ್ ಚಿತ್ರಮಂದಿರದಲ್ಲಿ ದರ್ಶನ್‌ಗಿಲ್ಲ ಜಾಗ

ಸ್ಟಾರ್ ನಟರಾಗಿರುವ ಜೊತೆಗೆ ಮಹೇಶ್ ಬಾಬು ಒಳ್ಳೆಯ ಉದ್ಯಮಿಯೂ ಹೌದು. ಮಹೇಶ್ ಬಾಬು ಅವರು ಎಎಂಬಿ ಹೆಸರಿನಲ್ಲಿ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳನ್ನು ನಡೆಸುತ್ತಾರೆ. ಈಗಾಗಲೇ ಹೈದರಾಬಾದ್‌ನಲ್ಲಿ ಹಾಗೂ ಇನ್ನೂ ಕೆಲವೆಡೆ ಐಶಾರಾಮಿ ಮಲ್ಟಿಪ್ಲೆಕ್ಸ್‌ಗಳನ್ನು ಮಹೇಶ್ ಬಾಬು ಹೊಂದಿದ್ದು, ಇದೀಗ ಬೆಂಗಳೂರಿನಲ್ಲೂ ಎಎಂಬಿಯನ್ನು ಪ್ರಾರಂಭಿಸಿದ್ದಾರೆ. ಬೆಂಗಳೂರಿನ ಎಎಂಬಿಯಲ್ಲಿ ಕನ್ನಡದ ಸ್ಟಾರ್ ನಟರ ಚಿತ್ರಗಳಿವೆ ಆದರೆ ದರ್ಶನ್ ಚಿತ್ರವನ್ನು ಪ್ರದರ್ಶಿಸಲಾಗಿಲ್ಲ. ಮಹೇಶ್ ಬಾಬು ಭಾರತೀಯ ಚಿತ್ರರಂಗದ ಸ್ಟಾರ್ ನಟರುಗಳಲ್ಲಿ ಒಬ್ಬರು. ಸ್ಟಾರ್ ನಟರಾಗಿರುವ ಜೊತೆಗೆ ಮಹೇಶ್ ಬಾಬು ಒಳ್ಳೆಯ ಉದ್ಯಮಿಯೂ ಹೌದು. ಹಲವು ಉದ್ಯಮಗಳಲ್ಲಿ ಹಣ ಹೂಡಿಕೆ ಮಾಡಿದ್ದಾರೆ ಮಹೇಶ್ ಬಾಬು. ಅವುಗಳಲ್ಲಿ ಚಿತ್ರಮಂದಿರ ಪ್ರದರ್ಶನವೂ ಹೌದು. ಮಹೇಶ್ ಬಾಬು ಅವರು ಎಎಂಬಿ ಹೆಸರಿನಲ್ಲಿ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳನ್ನು ನಡೆಸುತ್ತಾರೆ. ಈಗಾಗಲೇ ಹೈದರಾಬಾದ್‌ನಲ್ಲಿ ಹಾಗೂ ಇನ್ನೂ ಕೆಲವೆಡೆ ಐಶಾರಾಮಿ ಮಲ್ಟಿಪ್ಲೆಕ್ಸ್‌ಗಳನ್ನು ಮಹೇಶ್ ಬಾಬು ಹೊಂದಿದ್ದು, ಇದೀಗ ಬೆಂಗಳೂರಿನಲ್ಲೂ ಎಎಂಬಿಯನ್ನು ಪ್ರಾರಂಭಿಸಿದ್ದಾರೆ.




ಬೆಂಗಳೂರಿನ ಐಕಾನಿಕ್ ಚಿತ್ರಮಂದಿರಗಳಲ್ಲಿ ಒಂದಾಗಿದ್ದ ಕಪಾಲಿ ಚಿತ್ರಮಂದಿರ ಇದ್ದ ಸ್ಥಳದಲ್ಲಿಯೇ ಇದೀಗ ಮಹೇಶ್ ಬಾಬು ಅವರ ಎಎಂಬಿ ಪ್ರಾರಂಭ ಆಗಿದೆ. ಅತ್ಯುತ್ತಮ ಸೀಟಿಂಗ್ ವ್ಯವಸ್ಥೆ, ಸೌಂಡ್, ಸ್ಕ್ರೀನ್, ಗುಣಮಟ್ಟದ ಆಹಾರ, ಶುಚಿತ್ವ ಎಲ್ಲವನ್ನೂ ಸಹ ಎಎಂಬಿ ಒಳಗೊಂಡಿದೆ. ಇವುಗಳ ಜೊತೆಗೆ ಅತ್ಯುತ್ತಮ ಇಂಟೀರಿಯರ್ ಡೆಕೊರೇಷನ್ ಅನ್ನು ಸಹ ಎಎಂಬಿ ಒಳಗೊಂಡಿದೆ. ಕನ್ನಡದ ಸ್ಟಾರ್ ನಟರುಗಳ ಚಿತ್ರಗಳನ್ನು ಸಹ ಇಲ್ಲಿ ಪ್ರದರ್ಶನ ಮಾಡಲಾಗಿದೆ. ಆದರೆ ದರ್ಶನ್ ಅವರ ಚಿತ್ರವನ್ನು ಪ್ರದರ್ಶಿಸಲಾಗಿಲ್ಲ. ಕನ್ನಡದ ಪ್ರಸ್ತುತ ಜನಪ್ರಿಯ ನಟರುಗಳ ಚಿತ್ರಗಳನ್ನು ಎಎಂಬಿಯ ಆರ್ಟಿಸ್ಟ್ ಗ್ಯಾಲೆರಿಯಲ್ಲಿ ಪ್ರದರ್ಶಿಸಲಾಗಿದೆ. ಶಿವರಾಜ್ ಕುಮಾರ್, ಸುದೀಪ್, ಉಪೇಂದ್ರ, ಯಶ್, ಗಣೇಶ್, ರಿಷಬ್ ಶೆಟ್ಟಿ, ಧ್ರುವ ಸರ್ಜಾ, ಶ್ರೀಮುರಳಿ, ರಕ್ಷಿತ್ ಶೆಟ್ಟಿ ಅವರುಗಳ ಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಆದರೆ ಇಲ್ಲಿ ದರ್ಶನ್ ಚಿತ್ರವನ್ನು ಪ್ರದರ್ಶಿಸಲಾಗಿಲ್ಲ. ಇದು ಅವರ ಅಭಿಮಾನಿಗಳ ಅಸಮಾಧಾನಕ್ಕೆ ಕಾರಣವಾಗಿದೆ. ಇತ್ತೀಚೆಗಷ್ಟೆ ನಿರ್ದೇಶಕ ರವಿ ಶ್ರೀವತ್ಸ ಅವರು ಎಎಂಬಿಗೆ ಭೇಟಿ ನೀಡಿದ್ದರು.

## ಕಲ್ಟ್ ಟ್ರೈಲರ್ ರಿಲೀಸ್ ಇದು ಭಗ್ನಪ್ರೇಮಿಯ ಕತೆ

ಝೈದ್ ಖಾನ್ ನಟಿಸಿರುವ 'ಕಲ್ಟ್' ಸಿನಿಮಾದ ಟ್ರೈಲರ್ ಇದೀಗ ಬಿಡುಗಡೆ ಆಗಿದೆ. ಸಿನಿಮಾದ ಪೋಸ್ಟರ್‌ನಿಂದ ಸಖತ್ ಗಮನ ಸೆಳೆದಿದ್ದ 'ಕಲ್ಟ್' ಸಿನಿಮಾಕ್ಕೆ ಮಲೈಕಾ ವಸುಪಾಲ್ ನಾಯಕಿ. ಝೈದ್ ಖಾನ್ ಮತ್ತು ಮಲೈಕಾ ಅವರು ಸಿನಿಮಾಕ್ಕೆ ಭರ್ಜರಿ ಪ್ರಚಾವನ್ನು ಸಹ ಮಾಡಿದ್ದಾರೆ. ಸಿನಿಮಾದ ಟ್ರೈಲರ್ ಇದೀಗ ಬಿಡುಗಡೆ ಆಗಿದ್ದು, ಮೇಕಿಂಗ್, ಆಕ್ಷನ್ ದೃಶ್ಯಗಳು ಮತ್ತು ಭಾವುಕ ದೃಶ್ಯಗಳಿಂದ ಟ್ರೈಲರ್ ಗಮನ ಸೆಳೆಯುತ್ತಿದೆ. ಸಚಿವ ಜಮೀರ್ ಅಹ್ಮದ್ ಪುತ್ರ ಝೈದ್ ಖಾನ್ ನಟಿಸಿರುವ 'ಕಲ್ಟ್' ಸಿನಿಮಾದ ಟ್ರೈಲರ್ ಇದೀಗ ಬಿಡುಗಡೆ ಆಗಿದೆ. ಸಿನಿಮಾದ ಪೋಸ್ಟರ್‌ನಿಂದ ಸಖತ್ ಗಮನ ಸೆಳೆದಿದ್ದ 'ಕಲ್ಟ್' ಸಿನಿಮಾಕ್ಕೆ ಮಲೈಕಾ ವಸುಪಾಲ್ ನಾಯಕಿ. ಝೈದ್ ಖಾನ್ ಮತ್ತು ಮಲೈಕಾ ಅವರು ಸಿನಿಮಾಕ್ಕೆ ಭರ್ಜರಿ ಪ್ರಚಾವನ್ನು ಸಹ ಮಾಡಿದ್ದಾರೆ. ಸಿನಿಮಾದ ಟ್ರೈಲರ್ ಇದೀಗ ಬಿಡುಗಡೆ ಆಗಿದ್ದು, ಮೇಕಿಂಗ್, ಆಕ್ಷನ್ ದೃಶ್ಯಗಳು ಮತ್ತು ಭಾವುಕ ದೃಶ್ಯಗಳಿಂದ ಟ್ರೈಲರ್ ಗಮನ ಸೆಳೆಯುತ್ತಿದೆ. 'ಕಲ್ಟ್' ಟ್ರೈಲರ್ ನೋಡಿದರೆ ಇದು ಪಕ್ಕಾ ಭಗ್ನ ಪ್ರೇಮಿಯ ಕತೆ ಎಂಬುದು ತಿಳಿಯುತ್ತದೆ. ಝೈದ್ ಖಾನ್ ಮಾಧವ ಪಾತ್ರದಲ್ಲಿ ನಟಿಸಿದ್ದರೆ ಮಲೈಕಾ ಗೀತಾ ಪಾತ್ರದಲ್ಲಿ ನಟಿಸಿದ್ದಾರೆ. ಸಿನಿಮಾನಲ್ಲಿ ರಚಿತಾ ರಾಮ್ ಸಹ ನಟಿಸಿದ್ದು, ಅವರುದ್ದ ಕೇವಲ ಅತಿಥಿ ಪಾತ್ರ ಮಾತ್ರವೇ ಅಲ್ಲ ಎಂಬುದು ಟ್ರೈಲರ್‌ನಲ್ಲಿಯೇ ತಿಳಿದು ಬರುತ್ತಿದೆ. ಪ್ರೀತಿಯನ್ನು ಕಳೆದುಕೊಂಡು ಮದ್ಯದ ದಾಸನಾದ ಯುವಕನ ಪಾತ್ರದಲ್ಲಿ ಝೈದ್ ಖಾನ್ ನಟಿಸಿದ್ದಾರೆ. ಸಿನಿಮಾದಲ್ಲಿ ಪ್ರೇಮಿಯಾಗಿ, ಭಗ್ನ ಪ್ರೇಮಿಯಾಗಿ ಹೀಗೆ ಎರಡು ಶೇಡ್‌ನಲ್ಲಿ ಝೈದ್ ಖಾನ್ ಕಾಣಿಸಿಕೊಂಡಿರುವುದು ಟ್ರೈಲರ್‌ನಲ್ಲಿಯೇ ತಿಳಿದು ಬರುತ್ತಿದೆ. ಮಲೈಕಾ ವಸುಪಾಲ್ ಟ್ರೈಲರ್‌ನಲ್ಲಿ ಕಡಿಮೆ ಕಾಣಿಸಿಕೊಂಡರೂ ಸಹ ಬಲು ಅಂದವಾಗಿ ಕಾಣುತ್ತಾರೆ. ರಚಿತಾ ರಾಮ್ ಅವರ ಪಾತ್ರ ಬೋಲ್ಡ್ ಆಗಿರುವ ಜೊತೆಗೆ ಪ್ರಬುದ್ಧತೆಯನ್ನೂ ಒಳಗೊಂಡಿರುವುದು ಟ್ರೈಲರ್‌ನಿಂದ ತಿಳಿದು ಬರುತ್ತಿದೆ. ಕೆಲವು ಆಕ್ಷನ್ ಸೀನ್‌ಗಳನ್ನು ಟ್ರೈಲರ್‌ನಲ್ಲಿ ತೋರಿಸಲಾಗಿದ್ದು, ಆಕ್ಷನ್ ಒಳ್ಳೆಯ ಗುಣಮಟ್ಟದಿಂದ ಕೂಡಿರುವುದು ಕಾಣುತ್ತಿದೆ. ಒಟ್ಟಾರೆಯಾಗಿ 'ಕಲ್ಟ್' ಸಿನಿಮಾದ ಟ್ರೈಲರ್ ಕುತೂಹಲ ಮೂಡಿಸುವಂತಿದೆ. ಸಿನಿಮಾನಲ್ಲಿ ಪ್ರೀತಿ, ರೊಮ್ಯಾನ್ಸ್, ಆಕ್ಷನ್, ಭಗ್ನ ಪ್ರೇಮ, ಭಗ್ನ ಪ್ರೇಮದ ಬಳಿಕ ಮತ್ತೆ ಪ್ರೇಮದಲ್ಲಿ ಬೀಳುವುದು, ಮಗ ವ್ಯಸನಗಳಿಗೆ ದಾಸನಾದರೆ ಪೋಷಕರು ಅನುಭವಿಸುವ ನೋವು, ಝೈದ್ ಖಾನ್ (ಮಾಧವ) ಭಗ್ನ ಪ್ರೇಮಿ ಯಾಕಾದ, ರಚಿತಾ ರಾಮ್ ಪಾತ್ರ, ಮಾಧವನ ಹುಡುಕಿ ಬರುವುದೇಕೆ ಇನ್ನೂ ಹಲವು ಅಂಶಗಳು, ಕುತೂಹಲಗಳು ಸಿನಿಮಾನಲ್ಲಿ ಇರುವಂತಿದೆ. 'ಕಲ್ಟ್' ಸಿನಿಮಾವನ್ನು ಅನಿಲ್ ಕುಮಾರ್ ನಿರ್ದೇಶನ ಮಾಡಿದ್ದಾರೆ. ಸಿನಿಮಾಕ್ಕೆ ಸಂಗೀತ ನೀಡಿರುವುದು ಅರ್ಜುನ್ ಜನ್ಯ. ಎ ಹರ್ಷ ಕೊರಿಯೋಗ್ರಫಿ ಮಾಡಿದ್ದಾರೆ.



## ಮುಸ್ಲಿಂ ಎಂಬ ಕಾರಣಕ್ಕೆ ಹಿಂದಿಯಲ್ಲಿ ಆಫರ್‌ಗಳು ಬರುತ್ತಿಲ್ಲ

ಆಸ್ಕರ್ ವಿಜೇತ ಎಆರ್ ರೆಹಮಾನ್ ಅವರು ಬಾಲಿವುಡ್‌ನಲ್ಲಿ ಧರ್ಮದ ಕಾರಣಕ್ಕೆ ತಮಗೆ ಆಫರ್‌ಗಳು ಸಿಗುತ್ತಿಲ್ಲ ಎಂದು ನೀಡಿರುವ ಹೇಳಿಕೆ ಭಾರಿ ಚರ್ಚೆಗೆ ಕಾರಣವಾಗಿದೆ. ಕಳೆದ ಎಂಟು ವರ್ಷಗಳಿಂದ ಹಿಂದಿ ಚಿತ್ರರಂಗದಿಂದ ಅವಕಾಶಗಳು ಬಂದಿಲ್ಲ ಎಂದಿರುವ ರೆಹಮಾನ್, 'ಸೃಜನಾತ್ಮಕವಲ್ಲದ ಜನರು ನಿರ್ಧಾರ ಕೈಗೊಳ್ಳುತ್ತಾರೆ' ಎಂದಿದ್ದಾರೆ. ಅವರ ಈ ಹೇಳಿಕೆ ಬಗ್ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಅನೇಕರು ಟೀಕಿಸಿದ್ದಾರೆ. ಎಆರ್ ರೆಹಮಾನ್ ಅವರು ಖ್ಯಾತ ಸಂಗೀತ ಸಂಯೋಜಕ. ಅವರು ಆಸ್ಕರ್ ಕೂಡ ಗೆದ್ದಿದ್ದಾರೆ. ಅವರು ಪಡೆದ ಖ್ಯಾತಿ ತುಂಬಾನೇ ದೊಡ್ಡದು. ಈಗ ರೆಹಮಾನ್ ಅವರು ನೀಡಿದ ಹೇಳಿಕೆ ಚರ್ಚೆಗೆ ಕಾರಣ ಆಗಿದೆ. 'ಹಿಂದಿ ಚಿತ್ರರಂಗದಲ್ಲಿ ಧರ್ಮದ ಕಾರಣಕ್ಕೆ ನನಗೆ ಆಫರ್ ಸಿಗುತ್ತಿಲ್ಲ' ಎಂಬ ಆರೋಪವನ್ನು ಅವರು ಮಾಡಿದ್ದಾರೆ. ರೆಹಮಾನ್ ಹೇಳಿಕೆಯನ್ನು ಅನೇಕರು ಟೀಕೆ ಮಾಡಿದ್ದಾರೆ. ಅವರ ಹೇಳಿಕೆ ಸರಿ ಅಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಬಿಬಿಸಿ ಏಷ್ಯನ್ ನೆಟ್ವರ್ಕ್‌ಗೆ ನೀಡಿದ ಸಂದರ್ಶನದಲ್ಲಿ ರೆಹಮಾನ್ ಮಾತನಾಡಿದರು. 'ಕಳೆದ ಎಂಟು ವರ್ಷಗಳಿಂದ ನನಗೆ ಹಿಂದಿ ಸಿನಿಮಾ ರಂಗದಲ್ಲಿ ಆಫರ್‌ಗಳು ಬಂದಿಲ್ಲ. ಇದಕ್ಕೆ ಕಾರಣ ಏನು ಎಂಬ ವಿಷಯ ಹಿಂದಿನ ಬಾಗಿಲಿನಿಂದ ನನಗೆ ತಿಳಿಯುತ್ತದೆ. ನಾನು ಕೆಲಸ ಹುಡುಕುತ್ತಾ ಇಲ್ಲ. ಕೆಲಸ ನನ್ನ ಬಳಿಗೆ ಬರಬೇಕೆಂದು ನಾನು ಬಯಸುತ್ತೇನೆ' ಎಂದು ಅವರು ಹೇಳಿದ್ದಾರೆ.



## ಮಗನ ದಾಖಲೆ ಮುರಿದ ಅಪ್ಪ


ಸಂಕ್ರಾಂತಿಗೆ ತೆಲುಗಿನ ಹಲವು ಸಿನಿಮಾಗಳು ಬಿಡುಗಡೆ ಆಗಿವೆ. ಪ್ರಭಾಸ್ ಸಿನಿಮಾ ಸೇರಿದಂತೆ, ಒಟ್ಟು ಐದು ದೊಡ್ಡ ಸಿನಿಮಾಗಳೇ ಬಿಡುಗಡೆ ಆಗಿವೆ. ಆದರೆ ಗೆದ್ದಿರುವುದು ಮೆಗಾಸ್ಟಾರ್ ಚಿರಂಜೀವಿ ಮಾತ್ರ. ಚಿರಂಜೀವಿ ನಟಿಸಿರುವ 'ಮನ ಶಂಕರ ವರ ಪ್ರಸಾದ್ ಗಾರು' ಸಿನಿಮಾ ಇತರೆ ಸಿನಿಮಾಗಳನ್ನು ಬಾಕ್ಸ್ ಆಫೀಸ್‌ನಲ್ಲಿ ಹಿಂದಿಕ್ಕಿದೆ. ಅದು ಮಾತ್ರವೇ ಅಲ್ಲದೆ ಈ ಸಿನಿಮಾ ತೆಲುಗು ಚಿತ್ರರಂಗದ ಇತ್ತೀಚಿನ ಟಾಪ್ ಸಿನಿಮಾಗಳಲ್ಲಿ ಒಂದಾಗಿರುವ 'ಆರ್‌ಆರ್‌ಆರ್' ಸಿನಿಮಾದ ಒಂದು ದಾಖಲೆಯನ್ನೇ ಮುರಿದು ಹಾಕಿದೆ. 'ಮನ ಶಂಕರ ವರ ಪ್ರಸಾದ್ ಗಾರು' ಸಿನಿಮಾ ಜನವರಿ 12 ರಂದು ಬಿಡುಗಡೆ ಆಗಿದ್ದು, ಬಿಡುಗಡೆ ಆದ ಮೊದಲ ದಿನ ಸುಮಾರು 84 ಕೋಟಿ ಹಣ ಗಳಿಸಿತ್ತು. ಅದಾದ ಬಳಿಕವೂ ಸಹ ಸಿನಿಮಾ ಕಲೆಕ್ಷನ್‌ನಲ್ಲಿ ಇಳಿಕೆ ಆಗಿಲ್ಲ. ಅದರಲ್ಲೂ ಆಂಧ್ರ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಕಲೆಕ್ಷನ್ ಗಮನಾರ್ಹ ಮಟ್ಟದಲ್ಲಿ ಸಮತೋಲನ ಕಾಯ್ದುಕೊಂಡಿದೆ. ಸಿನಿಮಾ ಬಿಡುಗಡೆ ಆಗಿ ವಾರವಾಗುತ್ತಾ ಬರುತ್ತಿದ್ದರೂ ಸಿನಿಮಾ ಈಗಲೂ ಡಬಲ್ ಡಿಜಿಟ್ ಗಳಿಕೆ ಮಾಡುತ್ತಿದೆ. 'ಮನ ಶಂಕರ ವರ ಪ್ರಸಾದ್ ಗಾರು' ಸಿನಿಮಾ ಬಿಡುಗಡೆ ಆದ ಐದನೇ ದಿನ ಆಂಧ್ರ ಮತ್ತು ತೆಲಂಗಾಣ ರಾಜ್ಯಗಳಲ್ಲಿ 14.50 ಕೋಟಿ ರೂಪಾಯಿ ಹಣ ಗಳಿಕೆ ಮಾಡಿದೆ. ಇದು ಕಡಿಮೆ ಮೊತ್ತವಲ್ಲ. 'ಆರ್‌ಆರ್‌ಆರ್‌ಆರ್' ಸಿನಿಮಾ ಸಹ ಬಿಡುಗಡೆ ಆದ ಐದನೇ ದಿನ ಇಷ್ಟು ದೊಡ್ಡ ಮೊತ್ತದ ಗಳಿಕೆ ಮಾಡಿರಲಿಲ್ಲ. 'ಆರ್‌ಆರ್‌ಆರ್' ಸಿನಿಮಾ ಐದನೇ ದಿನ ಗಳಿಸಿದ್ದಿದ್ದು 13 ಕೋಟಿ ರೂಪಾಯಿಗಳು ಆದರೆ 'ಶಂಕರ ವರ ಪ್ರಸಾದ್' ಗಳಿಸಿರುವುದು 14.50 ಕೋಟಿ. ಆ ಮೂಲಕ 'ಆರ್‌ಆರ್‌ಆರ್' ಸಿನಿಮಾದ ದಾಖಲೆಯನ್ನೇ ಮುರಿದಿದೆ ಚಿರಂಜೀವಿ ಸಿನಿಮಾ. ಆ ಮೂಲಕ ತಮ್ಮ ಪುತ್ರ ರಾಮ್ ಚರಣ್ ಅವರ ದಾಖಲೆಯನ್ನೇ ಮುರಿದಂತಾಗಿದೆ ಚಿರಂಜೀವಿ. 'ಮನ ಶಂಕರ ವರ ಪ್ರಸಾದ್ ಗಾರು' ಸಿನಿಮಾ ಐದು ದಿನಗಳಲ್ಲಿ 200 ಕೋಟಿಗೂ ಹೆಚ್ಚು ಮೊತ್ತವನ್ನು ಬಾಕ್ಸ್ ಆಫೀಸ್‌ನಲ್ಲಿ ಗಳಿಕೆ ಮಾಡಿದೆ. ಚಿರಂಜೀವಿ ಅವರ ಸಿನಿಮಾ ಒಂದು ಇಷ್ಟು ಕಡಿಮೆ ಅವಧಿಯಲ್ಲಿ ಇಷ್ಟು ದೊಡ್ಡ ಮೊತ್ತ ಗಳಿಸಿರುವುದು ಇದೇ ಮೊದಲು.



## ದಂತದ ಕಳ್ಳಸಾಗಣೆಯ ಕಾಟಾಳನ್

ಮಲಯಾಳಂನ 'ಕಾಟಾಳನ್' ಸಿನಿಮಾ ಆನೆ ದಂತ ಕಳ್ಳಸಾಗಣೆಯ ಕರಾಳ ಜಗತ್ತನ್ನು ತೆರೆದಿಡಲಿದೆ. ಭರ್ಜರಿ ಆಕ್ಷನ್ ದೃಶ್ಯಗಳು, ನೈಜ ಆನೆಗಳ ಸೆಣೆಸಾಟ ಇದರ ಹೈಲೈಟ್. ಮೇ 14ಕ್ಕೆ ಮಲಯಾಳಂ, ಕನ್ನಡ ಸೇರಿ ಐದು ಭಾಷೆಗಳಲ್ಲಿ ಬಿಡುಗಡೆಯಾಗಲಿರುವ ಈ ಚಿತ್ರದಲ್ಲಿ ಸುನೀಲ್, ಆಯಂಟನಿ ವರ್ಗೀಸ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಕನ್ನಡದ ಅಜನೀಶ್ ಸಂಗೀತ ಸಂಯೋಜಿಸಿದ್ದು, ಈಗಾಗಲೇ ಟೀಸರ್ ನಿರೀಕ್ಷೆ ಹೆಚ್ಚಿಸಿದೆ. ಅಲ್ಲು ಅರ್ಜುನ್ ನಟನೆಯ 'ಪುಷ್ಪ' ಸಿನಿಮಾ ಸೂಪರ್ ಹಿಟ್ ಆಯಿತು. ಈ ಚಿತ್ರದಲ್ಲಿ ರಕ್ತ ಚಂದನದ ಕಳ್ಳ ಸಾಗಣೆಯ ಕಥೆಯನ್ನು ಹೇಳಲಾಗಿತ್ತು. ಈಗ 'ಕಾಟಾಳನ್' ಹೆಸರಿನ ಮಲಯಾಳಂ ಸಿನಿಮಾ ತೆರೆಗೆ ಬರಲು ಸಿದ್ಧವಾಗಿದೆ.

ಈ ಚಿತ್ರದ ಆನೆ ದಂತದ ಕಳ್ಳ ಸಾಗಣೆಯ ಕರಾಳ ಜಗತ್ತನ್ನು ತೆರೆದಿಡಲು ನಿರ್ದೇಶಕರು ಪ್ರಯತ್ನಿಸಿದಂತಿದೆ. ಇದರ ಜೊತೆಗೆ ಭರ್ಜರಿ ಆಯಕ್ಷನ್ ಕೂಡ ಸಿನಿಮಾದಲ್ಲಿ ಇರಲಿದೆ. 'ಕಾಟಾಳನ್' ಸಿನಿಮಾದ ಟೀಸರ್ ರಿಲೀಸ್ ಬಿಡುಗಡೆ ಕಂಡಿದೆ. ಇದು ಚಿತ್ರದ ಮೇಲಿನ ನಿರೀಕ್ಷೆ ಹೆಚ್ಚುವಂತೆ ಮಾಡಿದೆ. ಈ ಸಿನಿಮಾ ಮೇ 14ರಂದು ರಿಲೀಸ್ ಆಗಲಿದೆ. 'ಕಾಟಾಳನ್' ಮಲಯಾಳಂ ಚಿತ್ರ. ಈ ಸಿನಿಮಾ ಮಲಯಾಳಂ ಜೊತೆಗೆ ಕನ್ನಡ, ತಮಿಳು, ತೆಲುಗು ಹಾಗೂ ಹಿಂದಿ ಭಾಷೆಯಲ್ಲಿ ಬಿಡುಗಡೆ ಕಾಣಲಿದೆ ಎಂಬುದು ವಿಶೇಷ. ಈ ಚಿತ್ರದಲ್ಲಿ ಪಾತ್ರಗಳ ಜೊತೆಗೆ ಆನೆಗಳು ಕೂಡ ಹೈಲೈಟ್ ಆಗಿವೆ. ಆನೆಗಳ ಜೊತೆಗಿನ ಸಾಹಸ ದೃಶ್ಯ ಟೀಸರ್‌ನಲ್ಲಿ ಗಮನ ಸೆಳೆದಿವೆ. ದಂತದ ಕಳ್ಳಸಾಗಣೆ ವಿಷಯ ಕೂಡ ಹೈಲೈಟ್ ಆಗಿದೆ. ಸಾಮಾನ್ಯವಾಗಿ ಆನೆಗಳ ಜೊತೆಗಿನ ಸೆಣೆಸಾಟ ಎಂದಾಗ ಗ್ರಾಫಿಕ್ಸ್ ಬಳಸುತ್ತಾರೆ. ಆದರೆ, ನೈಜವಾಗಿ ಇದನ್ನು ಚಿತ್ರೀಕರಿಸಲಾಗಿದೆ. ಅಂತರಾಷ್ಟ್ರೀಯ ಸ್ಟಂಟ್ ಕೋ-ಆರ್ಡಿನೇಟರ್ ಕೇಚಾ ಖಾನ್ಫಕ್ಡಿ ನೇತೃತ್ವದಲ್ಲಿ ಥೈಲ್ಯಾಂಡ್‌ನಲ್ಲಿ ಸಾಹಸ ದೃಶ್ಯಗಳನ್ನು ಚಿತ್ರೀಕರಿಸಲಾಗಿದೆ.



## ಅಫ್ಘಾನಿಸ್ತಾನ ವಿರುದ್ಧ ಸೋತ ದಕ್ಷಿಣ ಆಫ್ರಿಕಾ

ನಮೀಬಿಯಾದಲ್ಲಿ ನಡೆದ ಉ19 ವಿಶ್ವಕಪ್ ಪಂದ್ಯಾವಳಿಯಲ್ಲಿ ಅಫ್ಘಾನಿಸ್ತಾನ ತಂಡ ಮಾಜಿ ಚಾಂಪಿಯನ್ ದಕ್ಷಿಣ ಆಫ್ರಿಕಾವನ್ನು 28 ರನ್‌ಗಳಿಂದ ಸೋಲಿಸಿ ಅಚ್ಚರಿ ಮೂಡಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ 266 ರನ್ ಗಳಿಸಿತು. ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ 238 ರನ್‌ಗಳಿಗೆ ಆಲೌಟ್ ಆಯಿತು. ಈ ಗೆಲುವು ಅಫ್ಘಾನಿಸ್ತಾನಕ್ಕೆ ಶುಭಾರಂಭ ನೀಡಿದ್ದು, ಪಂದ್ಯಾವಳಿಯಲ್ಲಿ ಹೊಸ ನಿರೀಕ್ಷೆಗಳನ್ನು ಹುಟ್ಟುಹಾಕಿದೆ. ಜಿಂಬಾಬ್ವೆ ಮತ್ತು ನಮೀಬಿಯಾದಲ್ಲಿ 2026 ರ ಅಂಡರ್-19 ವಿಶ್ವಕಪ್ ಪ್ರಾರಂಭವಾಗಿದೆ. ಅದರಂತೆ ಪಂದ್ಯಾವಳಿಯ 6ನೇ ಪಂದ್ಯದಲ್ಲಿ ಮಾಜಿ ಚಾಂಪಿಯನ್ ದಕ್ಷಿಣ ಆಫ್ರಿಕಾ ಹೀನಾಯ ಸೋಲನ್ನು ಅನುಭವಿಸಿದೆ. ಗ್ರೂಪ್ ಡಿ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾವನ್ನು 28 ರನ್‌ಗಳಿಂದ ಸೋಲಿಸುವ ಮೂಲಕ ಅಫ್ಘಾನಿಸ್ತಾನ ಎಲ್ಲರನ್ನೂ ಅಚ್ಚರಿಗೊಳಿಸಿ ಗೆಲುವಿನ ಶುಭಾರಂಭ ಮಾಡಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ 266 ರನ್ ಕಲೆಹಾಕಿತು. ಈ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು 238 ರನ್‌ಗಳಿಗೆ ಆಲೌಟ್ ಆಗುವ ಮೂಲಕ 28 ರನ್‌ಗಳಿಂದ ಸೋಲೊಪ್ಪಿಕೊಂಡಿತು.




**266 ರನ್ ಕಲೆಹಾಕಿದ ಅಫ್ಘಾನಿಸ್ತಾನ:** ವಿಶ್ವಕಪ್‌ನ ಈ ಆರನೇ ಪಂದ್ಯವು ನಮೀಬಿಯಾದ ವಿಂಡ್‌ಹೋಕ್‌ನಲ್ಲಿ ನಡೆಯಿತು. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ 8 ವಿಕೆಟ್‌ಗೆ 266 ರನ್ ಗಳಿಸಿತು. ಮೊದಲ ವಿಕೆಟ್ ಬೇಗನೆ ಕಳೆದುಕೊಂಡ ನಂತರ, ಖಾಲಿದ್ ಅಹ್ಮದ್‌ಜೈ ಮತ್ತು ಫೈಸಲ್ ಶಿನೋಜಾಡಾ 152 ರನ್‌ಗಳ ಅದ್ಭುತ ಪಾಲುದಾರಿಕೆಯನ್ನು ನೀಡಿದರು. ಇಬ್ಬರೂ ಅರ್ಧಶತಕ ಬಾರಿಸಿದರಾದರೂ ಶತಕದ ಗಡಿ ತಲುಪುವ ಮೊದಲೇ ಔಟಾದರು. ಇಬ್ಬರೂ ಬ್ಯಾಟ್ಸ್‌ಮನ್‌ಗಳು ಕೇವಲ ನಾಲ್ಕು ಎಸೆತಗಳ ಅಂತರದಲ್ಲಿ ಔಟಾದರು. ನಂತರ ಉಜ್ಜೈರುಲ್ಲಾ ನಿಯಾಜೈ 51 ಎಸೆತಗಳಲ್ಲಿ 51 ರನ್ ಗಳಿಸಿ ತಂಡವನ್ನು 266 ರನ್‌ಗಳ ಸ್ಪರ್ಧಾತ್ಮಕ ಮೊತ್ತಕ್ಕೆ ಕೊಂಡೊಯ್ದರು. ಮತ್ತೊಂದೆಡೆ ಕಳಪೆ ಆರಂಭ ಪಡೆದ ದಕ್ಷಿಣ ಆಫ್ರಿಕಾ ಕೇವಲ 49 ರನ್‌ಗಳಿಗೆ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತು. ತಂಡದ ಹತ್ತು ವಿಕೆಟ್‌ಗಳಲ್ಲಿ ನಾಲ್ಕು ವಿಕೆಟ್‌ಗಳು ರನ್ ಔಟ್‌ಗಳ ಮೂಲಕ ಬಿದ್ದಿದ್ದು ತಂಡಕ್ಕೆ ದೊಡ್ಡ ಹೊಡೆತ ನೀಡಿತು.

## ವಿಶ್ವದಾಖಲೆ ನಿರ್ಮಿಸಿದ ವೈಭವ್ ಸೂರ್ಯವಂಶಿ



ವೈಭವ್ ಸೂರ್ಯವಂಶಿ ಅಂಡರ್-19 ವಿಶ್ವಕಪ್‌ನಲ್ಲಿ ಇತಿಹಾಸ ನಿರ್ಮಿಸಿದ್ದಾರೆ. ಮೊದಲ ಪಂದ್ಯದ ವೈಫಲ್ಯದ ನಂತರ, ಬಾಂಗ್ಲಾದೇಶ ವಿರುದ್ಧ ಕೇವಲ 30 ಎಸೆತಗಳಲ್ಲಿ ದಾಖಲೆಯ ವೇಗದ ಅರ್ಧಶತಕ ಸಿಡಿಸಿದರು. 14 ವರ್ಷದ ವೈಭವ್, ಉ19 ವಿಶ್ವಕಪ್ ಇತಿಹಾಸದಲ್ಲಿ ಅರ್ಧಶತಕ ಗಳಿಸಿದ ಅತ್ಯಂತ ಕಿರಿಯ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. 2026 ರ ಅಂಡರ್-19 ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ರನ್ ಗಳಿಸುವಲ್ಲಿ ವಿಫಲರಾಗಿದ್ದ ವೈಭವ್ ಸೂರ್ಯವಂಶಿ ಇದೀಗ ಎರಡನೇ ಪಂದ್ಯದಲ್ಲೇ ಎಲ್ಲರಿಗೂ ಉತ್ತರ ನೀಡಿದ್ದಾರೆ. ಟೂರ್ನಿಯ ಎರಡನೇ ಪಂದ್ಯದಲ್ಲಿ ಭಾರತ ಯುವ ತಂಡ ಬಾಂಗ್ಲಾದೇಶ ತಂಡವನ್ನು ಎದುರಿಸುತ್ತಿದೆ. ಈ ಪಂದ್ಯದಲ್ಲಿ ವೈಭವ್ ಬಿರುಗಾಳಿಯ ಅರ್ಧಶತಕ ಗಳಿಸುವ ಮೂಲಕ ವಿಶ್ವ ದಾಖಲೆ ಸೃಷ್ಟಿಸಿದ್ದಾರೆ. ಬಾಂಗ್ಲಾದೇಶ ವಿರುದ್ಧದ ಈ ಪಂದ್ಯದಲ್ಲಿ ಟೀಂ ಇಂಡಿಯಾಗೆ ಉತ್ತಮ ಆರಂಭ ಸಿಗಲಿಲ್ಲ. ಆದಾಗ್ಯೂ, ಒಂದೆಡೆ ತಂಡದ ಇನ್ನಿಂಗ್ಸ್ ನಿಭಾಯಿಸುತ್ತಾ ಗಮನಾರ್ಹ ಪ್ರದರ್ಶನ ನೀಡಿದ ವೈಭವ್ ಸೂರ್ಯವಂಶಿ ಪಂದ್ಯಾವಳಿಯ ವೇಗದ ಅರ್ಧಶತಕವನ್ನು ಗಳಿಸಿದ್ದಲ್ಲದೆ, ವಿಶ್ವಕಪ್ ಇತಿಹಾಸದಲ್ಲಿ ಅರ್ಧಶತಕ ಬಾರಿಸಿದ ಅತ್ಯಂತ ಕಿರಿಯ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ಬುಲವಾಯೊದಲ್ಲಿ ನಡೆದ ಈ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾ ಮೂರನೇ ಓವರ್‌ನಲ್ಲಿ ಎರಡು ವಿಕೆಟ್‌ಗಳನ್ನು ಕಳೆದುಕೊಂಡಿತು. ಆದಾಗ್ಯೂ, ವೈಭವ್ ಸೂರ್ಯವಂಶಿ ಅದ್ಭುತವಾಗಿ ಬ್ಯಾಟಿಂಗ್ ಮಾಡುವುದನ್ನು ಮುಂದುವರೆಸಿದರು. ಮೂರನೇ ವಿಕೆಟ್ ಅವರ ಕಣ್ಣೆದುರೇ ಬಿದ್ದರೂ, ವೈಭವ್ ತಮ್ಮ ದಾಳಿಯನ್ನು ಮುಂದುವರಿಸಿ 13 ನೇ ಓವರ್‌ನಲ್ಲಿ ವಿಶ್ವದಾಖಲೆ ನಿರ್ಮಿಸಿದರು. 13 ನೇ ಓವರ್‌ನ ಕೊನೆಯ ಎಸೆತದಲ್ಲಿ ಸಿಂಗಲ್ ಗಳಿಸುವ ಮೂಲಕ ವೈಭವ್ ಅರ್ಧಶತಕ ಪೂರೈಸಿದರು. ಈ ಮೂಲಕ ಅವರು ಅಂಡರ್-19 ವಿಶ್ವಕಪ್‌ನಲ್ಲಿ ತಮ್ಮ ಮೊದಲ ಅರ್ಧಶತಕ ಪೂರೈಸಿದಲ್ಲದೆ ದಾಖಲೆಯನ್ನೂ ಸೃಷ್ಟಿಸಿದರು. ಕೇವಲ 30 ಎಸೆತಗಳಲ್ಲಿ 5 ಬೌಂಡರಿ ಮತ್ತು 3 ಸಿಕ್ಸರ್‌ಗಳ ಸಹಾಯದಿಂದ ವೈಭವ್ ಅರ್ಧಶತಕ ಪೂರೈಸಿದರು. ಇದು ಈ ವಿಶ್ವಕಪ್‌ನಲ್ಲಿ ಅತ್ಯಂತ ವೇಗದ ಅರ್ಧಶತಕವಾಗಿದೆ. ಅಷ್ಟೇ ಅಲ್ಲ, ಅಂಡರ್-19 ವಿಶ್ವಕಪ್ ಇತಿಹಾಸದಲ್ಲಿ ಅರ್ಧಶತಕ ಗಳಿಸಿದ ಅತ್ಯಂತ ಕಿರಿಯ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೂ ವೈಭವ್ ಪಾತ್ರರಾದರು. ವೈಭವ್ ಕೇವಲ 14 ವರ್ಷ ಮತ್ತು 296 ದಿನಗಳಲ್ಲಿ ಈ ದಾಖಲೆ ನಿರ್ಮಿಸಿದ್ದಾರೆ.

**ಅತ್ಯಂತ ಕಿರಿಯ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆ**

## ಬಾಂಗ್ಲಾ ಜೊತೆಗೆ ಶೇಕ್ ಹ್ಯಾಂಡ್ ಮಾಡದ ಟೀಂ ಇಂಡಿಯಾ

ಕ್ವೀನ್ಸ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆದ ಐಸಿಸಿ ಅಂಡರ್-19 ವಿಶ್ವಕಪ್ 2026 ರ ತನ್ನ ಎರಡನೇ ಪಂದ್ಯದಲ್ಲಿ ಟೀಂ ಇಂಡಿಯಾ ಬಾಂಗ್ಲಾದೇಶವನ್ನು ಎದುರಿಸಿತು. ಮಳೆ ಪೀಡಿತ ಈ ಪಂದ್ಯದಲ್ಲಿ ಟೀಂ ಇಂಡಿಯಾ ಮೊದಲು ಬ್ಯಾಟಿಂಗ್ ಮಾಡಿತು. ಆದಾಗ್ಯೂ ಟಾಸ್ ಸಮಯದಲ್ಲಿ ನಡೆದ ಅಚ್ಚರಿಯ ಘಟನೆ ಇದೀಗ ಕ್ರಿಕೆಟ್ ಲೋಕದಲ್ಲಿ ಮತ್ತೊಂದು ವಿವಾದವನ್ನು ಹುಟ್ಟುಹಾಕಿದೆ. ನಡೆದಿದ್ದೇನೆಂದರೆ ಟಾಸ್ ಮುಗಿದ ಎರಡೂ ತಂಡಗಳ ನಾಯಕರು ಹ್ಯಾಂಡ್ ಶೇಕ್ ಮಾಡಲಿಲ್ಲ. ಬಾಂಗ್ಲಾದೇಶ ನಾಯಕ ಕೈಕುಲುಕಲು ತಮ್ಮ ಕೈಯನ್ನು ಜೇಬಿನಿಂದ ಹೊರತೆಗೆದರಾದರೂ, ಟೀಂ ಇಂಡಿಯಾ ನಾಯಕ ಆಯುಷ್ ಮ್ಹಾತ್ರೆ ಮಾತ್ರ ಕೈಕುಲುಕಲದೆ ಹಿಂದೆ ಸರಿದರು. ಇದೀಗ ಇದರ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದ್ದು, ಮತ್ತೊಂದು ವಿವಾದಕ್ಕೆ ನಾಂದಿ ಹಾಡಿದೆ. ವಾಸ್ತವವಾಗಿ ಕಳೆದ ವರ್ಷ ಅಂದರೆ 2025 ರ ಏಷ್ಯಾಕಪ್ ಸಮಯದಲ್ಲಿ ಭಾರತೀಯ ನಾಯಕ ಸೂರ್ಯಕುಮಾರ್ ಯಾದವ್ ಪಾಕಿಸ್ತಾನ ನಾಯಕ ಸಲ್ಮಾನ್ ಅಲಿ ಆಘಾ ಅವರೊಂದಿಗೆ ಹ್ಯಾಂಡ್‌ಶೇಕ್ ಮಾಡಲು ನಿರಾಕರಿಸಿದ್ದರು. ಈ ಘಟನೆ ವಿವಾದ ಹುಟ್ಟಿಕೊಳ್ಳಲು ಕಾರಣವಾಗಿತ್ತು. ಇದೀಗ ಆ ಪ್ರವೃತ್ತಿ ಬಾಂಗ್ಲಾದೇಶಕ್ಕೂ ಹರಡುತ್ತಿರುವಂತೆ ತೋರುತ್ತಿದೆ. ಈ ಘಟನೆಯು ಬಿಸಿಸಿಐ ಮತ್ತು ಬಿಸಿಬಿ ನಡುವೆ ಇತ್ತೀಚೆಗೆ ಹೆಚ್ಚುತ್ತಿರುವ ಉದ್ವಿಗ್ನತೆಯ ಪರಿಣಾಮವಾಗಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಕೋಲ್ಕತ್ತಾ ನೈಟ್ ರೈಡರ್ಸ್ ಇತ್ತೀಚೆಗೆ ಬಾಂಗ್ಲಾದೇಶದ ವೇಗದ ಬೌಲರ್ ಮುಸ್ತಾಫಿಜುರ್ ರೆಹಮಾನ್ ಅವರನ್ನು ಐಪಿಎಲ್‌ನಿಂದ ಹೊರಹಾಕಿತ್ತು. ಇದರಿಂದ ಕೆರಳಿದ ಬಾಂಗ್ಲಾ ಕ್ರಿಕೆಟ್ ಮಂಡಳಿ ಭದ್ರತೆ ಮತ್ತು ಇತರ ಕಳವಳಗಳನ್ನು ಉಲ್ಲೇಖಿಸಿ ಭಾರತದಲ್ಲಿ ನಡೆಯಲಿರುವ ಟಿ20 ವಿಶ್ವಕಪ್‌ಗೆ ತನ್ನ ತಂಡವನ್ನು ಕಳುಹಿಸಲು ಹಿಂದೇಟು ಹಾಕಿ ತನ್ನ ತಂಡದ ಪಂದ್ಯಗಳನ್ನು ಶ್ರೀಲಂಕಾಕ್ಕೆ ಸ್ಥಳಾಂತರಿಸಬೇಕೆಂದು ವಿನಂತಿಸಿತ್ತು.




## ಬಲಗೈ ಬದಲು ಎಡಗೈ ವೇಗಿಗೆ ಸ್ಥಾನ

ಭಾರತ ಮತ್ತು ನ್ಯೂಝಿಲೆಂಡ್ ನಡುವಣ ಮೂರನೇ ಏಕದಿನ ಪಂದ್ಯವು ಭಾನುವಾರ (ಜ.18) ನಡೆಯಲಿದೆ. ಇಂದೋರ್‌ನ ಹೋಲ್ಕರ್ ಸ್ಟೇಡಿಯಂನಲ್ಲಿ ಜರುಗಲಿರುವ ಈ ಪಂದ್ಯಕ್ಕಾಗಿ ಟೀಮ್ ಇಂಡಿಯಾ ಪ್ಲೇಯಿಂಗ್ ಇಲೆವೆನ್‌ನಲ್ಲಿ ಒಂದು ಬದಲಾವಣೆ ಕಂಡು ಬರುವುದು ಬಹುತೇಕ ಖಚಿತ. ಅದರಲ್ಲೂ ಬಲಗೈ ವೇಗಿಯನ್ನು ಹೊರಗಿಟ್ಟು ಎಡಗೈ ವೇಗದ ಬೌಲರ್‌ಗೆ ಸ್ಥಾನ ನೀಡುವ ಸಾಧ್ಯತೆ ಹೆಚ್ಚಿದೆ. ಏಕೆಂದರೆ ಈ ಸರಣಿಯ ಮೊದಲೆರಡು ಪಂದ್ಯಗಳಲ್ಲಿ ಕಣಕ್ಕಿಳಿದಿದ್ದ ಬಲಗೈ ವೇಗಿಗಳಿಂದ ನಿರೀಕ್ಷಿತ ಪ್ರದರ್ಶನ ಮೂಡಿಬಂದಿಲ್ಲ. ಅದರಲ್ಲೂ ಮೊಹಮ್ಮದ್ ಸಿರಾಜ್ ಹಾಗೂ ಪ್ರಸಿದ್ಧ್ ಕೃಷ್ಣ ವಿಕೆಟ್ ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ. ಹೀಗಾಗಿ ಮೂರನೇ ಪಂದ್ಯದಿಂದ ಇವರಿಬ್ಬರಲ್ಲಿ ಒಬ್ಬರನ್ನು ಕೈ ಬಿಡುವುದು ಖಚಿತ. ಇಲ್ಲಿ ಪ್ರಸಿದ್ಧ್ ಕೃಷ್ಣ ಅವರನ್ನು ಪ್ಲೇಯಿಂಗ್ ಇಲೆವೆನ್‌ನಿಂದ ಕೈ ಬಿಡುವ ಸಾಧ್ಯತೆ ಹೆಚ್ಚಿದೆ. ಅವರ ಬದಲಿಗೆ ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರನ್ನು ಆಡುವ ಬಳಗಕ್ಕೆ ಸೇರಿಕೊಳ್ಳಬಹುದು. ಈ ಮೂಲಕ ಟೀಮ್ ಇಂಡಿಯಾ ಮೂವರು ವೇಗಿಗಳೊಂದಿಗೆ ಕಣಕ್ಕಿಳಿಯಬಹುದು. ಅಂದರೆ ಮೂರನೇ ಪಂದ್ಯದಲ್ಲಿ ವೇಗಿಗಳಾಗಿ ಮೊಹಮ್ಮದ್ ಸಿರಾಜ್, ಹರ್ಷಿತ್ ರಾಣಾ ಹಾಗೂ ಅರ್ಷದೀಪ್ ಸಿಂಗ್ ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಿದೆ. ಅವರೊಂದಿಗೆ ನಿತೀಶ್ ಕುಮಾರ್ ರೆಡ್ಡಿ ಕೂಡ ಹೆಚ್ಚುವರಿ ವೇಗಿಯಾಗಿ ತಂಡದಲ್ಲಿ ಇರಲಿದ್ದಾರೆ. ಹಾಗೆಯೇ ಸ್ಪಿನ್ನರ್ ಆಗಿ ಕುಲ್ದೀಪ್ ಯಾದವ್ ಈ ಪಂದ್ಯದಲ್ಲೂ ಮುಂದುವರೆಯುವುದನ್ನು ನಿರೀಕ್ಷಿಸಬಹುದು. ಅದರಂತೆ ಟೀಮ್ ಇಂಡಿಯಾ ಪರ ಆರಂಭಿಕರಾಗಿ ಶುಭ್‌ಮನ್ ಗಿಲ್ ಹಾಗೂ ರೋಹಿತ್ ಶರ್ಮಾ ಕಣಕ್ಕಿಳಿದರೆ, ಮೂರನೇ ಕ್ರಮಾಂಕದಲ್ಲಿ ವಿರಾಟ್ ಕೊಹ್ಲಿ ಆಡಲಿದ್ದಾರೆ.



## ಹೀನಾಯವಾಗಿ ಸೋತ ಪಾಕಿಸ್ತಾನ



ಪಾಕಿಸ್ತಾನ ಅಂಡರ್ 19 ತಂಡವು ಅಂಡರ್ 19 ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ 37 ರನ್‌ಗಳ ಹೀನಾಯ ಸೋಲು ಅನುಭವಿಸಿದೆ. ಇಂಗ್ಲೆಂಡ್ ನೀಡಿದ 210 ರನ್ ಗುರಿ ಬೆನ್ನತ್ತಿದ ಪಾಕ್, ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದ 173 ರನ್‌ಗಳಿಗೆ ಆಲೌಟ್ ಆಯಿತು. ನಾಯಕ ಫರ್ಹಾನ್ ಯೂಸುಫ್ ಅವರ 65 ರನ್‌ಗಳ ಹೊರತಾಗಿಯೂ, ಅಗ್ರ ಕ್ರಮಾಂಕದ ಕುಸಿತ ತಂಡದ ಸೋಲಿಗೆ ಪ್ರಮುಖ ಕಾರಣವಾಯಿತು. ಮುಂದಿನ ಸುತ್ತಿಗೆ ಅರ್ಹತೆ ಪಡೆಯಲು ಪಾಕಿಸ್ತಾನ ಉಳಿದ ಎರಡು ಪಂದ್ಯಗಳನ್ನು ಗೆಲ್ಲಲೇಬೇಕು. ಅಂಡರ್ 19 ವಿಶ್ವಕಪ್‌ನಲ್ಲಿ ತನ್ನ ಮೊದಲ ಪಂದ್ಯವನ್ನು ಇಂಗ್ಲೆಂಡ್ ವಿರುದ್ಧ ಆಡಿದ್ದ ಪಾಕಿಸ್ತಾನ ತಂಡ ಹೀನಾಯ ಸೋಲು ಅನುಭವಿಸಿದೆ. ಹರಾರೆಯಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 210 ರನ್ ಕಲೆಹಾಕಿತು. ಈ ಗುರಿ ಬೆನ್ನಟ್ಟಿದ ಪಾಕಿಸ್ತಾನ ತಂಡ ಈ ಸಣ್ಣ ಗುರಿಯನ್ನು ಬೆನ್ನಟ್ಟಲು ಸಾಧ್ಯವಾಗಲಿದೆ 173 ರನ್‌ಗಳಿಗೆ ಆಲೌಟ್ ಆಗಿ 37 ರನ್‌ಗಳ ಅಂತರದಿಂದ ಸೋಲನುಭವಿಸಿತು. ಪಾಕಿಸ್ತಾನದ ಸೋಲಿಗೆ ತಂಡದ ಬ್ಯಾಟ್ಸ್‌ಮನ್‌ಗಳು ಪ್ರಮುಖ ಕಾರಣ ಎಂದರೆ ತಪ್ಪಾಗಲಾರದು. ವಿಶೇಷವಾಗಿ ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಪರಿಣಾಮಕಾರಿಯಾಗಲಿಲ್ಲ. ಸಮೀರ್ ಮಿನ್ಹಾಸ್, ಮೊಹಮ್ಮದ್ ಶಯಾನ್, ಉಸ್ಮಾನ್ ಖಾನ್, ಅಹ್ಮದ್ ಹುಸೇನ್ ಬಂದಷ್ಟೇ ವೇಗವಾಗಿ ಪೆವಿಲಿಯನ್ ಸೇರಿಕೊಂಡಿದ್ದು ತಂಡದ ಸೋಲಿಗೆ ಕಾರಣವಾಯಿತು. ಇಂಗ್ಲೆಂಡ್ ನೀಡಿದ 210 ರನ್‌ಗಳ ಗುರಿ ಬೆನ್ನಟ್ಟಿದ ಪಾಕಿಸ್ತಾನಕ್ಕೆ ಅತ್ಯಂತ ಕಳಪೆ ಆರಂಭ ಸಿಕ್ಕಿತು. ತಂಡದ ಅತ್ಯುತ್ತಮ ಬ್ಯಾಟ್ಸ್‌ಮನ್ ಸಮೀರ್ ಮಿನ್ಹಾಸ್ ನಾಲ್ಕನೇ ಓವರ್‌ನಲ್ಲಿಯೇ ಔಟಾದರು. ಸಮೀರ್ ಮಿನ್ಹಾಸ್ ಕೇವಲ 10 ರನ್ ಗಳಿಸಿ ವಿಕೆಟ್ ಒಪ್ಪಿಸಿದ್ದು ತಂಡದ ಇನ್ನಿಂಗ್ಸ್ ಕುಸಿಯುವಂತೆ ಮಾಡಿತು. ಮೊಹಮ್ಮದ್ ಶಯಾನ್ 7 ರನ್‌ಗಳಿಗೆ ಔಟಾದರೆ, ಉಸ್ಮಾನ್ ಖಾನ್ 6 ರನ್, ಅಹ್ಮದ್ ಹುಸೇನ್ 12 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ತಂಡದ ನಾಯಕ ಫರ್ಹಾನ್ ಯೂಸುಫ್ 65 ರನ್‌ಗಳ ಅದ್ಭುತ ಇನ್ನಿಂಗ್ಸ್ ಆಡಿದರಾದರೂ ತಂಡವನ್ನು ಗೆಲುವಿನ ದಡ ಮುಟ್ಟಿಸುವಲ್ಲಿ ವಿಫಲರಾದರು. ಇತ್ತ ಇಂಗ್ಲೆಂಡ್‌ನ ವೇಗಿಗಳಾದ ಅಲೆಕ್ಸ್ ಗ್ರೀನ್, ಜೇಮ್ಸ್ ಮಿಂಟೊ ಮತ್ತು ರಾಲ್ಫಿ ಆಲ್ಬರ್ಟ್ ತಲಾ 2 ವಿಕೆಟ್ ಪಡೆದು, ಪಾಕಿಸ್ತಾನವನ್ನು ಆಲೌಟ್ ಮಾಡುವಲ್ಲಿ ಯಶಸ್ವಿಯಾದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966